ಗುರುವಾರ, ಸೆಪ್ಟೆಂಬರ್ 22, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 263 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಎಸ್‌ಬಿಐ – ಜೂನಿಯರ್ ಅಸೋಸಿಯೇಟ್ ನೇಮಕಾತಿ ಪ್ರಕ್ರಿಯೆಯಲ್ಲಿ ಹೊಸ ನಿಯಮಗಳನ್ನು ಪರಿಚಯಿಸಲಾಗಿದ್ದು, ಈ ಕುರಿತ ವಿವರಣೆ ಇಲ್ಲಿದೆ.



ಆಳ-ಅಗಲ
ಅದಾನಿ ಸಂಪತ್ತು 15 ಪಟ್ಟು ಏರಿಕೆ
ಮೂನ್‌ಲೈಟಿಂಗ್: ವಿಪ್ರೊದ 300 ನೌಕರರು ವಜಾ 11
ಕರ್ನಾಟಕದಲ್ಲೂ ಇದ್ದವು ಚೀತಾ 5

ಸೆನ್ಸೆಕ್ಸ್ 59,456 ▼ | ನಿಫ್ಟಿ 17,718 ▼

‘ರೀ–ಡೂ ಸಿದ್ದರಾಮಯ್ಯ, ಇ.ಡಿ ಡಿಕೆಶಿ’ ಎದಿರೇಟಿನ ಅಭಿಯಾನ

‘ಪೇಸಿಎಂ’ ಅಭಿಯಾನ: ಬೊಮ್ಮಾಯಿ ಕಿಡಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಮಂಡಲ ಕಲಾಪ ನಡೆಯುತ್ತಿರುವಾಗಲೇ ‘ಪೇಸಿಎಂ– ಇಲ್ಲಿ ಶೇ 40 ಸ್ವೀಕರಿಸಲಾಗುವುದು’ ಎಂಬ ಶೀರ್ಷಿಕೆಯಡಿ ಕಾಂಗ್ರೆಸ್ ಆರಂಭಿಸಿರುವ ಅಭಿಯಾನ ಬುಧವಾರ ದೊಡ್ಡ ಸದ್ದು ಮಾಡಿತು.

‘ಇದು ರಾಜ್ಯದ ಹೆಸರು ಕೆಡಿಸುವ ಷಡ್ಯಂತ್ರ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಟುವಾಗಿ ಪ್ರತಿಕ್ರಿಯಿಸಿದರು.

ರಾಜ್ಯದಲ್ಲಿರುವ ಬಿಜೆಪಿ ಸರ್ಕಾರ ‘ಶೇ 40ರಷ್ಟು ಕಮಿಷನ್’ ಸರ್ಕಾರ ಎಂಬ ಅಭಿಯಾನವನ್ನು ಕಾಂಗ್ರೆಸ್ ನಡೆಸುತ್ತಿದೆ. ಅದರ ಮುಂದುವರಿದ ಭಾಗವಾಗಿ ಈ ಅಭಿಯಾನ ನಡೆದಿದೆ. ಬೆಂಗಳೂರಿನ ಪ್ರಮುಖ ಪ್ರದೇಶಗಳ ಗೋಡೆಗಳ ಮೇಲೆಲ್ಲ ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ಹೋಲುವ ಚಿತ್ರದ ಕ್ಯೂಆರ್ ಕೋಡ್ ಸಹಿತ ‘ಪೇಸಿಎಂ’ ಎಂದು ಬರೆದ ಭಿತ್ತಿಪತ್ರಗಳು ರಾರಾಜಿಸುತ್ತಿದ್ದವು. ಅದರ ಜತೆಗೆ ಮೊಬೈಲ್ ಸಂಖ್ಯೆಯನ್ನೂ ನೀಡಲಾಗಿತ್ತು.

‘ಪೇಟಿಎಂ’ ಮಾದರಿಯಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ರಾಜ್ಯ ಸರ್ಕಾರದ ವಿರುದ್ಧದ ದೂರುಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಘಟಕ ಇತ್ತೀಚೆಗೆ ಬಿಡುಗಡೆ ಮಾಡಿದ ‘ಶೇ40ಕಮಿಷನ್‌ಸರ್ಕಾರ’ ವೆಬ್‌ಸೈಟ್ ಕಾಣಿಸುತ್ತದೆ. ‘ಶೇ 40 ಸ್ಕ್ಯಾಮ್ ಸ್ಟಾರ್ಸ್’ ಎಂಬ ಪುಟ ತೆರೆದುಕೊಂಡು, ರೋಡ್ ಸ್ಕ್ಯಾಮ್, ಬಿಟ್‌ಕಾಯಿನ್ ಸ್ಕ್ಯಾಮ್, ಪಿಎಸ್‌ಐ ಸ್ಕ್ಯಾಮ್ ಎನ್ನುವ ಪುಟಗಳೂ ಬರುತ್ತದೆ. ಸ್ಕ್ಯಾನ್ ಮಾಡಿದ ತಕ್ಷಣ ‘ಅಭಿಯಾನಕ್ಕೆ ಸೇರ್ಪಡೆ ಆಗಿದ್ದೀರಿ’ ಎಂಬ ಸಂದೇಶವೂ ಬರುತ್ತದೆ.



‘ಪೇ ಸಿಎಂ’ ಎಂಬ ಘೋಷಣೆಯ ಭಿತ್ತಿಪತ್ರ ಹಾಗೂ ಸಿದ್ದರಾಮಯ್ಯ ಡಿ.ಕೆ.ಶಿವಕುಮಾರ್ ಭಿತ್ತಿಪತ್ರ

ನಗರಗಳಲ್ಲಿ ಅಂಟಿಸಿದ್ದ ಭಿತ್ತಿಪತ್ರದ ವಿಡಿಯೊ, ಫೋಟೋಗಳು ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದಂತೆ ಎಚ್ಚೆತ್ತುಕೊಂಡ ಸರ್ಕಾರ, ಅದನ್ನು ಕೂಡಲೇ ತೆರವು ಮಾಡುವಂತೆ ಸೂಚಿಸಿತು.

ಪೊಲೀಸ್ ಹಾಗೂ ಬಿಬಿಎಂಪಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಮುಖ್ಯಮಂತ್ರಿ ಬೊಮ್ಮಾಯಿ, ‘ರಾತ್ರಿಯೇ ಇದನ್ನು ಅಂಟಿಸಲಾಗಿದ್ದರೂ ತೆರವುಗೊಳಿಸುವ ಅಥವಾ ಪ್ರಕರಣ ದಾಖಲಿಸುವ ಕೆಲಸ ಏಕೆ ಮಾಡಲಿಲ್ಲ’ ಎಂದು ಕಟುವಾಗಿ ಪ್ರಶ್ನಿಸಿದರು ಎಂದು ಗೊತ್ತಾಗಿದೆ.

ತಕ್ಷಣವೇ ಎಚ್ಚೆತ್ತುಕೊಂಡ ಪೊಲೀಸರು, ಬಿಬಿಎಂಪಿ ಸಿಬ್ಬಂದಿ ಅವುಗಳನ್ನು ತೆರವುಗೊಳಿಸಿದರು. ಈ ಬಗ್ಗೆ ಟ್ವೀಟ್ ಮಾಡಿರುವ ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ, ಸರ್ಕಾರವು ‘ಪೇಸಿಎಂ’ ಭಿತ್ತಿಪತ್ರಗಳನ್ನು ತೆರವುಗೊಳಿಸುವ ಸಾಮರ್ಥ್ಯ ಹೊಂದಿರಬಹುದು. ಆದರೆ, ಅವರ ಭ್ರಷ್ಟಾಚಾರವನ್ನು ಕರ್ನಾಟಕದ ಜನರ ಎದುರು ಹೇಗೆ ಸಮರ್ಥಿಸಿಕೊಳ್ಳುತ್ತಾರೆ. ಮುಖ್ಯಮಂತ್ರಿ ಹುದ್ದೆಯೂ (₹2,500 ಕೋಟಿಗೆ) ಸೇರಿದಂತೆ ಪ್ರತಿಯೊಂದೂ ಕರ್ನಾಟಕದಲ್ಲಿ ಸೂಕ್ತ ಬೆಲೆಗೆ ಮಾರಾಟಕ್ಕಿದೆ’ ಎಂದು ಕುಟುಕಿದ್ದಾರೆ.

4ನೇ ಪುಟ ನೋಡಿ

ಹೆಸರು ಕೆಡಿಸಲು ಅಭಿಯಾನ: ಸಿ.ಎಂ

‘ನನ್ನ ಹಾಗೂ ಕರ್ನಾಟಕದ ಹೆಸರು ಕೆಡಿಸಲು ‘ಪೇಸಿಎಂ’ ಅಭಿಯಾನ ನಡೆಸಲಾಗುತ್ತಿದೆ. ಇಂತಹ ಸುಳ್ಳು ಅಭಿಯಾನ ನಡೆಸಲು ಎಲ್ಲರಿಗೂ ಬರುತ್ತದೆ’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಇದು ವ್ಯವಸ್ಥಿತವಾಗಿ ನಡೆಸಿರುವ ಷಡ್ಯಂತ್ರ. ಪ್ರಕರಣ ದಾಖಲು ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದು ಹೇಳಿದರು.

4ನೇ ಪುಟ ನೋಡಿ

ಜಾಲತಾಣದಲ್ಲಿ ಪ್ರತಿ ಅಭಿಯಾನ

ಪೇಸಿಎಂ ಅಭಿಯಾನ ಸದ್ದು ಮಾಡುತ್ತಿದ್ದಂತೆ ಇದಕ್ಕೆ ಪ್ರತಿಯಾಗಿ ‘ರೀ–ಡೂ ಸಿದ್ದರಾಮಯ್ಯ, ಇ.ಡಿ ಡಿಕೆಶಿ’ ಹೆಸರಿನಲ್ಲಿ ಮತ್ತೊಂದು ಅಭಿಯಾನವೂ ಸಾಮಾಜಿಕ ಜಾಲತಾಣಗಳಲ್ಲಿ ನಡೆಯಿತು. ಆದರೆ, ಇದು ತಮ್ಮದೇ ಅಭಿಯಾನ ಎಂದು ಬಿಜೆಪಿ ಹೇಳಿಕೊಳ್ಳಲಿಲ್ಲ.

4ನೇ ಪುಟ ನೋಡಿ

ಅದಾನಿ ಸಂಪತ್ತು ವರ್ಷದಲ್ಲಿ ₹ 5.88 ಲಕ್ಷ ಕೋಟಿ ಏರಿಕೆ

ಪ್ರತಿದಿನ ₹1,600 ಕೋಟಿಯಷ್ಟು ಸಂಪತ್ತು ಹೆಚ್ಚಳ

ಪ್ರಜಾವಾಣಿ ವಾರ್ತೆ


ಗೌತಮ್ ಅದಾನಿ

ಬೆಂಗಳೂರು: ಉದ್ಯಮಿ ಗೌತಮ್ ಅದಾನಿ ಮತ್ತು ಅವರ ಕುಟುಂಬದ ಸಂಪತ್ತಿನ ಮೌಲ್ಯವು ಕಳೆದ ಒಂದು ವರ್ಷದಲ್ಲಿ ಪ್ರತಿನಿತ್ಯ ₹ 1,600 ಕೋಟಿಯಷ್ಟು ಹೆಚ್ಚಾಗಿದೆ. ಒಂದು ವರ್ಷದಲ್ಲಿ ಅವರ ಸಂಪತ್ತು ₹ 5.88 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ. ಸಂಪತ್ತಿನ ಒಟ್ಟು ಮೌಲ್ಯವು ಕಳೆದ ಒಂದು ವರ್ಷದಲ್ಲಿ ಶೇಕಡ 116ರಷ್ಟು ಏರಿಕೆ ಕಂಡಿದೆ.

ಬುಧವಾರ ಬಿಡುಗಡೆ ಆಗಿರುವ ‘ಐಐಎಫ್‌ಎಲ್ ವೆಲ್ತ್ ಹುರೂನ್ ಇಂಡಿಯಾ ರಿಚ್ ಲಿಸ್ಟ್ 2022’ ವರದಿಯಲ್ಲಿ ಈ ವಿವರ ಇದೆ.

ವರದಿಯ ಪ್ರಕಾರ ಅದಾನಿ ಅವರು ಭಾರತದ ಅತ್ಯಂತ ಶ್ರೀಮಂತ ವ್ಯಕ್ತಿ. ಅದಾನಿ ಅವರು ಈ ಹೆಗ್ಗಳಿಕೆಗೆ ಪಾತ್ರರಾಗಿರುವುದು ಇದೇ ಮೊದಲು. ಅವರ ಸಂಪತ್ತಿನ ಒಟ್ಟು ಮೌಲ್ಯ ₹ 10.94 ಲಕ್ಷ ಕೋಟಿ. 2018ರಲ್ಲಿ ಅವರ ಸಂಪತ್ತಿನ ಮೌಲ್ಯವು ₹ 71,200 ಕೋಟಿ ಆಗಿತ್ತು.

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಅಧ್ಯಕ್ಷ ಮುಕೇಶ್ ಅಂಬಾನಿ ಅವರು ಭಾರತದ ಎರಡನೆಯ ಅತ್ಯಂತ ಶ್ರೀಮಂತ ವ್ಯಕ್ತಿ. 2021ರಲ್ಲಿ ಅಂಬಾನಿ ಅವರ ಸಂಪತ್ತಿನ ಮೌಲ್ಯವು ಅದಾನಿ ಅವರ ಸಂಪತ್ತಿನ ಮೌಲ್ಯಕ್ಕಿಂತ ₹ 2 ಲಕ್ಷ ಕೋಟಿಯಷ್ಟು ಹೆಚ್ಚಿತ್ತು. 2022ರಲ್ಲಿ ಅದಾನಿ ಅವರ ಸಂಪತ್ತಿನ ಮೌಲ್ಯವು ಅಂಬಾನಿ ಅವರ ಸಂಪತ್ತಿನ ಮೌಲ್ಯಕ್ಕಿಂತ ₹ 3 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ ಎಂದು ವರದಿಯು ತಿಳಿಸಿದೆ.

ಫೋಬ್ಸ್ ನಿಯತಕಾಲಿಕೆ ಸಿದ್ಧಪಡಿಸುವ ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಅದಾನಿ ಅವರು ಈಗ ಮೂರನೆಯ ಸ್ಥಾನದಲ್ಲಿದ್ದಾರೆ. ಅವರು ಕಳೆದ ವಾರದಲ್ಲಿ ಜಗತ್ತಿನ ಎರಡನೆಯ ಶ್ರೀಮಂತ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಕಿರು ಅವಧಿಗೆ ಪಾತ್ರರಾಗಿದ್ದರು.

‘2012ರಲ್ಲಿ ಅದಾನಿ ಅವರ ಸಂಪತ್ತಿನ ಮೌಲ್ಯವು ಅಂಬಾನಿ ಅವರ ಸಂಪತ್ತಿನ ಮೌಲ್ಯದ ಆರನೆಯ ಒಂದರಷ್ಟು ಮಾತ್ರ ಇತ್ತು. 10 ವರ್ಷಗಳಲ್ಲಿ ಅಂಬಾನಿ ಅವರನ್ನು ಅದಾನಿ ಶ್ರೀಮಂತಿಕೆಯಲ್ಲಿ ಮೀರಿಸುತ್ತಾರೆ ಎಂದು ಆಗ ಯಾರೂ ಊಹಿಸಿರಲಿಕ್ಕಿಲ್ಲ. ಇದು ದೇಶದ ಅರ್ಥ ವ್ಯವಸ್ಥೆಯ ರಾಚನಿಕ ಬದಲಾವಣೆ ಹಾಗೂ ಚೈತನ್ಯವನ್ನು ತೋರಿಸುತ್ತಿದೆ’ ಎಂದು ಹುರೂನ್ ಇಂಡಿಯಾ ಸಂಸ್ಥೆಯ ಮುಖ್ಯ ಸಂಶೋಧಕ ಅನಸ್ ರಹ್ಮಾನ್ ಜುನೈದ್ ಹೇಳಿದ್ದಾರೆ.

ಪರಿಶಿಷ್ಟ ಬಾಲಕನ ಕುಟುಂಬಕ್ಕೆ ನಿವೇಶನ ಮಂಜೂರು

ಉಳ್ಳೇರಹಳ್ಳಿಗೆ ಅಧಿಕಾರಿಗಳ ದಂಡು

ಪ್ರಜಾವಾಣಿ ವಾರ್ತೆ

ಮಾಲೂರು (ಕೋಲಾರ ಜಿಲ್ಲೆ): ದೇವರ ಗುಜ್ಜುಕೋಲು ಮುಟ್ಟಿದ ಪರಿಶಿಷ್ಟ ಜಾತಿ ಬಾಲಕನಿಗೆ ದಂಡ ವಿಧಿಸಿದ ಘಟನೆ ಬಹಿರಂಗವಾಗುತ್ತಿದ್ದಂತೆಯೇ ರಾಜಕಾರಣಿಗಳು ಮತ್ತು ಹಿರಿಯ ಅಧಿಕಾರಿಗಳ ದಂಡು ಬುಧವಾರ ಉಳ್ಳೇರಹಳ್ಳಿಗೆ ಧಾವಿಸಿದೆ. ಸಂತ್ರಸ್ತ ಕುಟುಂಬಕ್ಕೆ ನೆರವಿನ ಮಹಾಪೂರ ಹರಿದು ಬಂದಿದೆ.

ಸ್ಥಳೀಯ ಪಂಚಾಯಿತಿಯಿಂದ ಕುಟುಂಬಕ್ಕೆ ನಿವೇಶನ ದಾಖಲೆ ಪತ್ರ ಕೊಟ್ಟು, ಮನೆ ನಿರ್ಮಿಸಿ ಕೊಡುವ ಭರವಸೆ ನೀಡಲಾಯಿತು. ಬಾಲಕನ ತಾಯಿ ಶೋಭಾ ಅವರಿಗೆ ಹೊರಗುತ್ತಿಗೆಯಲ್ಲಿ ಸರ್ಕಾರಿ ಹಾಸ್ಟೆಲ್‌ನಲ್ಲಿ ಅಡುಗೆ ಕೆಲಸ, ಬಾಲಕನ ವಿದ್ಯಾಭ್ಯಾಸದ ಖರ್ಚು ಭರಿಸುವ ಭರವಸೆಯನ್ನು ಜಿಲ್ಲಾಡಳಿತ ನೀಡಿತು. ಕುಟುಂಬಕ್ಕೆ ಸಮಾಜ ಕಲ್ಯಾಣ ಇಲಾಖೆ ₹25 ಸಾವಿರ ಮತ್ತು ಸಂಸದ ಮುನಿಸ್ವಾಮಿ ₹50 ಸಾವಿರ ನೀಡಿದರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ. ದೇವರಾಜ್ ಅಧಿಕಾರಿಗಳ ತಂಡದೊಂದಿಗೆ ಬೆಳಗ್ಗೆಯೇ ಗ್ರಾಮಕ್ಕೆ ತೆರಳಿ ಕುಟುಂಬಕ್ಕೆ ಧೈರ್ಯ ತುಂಬಿದರು. ಈ ಕುಟುಂಬಕ್ಕೆ ಯಾವುದೇ ತೊಂದರೆ ನೀಡದಂತೆ ಗ್ರಾಮಸ್ಥರಿಗೆ ಎಚ್ಚರಿಕೆಯನ್ನೂ ನೀಡಿ ಬಂದರು.

5ನೇ ಪುಟ ನೋಡಿ

‘ಪ್ರಜಾವಾಣಿ’ ವರದಿ ಪ್ರಸ್ತಾಪ

ಪರಿಶಿಷ್ಟ ಜಾತಿ ಬಾಲಕನ ಕುಟುಂಬಕ್ಕೆ ದಂಡ ವಿಧಿಸಿದ ಘಟನೆ ಹಿನ್ನೆಲೆಯಲ್ಲಿ ಬುಧವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ‘ಪ್ರಜಾವಾಣಿ’ ವರದಿ ಪ್ರಸ್ತಾಪವಾಯಿತು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ನಿಯಂತ್ರಣಹಾಗೂ ಜಾಗೃತಿ ಸಮಿತಿ ಸಭೆಯಲ್ಲಿ ಸದಸ್ಯರು ‘ಪ್ರಜಾವಾಣಿ’ ವರದಿ ಪ್ರಸ್ತಾಪಿಸಿ, ಕಠಿಣ ಕ್ರಮಕ್ಕೆ ಆಗ್ರಹಿಸಿದರು. ಆರೋಪಿಗಳನ್ನು ಕೂಡಲೇ ಬಂಧಿಸಲು ಒತ್ತಾಯಿಸಿದರು.

ದ್ವೇಷ ಭಾಷಣ: ಸುಪ್ರೀಂ ಕೋರ್ಟ್ ಪ್ರಶ್ನೆ

ಕೇಂದ್ರ ಏಕೆ ಮೂಕ ಪ್ರೇಕ್ಷಕನಂತಿದೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ದ್ವೇಷ ಭಾಷಣದ ವಿಚಾರದಲ್ಲಿ ಮೂಕ ಪ್ರೇಕ್ಷಕನಂತೆ ಏಕೆ ವರ್ತಿಸುತ್ತಿದ್ದೀರಿ’ ಎಂದು ಸುಪ್ರೀಂ ಕೋರ್ಟ್ ಬುಧವಾರ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದೆ.

ದ್ವೇಷ ಭಾಷಣ ಹಾಗೂ ವದಂತಿ ಹರಡುವಿಕೆ ನಿಯಂತ್ರಿಸಲು ನಿರ್ದಿಷ್ಟ ಕಾನೂನು ರೂಪಿಸುವಂತೆ ಕೋರಿ ಬಿಜೆಪಿ ಮುಖಂಡ ಹಾಗೂ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಸೇರಿದಂತೆ ಇತರರು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಹೃಷಿಕೇಶ್ ರಾಯ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಇವುಗಳ ವಿಚಾರಣೆ ನಡೆಸಿತು.

ಮುಖ್ಯವಾಹಿನಿಯ ಸುದ್ದಿವಾಹಿನಿಗಳೇ ದ್ವೇಷ ಭಾಷಣ ಹರಡುವಂತಹ ಕಾರ್ಯಕ್ರಮಗಳನ್ನು ನಡೆಸುತ್ತಿರುವುದನ್ನು ಪ್ರಸ್ತಾಪಿಸಿದ ನ್ಯಾಯಪೀಠ ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿತು. ‘ದೇಶವು ಎತ್ತ ಸಾಗುತ್ತಿದೆ. ಈ ವಿಚಾರವನ್ನು ಕ್ಷುಲ್ಲಕವೆಂದು ನೀವೇಕೆ ಪರಿಗಣಿಸಿದ್ದೀರಿ’ ಎಂದು ಕೇಂದ್ರದ ವಿರುದ್ಧ ಕಿಡಿಕಾರಿತು.

‘ದ್ವೇಷ ಭಾಷಣ ಇಡೀ ದೇಶವನ್ನೇ ವಿಷಪೂರಿತಗೊಳಿಸುತ್ತದೆ. ಅದಕ್ಕೆ ಆಸ್ಪದ ನೀಡಲಾಗದು. ರಾಜಕೀಯ ಪಕ್ಷಗಳು ಬರುತ್ತವೆ ಹೋಗುತ್ತವೆ. ಆದರೆ ರಾಷ್ಟ್ರ ಮತ್ತು ಮುಕ್ತ ಪತ್ರಿಕಾ ಸಂಸ್ಥೆಗಳು ಶಾಶ್ವತವಾಗಿ ಉಳಿಯುತ್ತವೆ. ನಮಗೆ ನಿಜವಾದ ಸ್ವಾತಂತ್ರ್ಯ ಬೇಕು. ಆ ನಿಟ್ಟಿನಲ್ಲಿ ಸರ್ಕಾರವು ನಿರ್ದಿಷ್ಟ ನಿಲುವು ತಳೆಯಲು ಮುಂದಾಗಬೇಕು’ ಎಂದು ನ್ಯಾಯಪೀಠ ಹೇಳಿತು.

‘ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಇದೆಲ್ಲಾ ನಡೆಯುತ್ತಿದೆ. ಯಾರೂ ಅವರನ್ನು ಹೊಣೆಗಾರರನ್ನಾಗಿ ಮಾಡದಿರುವುದು ಬೇಸರದ ಸಂಗತಿ. ಅಭಿವ್ಯಕ್ತಿ ಸ್ವಾತಂತ್ರ್ಯವು ವೀಕ್ಷಕರ ಹಕ್ಕನ್ನೂ ಒಳಗೊಂಡಿದೆ. ಸಾಂಸ್ಥಿಕ ಕಾರ್ಯವಿಧಾನ ಜಾರಿಯಲ್ಲಿರುವವರೆಗೂ ಜನ ಇದೇ ರೀತಿ ಮುಂದುವರಿಯುತ್ತಾರೆ. ಇದಕ್ಕೆ ನಿರ್ದಿಷ್ಟ ಕಾನೂನಿನ ಚೌಕಟ್ಟು ರೂಪಿಸಬೇಕು’ ಎಂದು ಪೀಠ ತಿಳಿಸಿತು.

‘ದ್ವೇಷ ಭಾಷಣದ ವಿಚಾರವಾಗಿ ನ್ಯಾಯಾಲಯವು ಜುಲೈ 21ರಂದು ಆದೇಶ ನೀಡಿತ್ತು. ಈ ಸಂಬಂಧ ಈವರೆಗೆ 14 ರಾಜ್ಯಗಳಷ್ಟೇ ಪ್ರತಿಕ್ರಿಯೆ ಸಲ್ಲಿಸಿವೆ’ ಎಂದು ಕೇಂದ್ರವು ನ್ಯಾಯಪೀಠಕ್ಕೆ ತಿಳಿಸಿತು.


ಮಾತು ‘ಮ್ಯೂಟ್’

‘ಪತ್ರಿಕಾ ಸ್ವಾತಂತ್ರ್ಯ ಬಹುಮುಖ್ಯವಾದುದು. ಹೀಗಿದ್ದರೂ ನಿರ್ಬಂಧದ ಗೆರೆಯನ್ನು ಎಲ್ಲಿ ಎಳೆಯಬೇಕು ಎಂಬುದು ನಮಗೆ ಗೊತ್ತಿರಬೇಕು. ಈಗಂತೂ ನಿರೂಪಕರು ಕಾರ್ಯಕ್ರಮದಲ್ಲಿ ಭಾಗವಹಿಸುವ ಅತಿಥಿಗಳಿಗೆ ಮಾತನಾಡುವುದಕ್ಕೇ ಅವಕಾಶ ಕೊಡುವುದಿಲ್ಲ. ಅವರ ಮಾತನ್ನು ‘ಮ್ಯೂಟ್’ ಮಾಡಿಬಿಡುತ್ತಾರೆ’ ಎಂದು ಟಿ.ವಿ. ವಾಹಿನಿಗಳ ಹೆಸರು ಪ್ರಸ್ತಾಪಿಸದೆಯೇ ನ್ಯಾಯಪೀಠ ಚಾಟಿ ಬೀಸಿತು.

ಒಳ ಪುಟಗಳು

ಭೂಕಬಳಿಕೆ: ಒತ್ತುವರಿ ಗ್ರಾಮೀಣರು ನಿರಾಳ 4
ಕೃಷ್ಣಾ: ಪ್ರತ್ಯೇಕ ಪೀಠಕ್ಕೆ ರಾಜ್ಯ ಒತ್ತಡ 7
ಎಐಸಿಸಿ ಅಧ್ಯಕ್ಷ ಸ್ಥಾನ: ರಾಹುಲ್ ಗಾಂಧಿ ಮನವರಿಕೆಗೆ ಕಸರತ್ತು 10

ಪಿ.ಎಂ ಕೇರ್ಸ್‌ಗೆ ರತನ್ ಟಾಟಾ, ಸುಧಾ ಮೂರ್ತಿ


ರತನ್ ಟಾಟಾ


ಸುಧಾ ಮೂರ್ತಿ

ನವದೆಹಲಿ (ಪಿಟಿಐ): ‘ತುರ್ತು ಪರಿಸ್ಥಿತಿಗಳಲ್ಲಿ ನಾಗರಿಕರಿಗೆ ನೆರವು ಮತ್ತು ಪರಿಹಾರ ಕಲ್ಪಿಸುವ ಪಿಎಂ ಕೇರ್ಸ್ ನಿಧಿಯ ಟ್ರಸ್ಟಿಗಳಾಗಿ ಟಾಟಾ ಸನ್ಸ್ ಮುಖ್ಯಸ್ಥ ರತನ್ ಟಾಟಾ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಟಿ.ಥಾಮಸ್, ಲೋಕಸಭೆಯ ಮಾಜಿ ಉಪ ಸಭಾಧ್ಯಕ್ಷ ಕರಿಯಾ ಮುಂಡಾ ಅವರನ್ನು ನಾಮನಿರ್ದೇಶನ ಮಾಡಲಾಗಿದೆ’ ಎಂದು ಪ್ರಧಾನ ಮಂತ್ರಿಯವರ ಕಾರ್ಯಾಲಯ (ಪಿಎಂಒ) ಬುಧವಾರ ತಿಳಿಸಿದೆ.

‘ಇನ್ಫೊಸಿಸ್ ಫೌಂಡೇಷನ್‌ನ ಸುಧಾ ಮೂರ್ತಿ, ಮಾಜಿ ಸಿಎಜಿ ರಾಜೀವ್ ಮೆಹರಿಷಿ, ಟೀಚ್ ಫಾರ್ ಇಂಡಿಯಾ ಸಂಸ್ಥೆಯ ಸಹಸ್ಥಾಪಕ ಆನಂದ ಶಾ ಸೇರಿದಂತೆ ಕೆಲವು ಗಣ್ಯರನ್ನು ಪಿ.ಎಂ ಕೇರ್ಸ್ ಸಲಹಾ ಮಂಡಳಿಗೆ ನಾಮನಿರ್ದೇಶನ ಮಾಡುವ ಕುರಿತು ನಿರ್ಣಯವನ್ನು ಟ್ರಸ್ಟ್ ಕೈಗೊಂಡಿದೆ.

ಕೊರೊನಾ ಸಮಯದಲ್ಲಿ ಪಿಎಂ ಕೇರ್ಸ್‌ಗೆ ಜನರು ಉದಾರವಾಗಿ ದೇಣಿಗೆ ನೀಡಿದ್ದಕ್ಕೆ ಪ್ರಧಾನಿ ಸಭೆಯಲ್ಲಿ ಕೃತಜ್ಞತೆ ಸಲ್ಲಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



50 ಹೊಸ ಸರ್ಕಾರಿ ಪಿಯು ಕಾಲೇಜಿಗೆ ಅನುಮತಿ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 50 ಸರ್ಕಾರಿ ಪದವಿಪೂರ್ವ ಕಾಲೇಜುಗಳ ಆರಂಭಿಸಲು ಸರ್ಕಾರ ಅನುಮೋದನೆ ನೀಡಿದೆ.

2022–23ನೇ ಸಾಲಿನಲ್ಲಿ 46 ಹೊಸ ಕಾಲೇಜುಗಳ ಮಂಜೂರಾತಿಗೆ ಅನುಮತಿ ಕೋರಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಸ್ತಾವ ಸಲ್ಲಿಸಿತ್ತು. ಅದರ ಜತೆಗೆ ಮತ್ತೆ 4 ಕಾಲೇಜುಗಳನ್ನು ಸೇರಿಸಿ, 50 ಕಾಲೇಜುಗಳಿಗೆ ಸರ್ಕಾರ ಅನುಮತಿ ನೀಡಿದೆ.

ಬಿ.ಪ್ಯಾಕ್ ಸಂಸ್ಥೆಯಿಂದ ನಾಗರಿಕ ಸಮೀಕ್ಷಾ ವರದಿ ಪ್ರಕಟ

ಮಹದೇವಪುರ: ಅವ್ಯವಸ್ಥೆಯ ಆಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯದ ವಾರ್ಡ್‌ಗಳಲ್ಲಿ ನಾಗರಿಕ ಸೇವೆ ಮತ್ತು ಸೌಲಭ್ಯಗಳು ಕಳಪೆ ಗುಣಮಟ್ಟದಿಂದ ಕೂಡಿವೆ. ರಾಜ–ರಾಜೇಶ್ವರಿನಗರ ವಲಯ ಹೆಚ್ಚು ತೃಪ್ತಿಕರವಾಗಿದೆ ಎಂದು ಬಿ.ಪ್ಯಾಕ್ ನಾಗರಿಕ ಸಮೀಕ್ಷಾ ವರದಿಯಿಂದ ತಿಳಿದುಬಂದಿದೆ.

ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರೇವತಿ ಅಶೋಕ್ ಬುಧವಾರ ವರದಿ ಬಿಡುಗಡೆಗೊಳಿಸಿ ಮಾತನಾಡಿದರು. 'ಬಿ.ಪ್ಯಾಕ್ ಸಂಸ್ಥೆಯು ಫೆಬ್ರುವರಿ–ಮೇ ಅವಧಿಯಲ್ಲಿ ನಾಗರಿಕ ಸೇವೆಗಳ ಆದ್ಯತೆಗಳು ಮತ್ತು ಸೇವಾ ಗುಣಮಟ್ಟದ ಬಗ್ಗೆ ನಾಗರಿಕ ಗ್ರಹಿಕೆ ಕುರಿತು, ಬಿಬಿಎಂಪಿ ವ್ಯಾಪ್ತಿಯ 198 ವಾರ್ಡ್‌ಗಳ ಪೈಕಿ 186 ವಾರ್ಡ್‌ಗಳನ್ನು 8 ವಲಯಗಳನ್ನಾಗಿ ವಿಂಗಡಿಸಿ 8,405 ಜನರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿತ್ತು. ಇದರಲ್ಲಿ ಮಹದೇವಪುರ ವಲಯ ಅವ್ಯವಸ್ಥೆಯ ಆಗರವಾಗಿದೆ ಎಂದು ಜನ ಅಸಮಾಧಾನ' ವ್ಯಕ್ತಪಡಿಸಿದ್ದಾರೆ ಎಂದು ಮಾಹಿತಿ ನೀಡಿದರು.

'ಈ ಸಮೀಕ್ಷೆಯಲ್ಲಿ ನಾಗರಿಕ ಜಾಗೃತಿ ಮತ್ತು ಭಾಗವಹಿಸುವಿಕೆ (ಪಾಲಿಕೆ ವಾರ್ಡ್ ಸಂಬಂಧಿತ), ಆಡಳಿತ ಮತ್ತು ನಾಗರಿಕ ಸೌಕರ್ಯಗಳ ತೃಪ್ತಿಯ ಮಟ್ಟ ಮತ್ತು ಪಾಲಿಕೆ ಚುನಾವಣೆ ಎಂಬ ಮೂರು ವಿಭಾಗಗಳಲ್ಲಿ ಪ್ರಶ್ನೆಗಳನ್ನು ಕೇಳಲಾಗಿತ್ತು. 2015–20ರ ಅವಧಿಯಲ್ಲಿ ಪಾಲಿಕೆ ವಾರ್ಡ್ ಸದಸ್ಯರ ಬಗ್ಗೆ ಶೇ 85ರಷ್ಟು ಜನರಿಗೆ ಅರಿವಿರುವುದು ಗೊತ್ತಾಗಿದೆ. ಈ ಅವಧಿಯಲ್ಲಿ ಸದಸ್ಯರು ಮಾಡಿದ ಕೆಲಸಗಳಿಂದ ಶೇ 35ರಷ್ಟು ಜನ ತೃಪ್ತರಾಗಿದ್ದಾರೆ' ಎಂದು ತಿಳಿಸಿದರು.

'ಪಾಲಿಕೆ ಮಾಜಿ ಸದಸ್ಯರು ವಾರ್ಡ್‌ಗಳಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡಿದ ಉದಾಹರಣೆಗಳಿವೆ ಎಂದು ಶೇಕಡಾ 57ರಷ್ಟು ಜನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶೇಕಡಾ 70ರಷ್ಟು ಜನ ವಾರ್ಡ್ ಸಮಿತಿಗಳು ಪರಿಣಾಮಕಾರಿಯಾಗಿವೆ ಎಂದರೆ, ಶೇ 47ರಷ್ಟು ಜನರು ಇದರ ಬಗ್ಗೆ ತಿಳಿದಿಲ್ಲ ಎಂದಿದ್ದಾರೆ. ಶೇ 23ರಷ್ಟು ಜನ ವಾರ್ಡ್ ಸಮಿತಿಗಳು ಸರಿಯಾಗಿ ನಡೆಯುತ್ತಿರಲಿಲ್ಲ ಎಂದು ತಿಳಿಸಿದ್ದಾರೆ' ಎಂದರು.



ಬಿ.ಪ್ಯಾಕ್ ಸಂಸ್ಥೆಯಿಂದ ನಾಗರಿಕ ಸಮೀಕ್ಷಾ ವರದಿ ಬಿಡುಗಡೆಗೊಳಿಸಲಾಯಿತು. (ಎಡದಿಂದ) ಹರ್ಷಿತಾ ವೆಂಕಟೇಶ್, ಎಸ್‌ಆರ್ ಶರತ್, ಆನಂದ್ ಗುಂಡೂರಾವ್, ರೇವತಿ ಅಶೋಕ್, ಪೂಜಾ ಪಟೇಲ್ ಇದ್ದಾರೆ.

'ಹಿಂದಿನ ಚುನಾವಣೆಯಲ್ಲಿ ಶೇಕಡಾ 88ರಷ್ಟು ಜನ ಮತ ಚಲಾಯಿಸಿದ್ದಾರೆ. ಶೇಕಡಾ 40ರಷ್ಟು ಜನ ಸ್ಥಳೀಯರು ಚುನಾವಣೆಯಲ್ಲಿ ಮತ ಚಲಾಯಿಸಲು ಗುರುತಿನ ಚೀಟಿ ಹೊಂದಿರಲಿಲ್ಲ. ಮುಂಬರುವ ಬಿಬಿಎಂಪಿ ಚುನಾವಣೆಯಲ್ಲಿ ಶೇಕಡಾ 93ರಷ್ಟು ಜನ ಮತ ಚಲಾಯಿಸಯತ್ತೇವೆ' ಎಂದು ಸಮೀಕ್ಷೆಯಿಂದ ತಿಳಿದುಬಂದಿದೆ ಎಂದು ಹೇಳಿದರು.

ಬಿಬಿಎಂಪಿ ಆಡಳಿತ ಬಗ್ಗೆ ಶೇ 57ರಷ್ಟು ಜನರಲ್ಲಿ ಅತೃಪ್ತಿ

ಪಾಲಿಕೆಯ ಆಡಳಿತ ಮತ್ತು ನಾಗರಿಕ ಸೌಕರ್ಯಗಳು ಸಮರ್ಪಕವಾಗಿಲ್ಲ ಎಂದು ಶೇಕಡಾ 57ರಷ್ಟು ಜನ ಹೇಳಿದ್ದರೆ, ಶೇಕಡಾ 30ರಷ್ಟು ಜನ ನಗರದಲ್ಲಿರುವ ರಸ್ತೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶೇಕಡಾ 37ರಷ್ಟು ಜನ ಉದ್ಯಾನ ಮತ್ತು ಆಟದ ಮೈದಾನಗಳ ನಿರ್ವಹಣೆ ಕುರಿತು ತೃಪ್ತಿ ಹೊಂದಿದ್ದಾರೆ. ಶೇಕಡಾ 63ರಷ್ಟು ಮಂದಿ ಅತೃಪ್ತರಾಗಿದ್ದಾರೆ. ಕೆರೆಗಳ ಅಭಿವೃದ್ಧಿ ಮತ್ತು ಪುನರುಜ್ಜೀವಗೊಳಿಸುವ ಕೆಲಸದ ಕುರಿತು 46ರಷ್ಟು ಜನ ತೃಪ್ತರಾಗಿದ್ದಾರೆ ಎಂದು ಬಿ.ಪ್ಯಾಕ್ ಸದಸ್ಯ ಆನಂದ ಗುಂಡೂರಾವ್ ತಿಳಿಸಿದರು.

ವಾರ್ಡ್‌ಗಳಲ್ಲಿರುವ ಐದು ಪ್ರಮುಖ ಸಮಸ್ಯೆಗಳ ಕುರಿತು ಪ್ರಶ್ನೆಗಳನ್ನು ಕೇಳಲಾಗಿತ್ತು. ರಸ್ತೆ ನಿರ್ಮಾಣ ಮತ್ತು ನಿರ್ವಹಣೆ, ರಸ್ತೆಗಳ–ಹೊಂಡಗಳ ನಿರ್ವಹಣೆಗೆ ಆದ್ಯತೆ. ಕುಡಿಯುವ ನೀರು, ಕಸ ತೆಗೆಯುವಿಕೆ ಮತ್ತು ಘನತ್ಯಾಜ್ಯ ನಿರ್ವಹಣೆ, ತ್ಯಾಜ್ಯ ನೀರು ನಿರ್ವಹಣೆ, ಸಾರ್ವಜನಿಕ ಶೌಚಾಲಯ ವ್ಯವಸ್ಥೆ ಬಗ್ಗೆ ಅಸಮಾಧಾನ ವ್ಯಕ್ತಡಿಸಿದ್ದಾರೆ ಎಂದರು.

ಜೆ.ಎಚ್. ಪಟೇಲ್ ಪ್ರಶಸ್ತಿಗೆ ಎಸ್.ಕೆ. ಕಾಂತಾ ಆಯ್ಕೆ



ಬೆಂಗಳೂರು: ವಿ.ಸೋಮಣ್ಣ ಪ್ರತಿಷ್ಠಾನದ ವತಿಯಿಂದ ನೀಡುವ 2022ನೇ ಸಾಲಿನ ಜೆ.ಎಚ್. ಪಟೇಲ್ ಪ್ರಶಸ್ತಿಗೆ ಸಮಾಜವಾದಿ ಚಿಂತಕ ಮತ್ತು ಮಾಜಿ ಸಚಿವ ಎಸ್.ಕೆ. ಕಾಂತಾ ಆಯ್ಕೆಯಾಗಿದ್ದಾರೆ.

ಪ್ರತಿಷ್ಠಾನದ ಅಧ್ಯಕ್ಷರಾದ ಶೈಲಜಾ ಸೋಮಣ್ಣ ಅವರನ್ನು ಒಳಗೊಂಡ ಸಮಿತಿಯು 2022ನೇ ಸಾಲಿನ ಜೆ.ಎಚ್. ಪಟೇಲ್ ಪ್ರಶಸ್ತಿಗೆ ಎಸ್.ಕೆ. ಕಾಂತಾ ಅವರನ್ನು ಆಯ್ಕೆ ಮಾಡಿದೆ. ಅಕ್ಟೋಬರ್ 1 ರಂದು ಬೆಂಗಳೂರಿನ ಭಾರತೀಯ ವಿದ್ಯಾ ಭವನದಲ್ಲಿ ನಡೆಯುವ ಜೆ.ಎಚ್. ಪಟೇಲ್‌ರ ಜನ್ಮದಿನದಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ಫಲಕ ಮತ್ತು ₹50,000 ಗೌರವಧನ ಒಳಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

29ಕ್ಕೆ ಮತದಾರರ ಅಂತಿಮ ಪಟ್ಟಿ

ಬೆಂಗಳೂರು: ಬಿಬಿಎಂಪಿ ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕವನ್ನು ರಾಜ್ಯ ಚುನಾವಣೆ ಆಯೋಗ ಸೆ.29ಕ್ಕೆ ಮುಂದೂಡಿದೆ.

ರಾಜ್ಯ ಚುನಾವಣಾ ಆಯೋಗದ ಜುಲೈ 29ರ ಆದೇಶದಂತೆ ಸೆ.22ರಂದು ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಬೇಕಾಗಿತ್ತು. ಚುನಾವಣೆ ಆಯೋಗ ಸೆ.20ರಂದು ಆದೇಶ ಹೊರಡಿಸಿ ಸೆ.29ರಂದು ಪ್ರಕಟಣೆ ದಿನಾಂಕವನ್ನು ಮರುನಿಗದಿ ಮಾಡಿದೆ ಎಂದು ಬಿಬಿಎಂಪಿಯ ಆಡಳಿತ ವಿಭಾಗದ ವಿಶೇಷ ಆಯುಕ್ತರು ತಿಳಿಸಿದ್ದಾರೆ.

‘ಸೈಮಾ ಅವಾರ್ಡ್’ ಪಾರ್ಟಿ: ಆಯೋಜಕರ ವಿರುದ್ಧ ಎಫ್‌ಐಆರ್

ಬೆಂಗಳೂರು: ನಗರದಲ್ಲಿ ನಡೆದಿದ್ದ ದಕ್ಷಿಣ ಭಾರತದ ಅಂತರರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ (ಸೈಮಾ ಅವಾರ್ಡ್) ಪ್ರದಾನ ಸಮಾರಂಭದ ಬಳಿಕ ನಗರದ ಜೆಡಬ್ಲ್ಯು ಹೋಟೆಲ್‌ನಲ್ಲಿ ನಿಯಮ ಉಲ್ಲಂಘಿಸಿ, ರಾತ್ರಿ 3.30ರ ತನಕ ಪಾರ್ಟಿ ಆಯೋಜಿಸಿದ್ದು, ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಅರಮನೆ ಮೈದಾನದಲ್ಲಿ ಸೆ.10 ಹಾಗೂ 11ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆದಿತ್ತು. ಈ ಅದ್ದೂರಿ ಸಮಾರಂಭಕ್ಕೆ ದಕ್ಷಿಣ ಭಾರತದ ಚಿತ್ರರಂಗದ ತಾರಾ ಬಳಗವೇ ಬಂದಿತ್ತು. ಸೆ.11ರಂದು ವಿಠಲ್ ಮಲ್ಯ ರಸ್ತೆಯಲ್ಲಿರುವ ಹೋಟೆಲ್‌ನಲ್ಲಿ ಆಯೋಜಿಸಿದ್ದ ಪಾರ್ಟಿಯಲ್ಲಿ ನಿಯಮ ಉಲ್ಲಂಘಿಸಿ ಪಾರ್ಟಿ ಆಯೋಜನೆ ಮಾಡಲಾಗಿದ್ದು, ದೂರು ದಾಖಲು ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ರಾತ್ರಿ 12 ಗಂಟೆಯ ವೇಳೆಗೆ ಇನ್‌ಸ್ಪೆಕ್ಟರ್ ಚೈತನ್ಯ ಅವರು ಹೋಟೆಲ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿ 1 ಗಂಟೆ ಒಳಗಾಗಿ ಪಾರ್ಟಿ ಮುಗಿಸಲು ಸೂಚಿಸಿದ್ದರು. ಆದರೆ, ರಾತ್ರಿ 3.30ರ ತನಕ ಹಾಡು, ನೃತ್ಯ ನಡೆಸಿ ನಿಯಮ ಉಲ್ಲಂಘಿಸಲಾಗಿತ್ತು. ಹೋಟೆಲ್‌ನ ವ್ಯವಸ್ಥಾಪಕ ಹಾಗೂ ಪಾರ್ಟಿ ಆಯೋಜಕರ ವಿರುದ್ಧ ಎಫ್‌ಐಆರ್ ದಾಖಲಾಗಿದೆ’ ಎಂದು ಮೂಲಗಳು ಹೇಳಿವೆ.

ಈ ಪಾರ್ಟಿಯಲ್ಲಿ ರಾಕಿಂಗ್ ಸ್ಟಾರ್ ಯಶ್, ಅಭಿಷೇಕ್ ಅಂಬರೀಷ್ ಸಹ ಇದ್ದರು. ಆ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಟೆಂಡರ್ ಪ್ರಕ್ರಿಯೆ ಆರಂಭ; ಅಕ್ಟೋಬರ್ 3ನೇ ವಾರದಿಂದ ಜಾರಿ ಸಾಧ್ಯತೆ

723 ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಎಂಟೂ ವಲಯಗಳಲ್ಲಿ ಅಕ್ಟೋಬರ್‌ನಲ್ಲಿ ‘ಸ್ಮಾರ್ಟ್ ಪಾರ್ಕಿಂಗ್ ಸಲ್ಯೂಷನ್’ ಹೆಸರಿನಲ್ಲಿ ‘ಪಾವತಿ ಪಾರ್ಕಿಂಗ್’ ವ್ಯವಸ್ಥೆ ಜಾರಿಗೆ ಬರಲಿದೆ. ಇದಕ್ಕಾಗಿ ಟೆಂಡರ್ ಕರೆಯಲಾಗಿದ್ದು, ಒಟ್ಟಾರೆ 723 ರಸ್ತೆಗಳಲ್ಲಿ ವಾಹನ ನಿಲುಗಡೆಗೆ ಶುಲ್ಕ ನೀಡಬೇಕಾಗುತ್ತದೆ.

ರಾಜ್ಯ ಸರ್ಕಾರ ಪಾರ್ಕಿಂಗ್ ನೀತಿಗೆ 2021ರ ಫೆಬ್ರುವರಿ 2ರಂದು ಅನುಮತಿ ನೀಡಿತ್ತು. ನಗರ ಭೂ ಸಾರಿಗೆ ನಿರ್ದೇಶನಾಲಯ ವಲಯವಾರು ಪಾರ್ಕಿಂಗ್ ಯೋಜನೆಯನ್ನು ಸಿದ್ಧಪಡಿಸಿದೆ. ಬೆಂಗಳೂರು ನಗರ ಪೊಲೀಸರು ಹಾಗೂ ಬಿಬಿಎಂಪಿಯೊಂದಿಗೆ ಜೊತೆಗೂಡಿ ಕಾರು, ಬೈಕು, ಸೈಕಲ್ ಎಂಬ ವರ್ಗಗಳೊಂದಿಗೆ ಸಮೀಕ್ಷೆ ನಡೆಸಿ ವರದಿ ನೀಡಿದೆ. ಇದರಂತೆ ಬಿಬಿಎಂಪಿ ಸರ್ಕಾರದಿಂದ ಅನುಮತಿ ಪಡೆದು, ಟೆಂಡರ್ ಪ್ರಕ್ರಿಯೆಯನ್ನು ಆರಂಭಿಸಿದೆ.

‘2020ರಲ್ಲಿ ನಿಗದಿಪಡಿಸಿದ ಶುಲ್ಕವನ್ನೇ ವಿಧಿಸಲು ತೀರ್ಮಾನಿಸಲಾಗಿದೆ. ವ್ಯವಸ್ಥಿತವಾಗಿ ಪಾರ್ಕಿಂಗ್ ನೀತಿ ಜಾರಿಯಾಗುತ್ತಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ತಿಳಿಸಿದರು.

ಎಂಟೂ ವಲಯಗಳಲ್ಲಿ ಎ, ಬಿ, ಸಿ ಎಂದು ಮೂರು ವರ್ಗಗಳಾಗಿ ರಸ್ತೆಗಳನ್ನು ವಿಭಜಿಸಿ, ‘ಪಾವತಿ ಪಾರ್ಕಿಂಗ್’ ವ್ಯವಸ್ಥೆಯನ್ನು ಜಾರಿಗೆ ತರಲು ಬಿಬಿಎಂಪಿ ವತಿಯಿಂದ ಸೆಪ್ಟೆಂಬರ್ 18ರಂದು ಟೆಂಡರ್ ಕರೆಯಲಾಗಿದೆ. ಅಕ್ಟೋಬರ್ 10ರಂದು ಆಯ್ಕೆ ಪ್ರಕ್ರಿಯೆ ನಡೆಯಲಿದೆ. ನಂತರ ಕಾರ್ಯಾದೇಶದ ಅನ್ವಯ ಪಾರ್ಕಿಂಗ್ ಶುಲ್ಕ ಜಾರಿ ಆಗಲಿದೆ. ಒಟ್ಟಾರೆ ₹124 ಕೋಟಿ ಆದಾಯ ನಿರೀಕ್ಷಿಸಲಾಗಿದೆ ಎಂದು ಬಿಬಿಎಂಪಿ ಟ್ರಾಫಿಕ್ ಎಂಜಿನಿಯರಿಂಗ್ ಕೋಶದ (ಟಿಇಸಿ) ಎಂಜಿನಿಯರ್‌ಗಳು ಮಾಹಿತಿ ನೀಡಿದರು.

ಏನಿದು ಸ್ಮಾರ್ಟ್ ಪಾರ್ಕಿಂಗ್?

ಬಿಬಿಎಂಪಿ ಗುರುತಿಸಿರುವ ರಸ್ತೆಗಳಲ್ಲಿ ಇಂತಿಷ್ಟು ಬೈಕ್ ಹಾಗೂ ಕಾರುಗಳಿಗೆ ನಿಲುಗಡೆ ಪ್ರದೇಶವನ್ನು ಗುರುತಿಸಲಾಗಿದೆ. ಗುತ್ತಿಗೆದಾರರು ಮ್ಯಾಗ್ನೆಟಿಕ್–ಆಪ್ಟಿಕಲ್–ಐಆರ್ ಸೆನ್ಸಾರ್ ಹಾಗೂ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಮೊಬೈಲ್ ಆ್ಯಪ್ ಮೂಲಕ ನಿಲುಗಡೆಯ ನೈಜ ಸಮಯವನ್ನು ದಾಖಲಿಸಬೇಕು.

ಅಂಗವಿಕಲರಿಗೆ ಪಾರ್ಕಿಂಗ್ ಕಾಯ್ದಿರಿಸಬೇಕು. ಕೋಡೆಡ್ ಟಿಕೆಟ್/ ಮ್ಯಾಗ್ನೆಟಿಕ್ ಸ್ಟ್ರಿಪ್ ಕಾರ್ಡ್/ ಸ್ಮಾರ್ಟ್ ಕಾರ್ಡ್‌ಗಳ ಮೂಲಕ ಬಾರ್‌ಕೋಡ್‌ನೊಂದಿಗೆ ವಾಹನ ಗುರುತಿಸಬೇಕು.

ಪಾರ್ಕಿಂಗ್ ಮೀಟರ್ ಸ್ಥಾಪಿಸಿ, ಸ್ಮಾರ್ಟ್‌ಕಾರ್ಡ್, ಕ್ರೆಡಿಟ್ ಕಾರ್ಡ್, ಡೆಬಿಟ್‌ಕಾರ್ಡ್, ಯುಪಿಐ ಮೂಲಕ ಶುಲ್ಕ ಪಾವತಿಸಬಹುದು.

ಪ್ರತಿ ರಸ್ತೆಯಲ್ಲೂ ಟೋಯಿಂಗ್ ವಾಹನ ಇರಬೇಕು. ಎಷ್ಟು ವಾಹನಗಳು ನಿಲುಗಡೆ ಆಗಿವೆ ಎಂಬುದನ್ನು ತೋರುವ ಎಲೆಕ್ಟ್ರಾನಿಕ್ ಫಲಕ ಇರುತ್ತದೆ.

ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿ ಅಳವಡಿಸಲಾಗಿರುವ ‘ಪಾವತಿ ಪಾರ್ಕಿಂಗ್ ವ್ಯವಸ್ಥೆಯೇ’ ಸ್ಮಾರ್ಟ್ ಪಾರ್ಕಿಂಗ್.

ಎಷ್ಟು ಶುಲ್ಕ? (ಪ್ರತಿ ಗಂಟೆಗೆ)

ವರ್ಗ	ದ್ವಿಚಕ್ರ	ಕಾರು
ಎ	₹15	₹30
ಬಿ	₹10	₹20
ಸಿ	₹5	₹10
ಸೈಕಲ್‌ಗೆ ಉಚಿತ		

ಯಾವ ವಲಯದಲ್ಲಿ ಎಷ್ಟು ರಸ್ತೆ?

ವಲಯ	ರಸ್ತೆ	ವರ್ಗ ಎ	ವರ್ಗ ಬಿ	ವರ್ಗ ಸಿ	ಆದಾಯ
ದಕ್ಷಿಣ	197	20	106	71	₹40,50,62,400
ಪಶ್ಚಿಮ	137	4	31	102	₹20,50,27,800
ಪೂರ್ವ	59	3	33	23	₹19,39,02,600
ಯಲಹಂಕ	60	-	27	33	₹15,97,82,400
ಬೊಮ್ಮನಹಳ್ಳಿ	58	2	24	32	₹10,17,91,200
ದಾಸರಹಳ್ಳಿ	104	-	9	95	₹7,26,86,100
ಮಹದೇವಪುರ	50	-	19	31	₹5,59,98,300
ಆರ್‌.ಆರ್‌.ನಗರ	58	1	18	39	₹4,57,92,900
ಒಟ್ಟು ರಸ್ತೆ	723	ವಾರ್ಷಿಕ ಆದಾಯ			₹124,00,43,700

24ಕ್ಕೆ ಬೆಂಗಳೂರು ವಿ.ವಿ. ನೌಕರರ ಸಭೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ನೌಕರರ ಸಾಲ ಸಹಕಾರ ಸಂಘದ 2021-22ನೇ ಸಾಲಿನ ವಾರ್ಷಿಕ ಸಭೆ ಇದೇ 24ರಂದು ನಡೆಯಲಿದೆ.

ಜ್ಞಾನಭಾರತಿ ಆವರಣದ ಡಾ.ಎಚ್‌.ಎನ್‌. ಸಭಾಂಗಣದಲ್ಲಿ ಅಂದು ಮಧ್ಯಾಹ್ನ 2ಕ್ಕೆ ಸಭೆ ನಡೆಯಲಿದೆ. ಎಚ್‌. ಕೃಷ್ಣಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸಂಘದ ಕಾರ್ಯದರ್ಶಿ ರಾಮಲಿಂಗಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಲಮಂಡಳಿ: ನೀರಿನ ಅದಾಲತ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ ಇದೇ 22ರಂದು ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30ರಿಂದ 11 ಗಂಟೆಯವರೆಗೆ ಅದಾಲತ್ ನಡೆಯಲಿದೆ ಎಂದು ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ನೀರಿನ ಬಿಲ್, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಸೇರಿ ವಿವಿಧ ಕುಂದುಕೊರತೆಗಳನ್ನು ಪರಿಹರಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಗೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ: 8762228888ಗೆ ಸಂದೇಶ ಕಳುಹಿಸುವ ಮೂಲಕವೂ ದೂರು ದಾಖಲಿಸಬಹುದು ಎಂದು ತಿಳಿಸಿದ್ದಾರೆ.

ರಾಜಕಾಲುವೆ ಒತ್ತುವರಿ ತೆರವಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ 6ನೇ ಹಂತದ 11ನೇ ಬ್ಲಾಕ್‌ನಲ್ಲಿರುವ ಉದ್ಯಾನ–1ರಲ್ಲಿ ರಾಜಕಾಲುವೆ ಒತ್ತುವರಿಯಾಗಿದ್ದು, ಪಾರ್ಕ್ ಜಾಗವನ್ನೂ ಖಾಸಗಿಯವರು ಒತ್ತುವರಿ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬಿಟ್ಟಿದ್ದಾರೆ ಎಂದು ಆರೋಪಿಸಿ ಸ್ಥಳೀಯ ನಾಗರಿಕರು ಬುಧವಾರ ಪ್ರತಿಭಟನೆ ಮಾಡಿದರು.



ಬನಶಂಕರಿ 6ನೇ ಹಂತದ 11ನೇ ಬ್ಲಾಕ್‌ನಲ್ಲಿರುವ ಬಿಡಿಎ ಉದ್ಯಾನ–1 ಹಾಗೂ ರಾಜಕಾಲುವೆ ಒತ್ತುವರಿಯನ್ನು ತೆರವು ಮಾಡಬೇಕೆಂದು ಒತ್ತಾಯಿಸಿ ಸ್ಥಳೀಯ ನಾಗರಿಕರು ಬುಧವಾರ ಪ್ರತಿಭಟನೆ ನಡೆಸಿದರು

‘ಉದ್ಯಾನದ ಪಕ್ಕವಿರುವ ರಾಜಕಾಲುವೆಯನ್ನು ಕಲ್ಲು–ಮಣ್ಣಿನಿಂದ ಮುಚ್ಚಲಾಗಿದೆ. ಅಷ್ಟೇ ಅಲ್ಲ, ಉದ್ಯಾನಕ್ಕೆ ಸೇರಿದ ಸುಮಾರು ಒಂದು ಎಕರೆ ಪ್ರದೇಶವನ್ನು ಖಾಸಗಿಯವರು ಒತ್ತುವರಿ ಮಾಡಿಕೊಂಡಿದ್ದಾರೆ. ಈ ಬಗ್ಗೆ ಬಿಡಿಎ ಅಧಿಕಾರಿಗಳಿಗೆ ದೂರು ನೀಡಿದ್ದರೂ ಅವರು ಕ್ರಮ ಕೈಗೊಂಡಿಲ್ಲ. ಬಿಡಿಎ ಆಯುಕ್ತರು ಈ ಬಗ್ಗೆ ಗಮನಹರಿಸಿ ಉದ್ಯಾನವನ್ನು ಉಳಿಸಿಕೊಡಬೇಕು’ ಎಂದು ಆಗ್ರಹಿಸಿದರು.

‘ನಾಗರಿಕರೆಲ್ಲ ಸೇರಿಕೊಂಡು ಉದ್ಯಾನವನ್ನು ಅಭಿವೃದ್ಧಿ ಮಾಡಿದ್ದೆವು. ನಂತರ ಬಿಡಿಎದವರು ಅಭಿವೃದ್ಧಿ ಮಾಡಿದರು. ಇದೀಗ ಉದ್ಯಾನದ ಜಾಗವನ್ನು ಖಾಸಗಿಯವರಿಗೆ ನೀಡಲು ಗುರುತು ಮಾಡಲು ಬುಧವಾರ ಬಿಡಿಎ ಅಧಿಕಾರಿಗಳು, ಎಂಜಿನಿಯರ್‌ಗಳು ಬಂದಿದ್ದರು. ಖಾಸಗಿಯವರಿಗೆ ಅನುಕೂಲ ಮಾಡಿಕೊಡಲು, ಸರ್ಕಾರಿ ಉದ್ಯಾನ ಹಾಗೂ ರಾಜಕಾಲುವೆಯನ್ನೂ ಅವರಿಗೆ ಕೊಡಲು ಮುಂದಾಗಿದ್ದಾರೆ. ಆಯುಕ್ತರು ಈ ಬಗ್ಗೆ ಗಮನವಹಿಸಬೇಕು. ರಾಜಕಾಲುವೆ ಒತ್ತುವರಿಯನ್ನು ಕೂಡಲೇ ತೆರವು ಮಾಡಬೇಕು. ಉದ್ಯಾನವನ್ನು ಖಾಸಗಿಯವರಿಗೆ ನೀಡಬಾರದು. ಅದಕ್ಕೆ ನಾವು ಬಿಡುವುದಿಲ್ಲ’ ಎಂದು ಸ್ಥಳೀಯರಾದ ಡಾ. ಸೋಮಶೇಖರ ಮೂರ್ತಿ, ಡಾ. ಮಹದೇವ್ ಹಾಗೂ ಗೋಪಾಲ್ ಹೇಳಿದರು.



ಮಾರತಹಳ್ಳಿಯಲ್ಲಿ ಪೊಲೀಸ್ ಠಾಣೆ ಹಿಂಭಾಗ ರಾಜಕಾಲುವೆ ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ಬುಧವಾರ ತೆರವುಗೊಳಿಸಿದರು

ಗ್ರೀನ್‌ವುಡ್ ರೆಸಿಡೆನ್ಸಿ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಕಸವನಗಳ್ಳಿಯ ವಲ್ಲಿಯಮ್ಮ ಲೇಔಟ್, ಗ್ರೀನ್‌ವುಡ್ ರೆಸಿಡೆನ್ಸಿ, ಮಾರತಹಳ್ಳಿ ಪೊಲೀಸ್ ಠಾಣೆಯ ಹಿಂಭಾಗ ಜಲಮಂಡಳಿಯ ಎಸ್‌ಟಿಪಿ ಬಳಿ ರಾಜಕಾಲುವೆ ಮೇಲೆ ನಿರ್ಮಿಸಿದ್ದ ಆರ್‌ಸಿಸಿ ಸೇತುವೆಯನ್ನು ಮಂಗಳವಾರ ಬಿಬಿಎಂಪಿ ಸಿಬ್ಬಂದಿ ತೆರವು ಮಾಡಿದ್ದಾರೆ.

ವಲ್ಲಿಯಮ್ಮ ಲೇಔಟ್‌ನಲ್ಲಿ ಶೆಡ್‌ಗಳನ್ನು ತೆರವುಗೊಳಿಸಲಾಗಿದೆ. ಗ್ರೀನ್‌ವುಡ್ ರೆಸಿಡೆನ್ಸ್ ಆವರಣದಲ್ಲಿ ಸುಮಾರು 150 ಮೀಟರ್ ಉದ್ದದ ಮಳೆ ನೀರುಗಾಲುವೆಯ ಮೇಲೆ ಅಳವಡಿಸಿದ್ದ ಸ್ಲ್ಯಾಬ್ ತೆರವು ಮಾಡಲಾಗಿದೆ. ಗೋಡೆಯನ್ನು ತೆರವು-ಗೊಳಿಸಲಾಗಿದೆ. ಮಾರತಹಳ್ಳಿ ಪೊಲೀಸ್ ಠಾಣೆಯ ಹಿಂಭಾಗ, ಜಲಮಂಡಳಿ ಎಸ್.ಟಿ.ಪಿ ಬಳಿ ರಾಜಕಾಲುವೆಯ ಮೇಲೆ ನಿರ್ಮಾಣ ಮಾಡಿರುವ ಸೇತುವೆ ತೆರವು ಕಾರ್ಯಾಚರಣೆಯು ಬಹುತೇಕ ಪೂರ್ಣಗೊಂಡಿದ್ದು, ನಾಳೆಯೂ ತೆರವು ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಕಸವನಹಳ್ಳಿ, ಹೂಡಿ ವ್ಯಾಪ್ತಿಯಲ್ಲಿ ಸರ್ವೆ ಕಾರ್ಯವನ್ನು ಮಾಡುತ್ತಿದ್ದು, ಒತ್ತುವರಿ ಮಾಡಿರುವ ಜಾಗವನ್ನು ಮಾರ್ಕಿಂಗ್ ಮಾಡಿದ ಬಳಿಕ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗುತ್ತದೆ ಎಂದಿದೆ.

ಸ್ತಬ್ಧಚಿತ್ರಗಳ ಪ್ರದರ್ಶನಕ್ಕೆ ಆಹ್ವಾನ

ಬೆಂಗಳೂರು: ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮೆರವಣಿಗೆಯಲ್ಲಿ ಸ್ತಬ್ಧಚಿತ್ರಗಳ ಪ್ರದರ್ಶನಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಅರ್ಜಿ ಆಹ್ವಾನಿಸಿದೆ.

ನ.11, 12 ಹಾಗೂ 13 ರಂದು ಹಾವೇರಿಯಲ್ಲಿ ಸಮ್ಮೇಳನ ನಡೆಯಲಿದ್ದು, ದೊಡ್ಡರಂಗೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಸಮ್ಮೇಳನದ ಮೆರವಣಿಗೆಯಲ್ಲಿ ಸ್ತಬ್ಧಚಿತ್ರಗಳ ಪ್ರದರ್ಶನಕ್ಕೆ ಸಂಘ ಸಂಸ್ಥೆಗಳಿಗೆ ಅವಕಾಶವಿದೆ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ನಾಡು, ನುಡಿ, ಪರಂಪರೆ, ಸಾಹಿತ್ಯ, ಕಲೆ, ಸಂಸ್ಕೃತಿ, ಸಾಧನೆಗಳು ಹಾಗೂ ನೆಲ ಮೂಲದ ಇತಿಹಾಸ ಬಿಂಬಿಸುವ ಸ್ತಬ್ಧಚಿತ್ರಗಳನ್ನು ಪ್ರದರ್ಶಿಸಬಹುದು. ಮೆರವಣಿಗೆಯಲ್ಲಿ ಭಾಗವಹಿಸುವವರು ತಮ್ಮ ಸಂಸ್ಥೆಯ ಪೂರ್ಣ ಮಾಹಿತಿ ಹಾಗೂ ಸ್ತಬ್ಧಚಿತ್ರಗಳ ವಿನ್ಯಾಸದ ಮಾದರಿ ಸಹಿತ ಅರ್ಜಿಯನ್ನು ಅ.17 ರೊಳಗೆ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿರಸ್ತೆ, ಚಾಮರಾಜಪೇಟೆ, ಬೆಂಗಳೂರು 560018 ಈ ವಿಳಾಸಕ್ಕೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.



ರಫ್ತು ಶ್ರೇಷ್ಠ ಪ್ರಶಸ್ತಿಯನ್ನು ವಿಪ್ರೊ ಜಿಇ ಹೆಲ್ತ್‌ಕೇರ್ ಲಿಮಿಟೆಡ್ ಅಧಿಕಾರಿಗಳಿಗೆ ಸಚಿವ ಮುರುಗೇಶ್ ಆರ್.ನಿರಾಣಿ ಪ್ರದಾನ ಮಾಡಿದರು. ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್.ಪ್ರಸಾದ್ ಇದ್ದರು

ತುಮಕೂರಿನಲ್ಲೂ ವಿಮಾನ ನಿಲ್ದಾಣ

ಬೆಂಗಳೂರು: 'ಮುಂಬರುವ ದಿನಗಳಲ್ಲಿ ತುಮಕೂರು ಬಳಿ ಹೊಸದಾಗಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಲು ಸರ್ಕಾರ ಆಲೋಚಿಸಿದೆ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ಆರ್. ನಿರಾಣಿ ತಿಳಿಸಿದರು.

ಎಫ್‌ಕೆಸಿಸಿಐ(ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ) ಆಯೋಜಿಸಿದ್ದ 17ನೇ ಆವೃತ್ತಿಯ 'ರಫ್ತು ಶ್ರೇಷ್ಠತಾ ಪ್ರಶಸ್ತಿ' ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಾಗಲಕೋಟೆ ಜಿಲ್ಲೆಯ ಬಾದಾಮಿ, ರಾಯಚೂರು, ಕೊಪ್ಪಳ, ದಾವಣಗೆರೆ, ಚಿಕ್ಕಮಗಳೂರಿನಲ್ಲಿ ಹೊಸ ವಿಮಾನ ನಿಲ್ದಾಣ ಪ್ರಯತ್ನಿಸಲಾಗುತ್ತಿದೆ ಎಂದು ಹೇಳಿದರು.

ನವೆಂಬರ್‌ನಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ₹5 ಲಕ್ಷ ಕೋಟಿಗೂ ಹೆಚ್ಚಿನ ಹೂಡಿಕೆಗೆ ಒಡಂಬಡಿಕೆ ಏರ್ಪಡಲಿದೆ. ಕಾರ್ಯಕ್ರಮಕ್ಕೆ ರಾಯಭಾರಿಯಾಗಿ ಅಮಿತಾಬ್ ಬಚ್ಚನ್ ಅವರನ್ನು ಕರೆಸುವ ಆಲೋಚನೆ ಇದೆ ಎಂದು ಅವರು ತಿಳಿಸಿದರು.

ಇದೇ ವೇಳೆ ಅತ್ಯುತ್ತಮ 65 ಉದ್ಯಮಿಗಳಿಗೆ ರಫ್ತು ಶ್ರೇಷ್ಠ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೂವರು ವಿದ್ಯಾರ್ಥಿನಿಯರು ನಾಪತ್ತೆ

ಮಂಗಳೂರು: ನಗರದ ಮೇರಿಹಿಲ್‌ನ ಪದವಿಪೂರ್ವ ಕಾಲೇಜೊಂದರ ಮೂವರು ವಿದ್ಯಾರ್ಥಿನಿಯರು ಬುಧವಾರ ನಸುಕಿನಲ್ಲಿ ಕಾಲೇಜಿನ ಹಾಸ್ಟೆಲ್‌ನಿಂದ ನಾಪತ್ತೆಯಾಗಿದ್ದಾರೆ.

ಈ ಮೂವರು ಹಾಸ್ಟೆಲ್‌ನಿಂದ ಹೊರಗೆ ಬಂದು ಕೈಯಲ್ಲಿ ಬ್ಯಾಗ್‌ಗಳನ್ನು ಹಿಡಿದುಕೊಂಡು ನಡೆದುಕೊಂಡು ಹೋಗುತ್ತಿರುವ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾವೊಂದರಲ್ಲಿ ದಾಖಲಾಗಿದೆ.

ಶಾಲಾ ತರಗತಿ ಐದೂವರೆ ಗಂಟೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಶಾಲೆಗಳು ನಿತ್ಯವೂ ಐದೂವರೆ ಗಂಟೆ ತರಗತಿಗಳನ್ನು ನಡೆಸುವುದು ಕಡ್ಡಾಯ. ಶಾಲಾ ಸಮಯದ ಮೇಲೆ ನಿಗಾವಹಿಸದ ಅಧಿಕಾರಿಗಳ ವಿರುದ್ಧ ಡಿಡಿಪಿಐಗಳು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ಶಿಕ್ಷಣ ಕಾಯ್ದೆ 1999ರ ತಿದ್ದುಪಡಿ ಅನ್ವಯ ಮಾನ್ಯತೆ ಪಡೆದ ಖಾಸಗಿ ಶಾಲೆಗಳು ತಮಗೆ ಅನುಕೂಲವಾಗುವ ಸಮಯದಲ್ಲಿ ತರಗತಿ ನಡೆಸುವ ಬಗ್ಗೆ ಮುಖ್ಯಮಂತ್ರಿ ಕಚೇರಿಗೆ ದೂರುಗಳು ಬಂದಿವೆ. ಶಾಲೆ ಆರಂಭದಲ್ಲಿನ ಪ್ರಾರ್ಥನೆ, ಮಧ್ಯಾಹ್ನದ ಊಟದ ವಿರಾಮ ಹೊರತುಪಡಿಸಿ, ಐದೂವರೆ ಗಂಟೆ ಮಕ್ಕಳ ಕಲಿಕಾ ಸಮಯವಾಗಿರುತ್ತದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಬೆಂಗಳೂರು ನಗರದಲ್ಲಿ ಬೆಳಿಗ್ಗೆ 8ರಿಂದ 8.30ರ ಒಳಗೆ ಶಾಲೆ ಆರಂಭಿಸಬೇಕು. ಪ್ರಾರ್ಥನೆ, ವಿರಾಮದ ಅವಧಿ ಹೊರತುಪಡಿಸಿ, ಕಡ್ಡಾಯವಾಗಿ ಐದೂವರೆ ಗಂಟೆ ತರಗತಿಗಳನ್ನು ನಡೆಸಬೇಕು ಎಂದು ವಿವರಿಸಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿಆರ್‌ಸಿ, ಬಿಆರ್‌ಪಿ, ಸಿಆರ್‌ಪಿಗಳು ಪ್ರತಿ ಶಾಲೆಗಳನ್ನು ಪರಿಶೀಲಿಸಬೇಕು. ಬಹುತೇಕ ಅಧಿಕಾರಿಗಳು ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿದೆ. ಪ್ರತಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲೂ 17 ಜನ ಅಧಿಕಾರಿಗಳನ್ನು ಮೇಲುಸ್ತುವಾರಿಗಾಗಿ ನೇಮಿಸಬೇಕು. ನಿತ್ಯಎರಡು–ಮೂರು ಶಾಲೆಗಳಿಗೆ ಭೇಟಿ ನೀಡಿ ವರದಿ ಸಲ್ಲಿಸಬೇಕು. ಇಲ್ಲದಿದ್ದರೆ ಬಿಆರ್‌ಸಿ, ಬಿಆರ್‌ಪಿ, ಸಿಆರ್‌ಪಿ ಹುದ್ದೆ ರದ್ದು ಮಾಡಲಾಗುವುದೆಂದು ಎಚ್ಚರಿಸಿದ್ದಾರೆ.

ನಗರದಲ್ಲಿ ಇಂದು



ರಾಜ್ಯಮಟ್ಟದ ನಿರುದ್ಯೋಗಿ ಯುವಜನರ ಸಮಾವೇಶ: ಉದ್ಘಾಟನೆ: ಎನ್. ಸಂತೋಷ್ ಹೆಗ್ಡೆ, ಅತಿಥಿಗಳು: ಮಂಗ್ಳೂರು ವಿಜಯ, ಭಾಷಣಕಾರರು: ಇ.ವಿ. ಪ್ರಕಾಶ್, ಜಿ.ಎಸ್. ಕುಮಾರ್, ಸಿದ್ಧಲಿಂಗ ಬಾಗೇವಾಡಿ, ಅಧ್ಯಕ್ಷತೆ: ಚನ್ನಬಸವ ಜಾನೇಕಲ್, ವಿಜಯ್‌ಕುಮಾರ್, ಆಯೋಜನೆ: ಅಖಿಲ ಭಾರತ ನಿರುದ್ಯೋಗಿ ಯುವಜನರ ಹೋರಾಟ ಸಮಿತಿ–ಕರ್ನಾಟಕ, ಸ್ಥಳ: ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣ, ಬೆಳಿಗ್ಗೆ 10.30

ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ ಮಾಲೆ–3: ವಿಷಯ: 'ಹರಿಶ್ಚಂದ್ರ ಕಾವ್ಯ: ಇಂಗ್ಲಿಷ್ ಅನುವಾದದ ಸವಾಲುಗಳು, ಸಾಧ್ಯತೆಗಳು', ಉಪನ್ಯಾಸಕರು: ವನಮಾಲಾ ವಿಶ್ವನಾಥ, ಆಯೋಜನೆ ಮತ್ತು ಸ್ಥಳ: ಕನ್ನಡ ಸಂಘ, ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಸೆಂಟ್ರಲ್ ಕ್ಯಾಂಪಸ್, ಹೊಸೂರು ರಸ್ತೆ, ಮಧ್ಯಾಹ್ನ 3.30

ಪಿ.ಬಿ. ಶ್ರೀನಿವಾಸ್ ಯಶೋನಿಧಿ ಪ್ರಶಸ್ತಿ ಪ್ರದಾನ ಮತ್ತು ಗೀತನಮನ: ಉದ್ಘಾಟನೆ: ಎಸ್.ಕೆ. ಭಗವಾನ್, ಅಧ್ಯಕ್ಷತೆ: ಎ. ಅಮೃತ್‌ರಾಜ್, ಅತಿಥಿಗಳು: ವಿ. ಮನೋಹರ್, ಕೆ. ಕಲ್ಯಾಣ್, ಎಂ.ಜಿ. ಪಂಡಿತ್, ವಿ. ನಾಗೇಂದ್ರ ಪ್ರಸಾದ್, ಆಯೋಜನೆ: ಗಾನಧಾರೆ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

'ಕುವೆಂಪುರವರ ಶ್ರೀರಾಮಾಯಣ ದರ್ಶನಂ' ಓದು: ಕಾವ್ಯ ವಾಚನ: ಕೆ.ಎನ್. ಗಣೇಶಯ್ಯ, ಅಧ್ಯಕ್ಷತೆ: ಎ.ಜೆ. ಸದಾಶಿವ, ಅತಿಥಿಗಳು: ಲಕ್ಷ್ಮೀನಾರಾಯಣ, ಜಗದೀಶ ರೆಡ್ಡಿ, ಎಂ.ಸಿ. ನರೇಂದ್ರ, ಆಯೋಜನೆ: ರಾಷ್ಟ್ರಕವಿ ಕುವೆಂಪು ವಿಚಾರ ವೇದಿಕೆ, ಸ್ಥಳ: ಕನ್ನಡ ಯುವ ಜನಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6

ಅನಂತಕುಮಾರ್–63, 1987–1997 ದಶಮಾನದಲ್ಲಿ ಅನಂತಕುಮಾರ್ ಒಡನಾಡಿಗಳಾಗಿದ್ದ ಪ್ರಮುಖ ಕಾರ್ಯಕರ್ತರ ಸಮಾವೇಶ: ಬೆಳಿಗ್ಗೆ 11, ಪ್ರತಿಭಾ ಪುರಸ್ಕಾರ, ಸಂಜೆ 4.30, ಕರ್ನಾಟಕದ ವಿಶಿಷ್ಟ 63 ದೇವಸ್ಥಾನಗಳ ಮಾಹಿತಿ ಬಿಡುಗಡೆ, 'ಅನಂತಪಥ' ಮಾಸ ಪತ್ರಿಕೆ ಬಿಡುಗಡೆ, ಉದ್ಘಾಟನೆ: ಬಿ.ಎಸ್. ಯಡಿಯೂರಪ್ಪ, ಅತಿಥಿಗಳು: ಬಸವರಾಜ ಬೊಮ್ಮಾಯಿ, ಆಯೋಜನೆ: ಅದಮ್ಯ ಚೇತನ, ಸ್ಥಳ: ಕರ್ನಾಟಕ ಜೈನ್ ಭವನ, ವಿ.ವಿ. ಪುರ, ಸಂಜೆ 6.30

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಪ್ರಣತಿ, ಪಂಚಮಿ, ದಿವ್ಯಾ, ಲೂಪ್ಷಿಕ ಮತ್ತು ಅನನ್ಯ, ನಿರ್ದೇಶನ: ಗಾಯತ್ರಿ ಕೇಶವನ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, ಸಂಜೆ 7.30

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

JANATHA EDUCATION SOCIETY® Est. 1972
VIVEKANANDA EDUCATIONAL INSTITUTIONS
Dr. Rajkumar Road, 2nd Stage, Rajajinagar, Bangalore - 560 055
Phone: 080 - 23371952/6366733434

Applications are invited for the following posts

VIVEKANANDA INSTITUTE OF TECHNOLOGY
ASSISTANT PROFESSOR: CS/ IS & AI & ML Dept. – M.Tech - 13 Nos.
ASSISTANT PROFESSOR: English, Kannada (Constitution of India and Professional Ethics) MA relevant subject with first class– 2-3 years exp - 2 Nos.
LAB INSTRUCTORS: Chemistry / CS / IS/ AI & ML – Diploma/BE, 2 years exp - 6 Nos.
OFFICE MANAGER: Any degree preferably M.Com with 5-10 years exp.
ASSISTANT MANAGER: Any degree preferably B.Com with 5 years exp.
OFFICE STAFF: Admin & Exam Section, Any Degree preferably B.Com - 2 Nos.
OFFICE ASSISTANT: Placement Dept. Any Degree with 2 Years experience
ASSISTANT ENGINEER: BE Civil with 3-5 years' experience.
Salary commensurate with experience as per AICTE norms.

VIVEKANANDA COLLEGE OF LAW
ASSISTANT PROFESSOR: Political Science-Masters with minimum 55% marks, NET/SLET/Ph.D. Preferred with 3 years exp.

VIVEKANANDA DEGREE COLLEGE FOR WOMEN
LECTURER: Kannada Dept.: MA Kannada with 2 years exp.
PHYSICAL EDUCATION DIRECTOR: M.Ped/B.Ped with 2 years exp

VIVEKANANDA INSTITUTE OF MANAGEMENT
ASSISTANT PROFESSOR; BCA Dept.: MCA, M.Phil / M.Sc in CS with Minimum 3-5 years Exp.
ACCOUNTS OFFICER/SENIOR ACCOUNTANT: B.Com/M.Com/CA Inter 5-10 years' experience, preferably in an educational institution.

VIVEKANANDA PUBLIC SCHOOL
NURSERY TEACHER: NTT/MTT – 1 No.
PHYSICS TEACHER: B.Sc/M.Sc in Physics with B.Ed.
KARATE TEACHER: Relevant Certificate, Part Time.
DANCE TEACHER: Relevant Certificate, Part Time.

BOYS HOSTEL – Gayathri Nagar
WARDEN: Any Degree with Minimum 3-5 years Experience.

Eligible candidates may send their BIODATA along with 2 passport size photos to the Hon. Secretary to reach him within 10 days or email jobs@jes-edu.in

Sri.H.C.Balakrishna, President — Sri H.G.Balagopal, Hon. Secretary

Multiple Vacancy

REQUIRED, TEAMLEADER, & FieldExecutive For BankLoan collection. direct recruitment to company. Contact: 9620206756, 9620200756.

Overseas

HOUSEHOLD HELP needed in USA. Valid US visa holder only. Competitive salary Email: Kalyan.j@gmail.com Call: +91 9881469493 WhatsApp: +16073424158

Accounts & Finance

WANTED
Famale Account Executive proficient in Tally for office located in HAL KR Gardens, Previous experience of at least 2 years in Govt. Tender work will and additional advantage. Salary 25,000/- pm plus bonus.
Contact: 9611196473
Email Resume- contact@apexmedicals.in

General

LOOKING FOR life advisors who are having agent code active. They can become an retailpartner today &earn a fixed salary up to 52K/M & incentive. Contact:9686839397

Marketing & Sales

WANTED COUNTER Sales Executives (M/F) for Two Wheeler Showroom Koramanagala, JPNagar, Rajajinagar. Salary + Incentives. 9945083900, 9731028676.

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

PUBLIC NOTICE

PUBLIC NOTICE
This Notice to the public at large i.e., any Person, Financier or Bank is hereby informed that my client **Mr. Harisha Narashimamurthy** has decided to purchase the **Schedule Property** which was owned by Mr. Ayyappa C V by Sale Deed Dt – 20/06/2018 who died on 30/01/2022 and now his wife and children who are residing at #9 12th E Main Bandappa Garden Muthyalanagara Bengaluru 560054 are ready to execute the Sale Deed in favour of my client.
If any person is having any rights, title, claims, or interest or objections in any manner to purchase the schedule property by my client shall furnish the same along with documents if any within 15 days from today to the under signed otherwise my client will proceed to get the Sale Deed Registered in his favour. Any claim or objections after 15 days will not be considered at any cost.

SCHEDULE PROPERTY
The Residential building consists of Ground plus 2 upper floors constructed on site No. 15 measuring 40ft. X 30ft. Carved out of Sy. No. 30/3 Chikkabettahalli Village Yelahanka Hobli Bengaluru North Taluk and now comes under BBMP Attur - Ward No. 3 and this property is situated at BHEL Layout 1st Cross with Sl. No. 4443 and Khatha No. 30/3/15 - which is bounded on the:
East by : Property No. 7.
West by : Road.
North by : Property No. 14.
South by : Property No. 16.

G.S.Dakshinamurthy
Advocate. Roll No. KAR163/1986
#12 1st Cross G.Ramaiah Enclave Vidyaranyapura P.O. Bangalore – 97
Mobile: 9164718747

PUBLIC NOTICE
This is to inform the general public that, **Nilesh Agrawal**, S/O **Omprakash Agrawal, Residing** @ S-17 Kristal Tiara, Bellandur Main Road, off Sarjapur Road, Bengaluru, do here by state that, he has lost/Misplaced the **Original Document No.5258, Book 6714, Volume 22, Pages 01 to 20 and registered at the Office of the Sub-Registrar, Madiwala, Bengaluru.**
I have lodged online Police Complaint vide Lost Report No.0247334/ 2022 and Serial no.0247334 dated 17/06/2022. Whoever finds the document kindly handover the document to any of us at
Sd/- R. SURESH Advocate
#4/2 'A', Wing, 1st Floor, Shamsuddain Block, HHS & HMS Complex, Cubbonpet Main Road, Bengalure-02.
Mobile: 9844456626
Bangalore Date:22.09.2022

REAL ESTATE SELLING

Industrial & Factory

Yeshwanthpur

SALE, HALF Acre Industrial Land, Industrial Suburb 2nd stage, close to National Highway. 9141326819, 9972636255

PERSONAL

Change of Name

CHANGE OF NAME
I, **POULOMI PAUL** Residing at 29/8 VNC Colony, Vannarpet, Viveknagar post, Bangalore 560047. have changed my name to **POULOMI HALDER** vide affidavit dated 19/09/2022 before notary A.R. Muneer Ahmed, Bangalore. Henceforth I shall be called **POULOMI HALDER** only.

I, VIJAY KUMAR KOTHARI S/o KAILASH CHAND R/a #2024, Prestige South Ridge, Hosakerehalli Cross, BSK 3rd Stage, Bengaluru-85, Have Changed Name to VIJAY KOTHARI S/o KAILASH CHAND KOTHARI vide Affidavit 21.09.2022 Before Notary Hemalatha, Bangalore

I, RAMADEVI R. W/o. Rabindranath .M.V R/a #38 1st Floor, 6th Main,1st Cross Sarvabhoumanagar, Chikkalasandra,Bengaluru-560061, have changed my name to RAMAA DEVI (New Name) affidavit 13.09.2022 Notary Sri H.S.DHARMA PRASAD Bangalore.41

I, LALCHAND DADLANI, R/o #21/1, Dadlani Villa, Craig Park Layout, M.G. Road, Bangalore 560001 have changed my name to LALCHAND BHAGWANDAS DADLANI vide affidavit dated 21.09.2022 before Notary Gangaraju B.N., Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

CHANGE OF NAME
I, **Mrs. DONTHI SRIDHAR SIREESHA RANI** Residing at No. 996, 10th 'A' cross, SBM colony, BSK 1st stage, Bengaluru-560050 have changed my name to **Mrs. SIREESHA SRIDHAR DONTHI** vide affidavit dated 21/09/2022 before notary S.N. Madhu, Bengaluru. Henceforth I shall be called **Mrs. SIREESHA SRIDHAR DONTHI** only

I,ASHWIN V Rao,S/o Vasantha Rao, R/at.#20, Dwarakamai,15 G Cross,Near Oxford School, J.C.Nagar, Bangalore-500086, have changed-my name-from Ashwin V Rao to Mohammed Arham and_religion from Hindu to Islam vide affidavit dated. 20.09.2022, sworn before D.S.Chandrakanth, Advocate_& Notary, Bangalore

I, SHAILENDRA JADON S/o Vinay Singh R/a Flat #104, Durga Coral Apartment Kadubisanahalli, Marathalli Outer Ring Road, Bellandur, Bengaluru- 560103 Have Changed My Minor Son's Name From SHAARAV SINGH JADAUN to SHAARAV SINGH JADON vide Affidavit Dated 20-09-2022 Before Notary P.Nanjunda Bengaluru

I, MEERA V.L W/o. Ningaraju G.S. residing at #124, 30th cross, opp. BHS College, Jayanagar 4th Block East, Bangalore - 560011 have changed my name to MEERA NINGARAJU vide affidavit dated 20/09/2022 before notary Hegde Ganapati Venkatraman, Bangalore

I, GEETHA H is spouse of JC-283848 M Sub Mukunda BM, R/O Hosanagara Road, Sreeramanagara, Ripponpet, Hosanagara(T), Karnataka, I have changed my DOB 03/07/1985 to 31/07/1986. My correct DOB 31/07/1986, vide affidavit dt: 27/06/2022 before notary.

I, NITU SINGH, Spouse of 700345H, JWO, Mrityunjay Kumar Residing at Command Hospital, AF, Bangalore, have changed my name from NITU DEVI to NITU SINGH vide affidavit dated 15/09/2022, before notary A.R. Muneer Ahmed, Bangalore. Henceforth I shall be known NITU SINGH only.

WE, N Somanath and H.N. Geetha Somanath, R/a Yaranagana Halli, Peddhi Palli Post, Oorgumpet, K.G.F. Bangarpet Taluk, Kolar-563121, have changed our minor son's name from NISCHITH GOWDA N.S. to NISCHITH SOMANATH, vide affidavit dated 04.07.2022 before Notary L. Gopalakrishna, Bangalore. Henceforth he shall be known as NISCHITH SOMANATH only.

I, PRIYANKA W/o 6494208X-Hav-RAVISHANKAR. R/a Kailashpur, Gadaepur, Udham Singh Nagar, Uttarakhand changed name from PRIYANKA to PRIYANKA DEVI notary K.V.Mani, Bangalore.

Lost

LOST
I, C.P. Yogeshwar resident at #143, 17th Main Road, Banashankari 2nd Stage. And Smt Sheela Yogeswar resident of address stated above, we have lost the original sale deed, position certificate and allotment letter of the BDA HSR Layout Site No. 1100 and Site No. 1132 while change of house, the same thing has been informed to Jurisdictional Police also the Police issued endorsement the same is published here in if any person found the document mentioned above Please returned the above address or inform the Police Station or Phone No: **9880686167**

ಕ್ಲಾಸಿಫೈಡ್ಸ್ EDUCATION CORNER

CONNECT

ವಿಧಾನಸಭೆಯಲ್ಲಿ ಬೃಹತ್ ಭೂಹಗರಣ ಬಹಿರಂಗಪಡಿಸಿದ ಕಾಂಗ್ರೆಸ್ ಶಾಸಕ ಕೃಷ್ಣ ಬೈರೇಗೌಡ

2 ಎಕರೆ 30 ಗುಂಟೆ ಸ್ವಾಧೀನಕ್ಕೆ 23 ಎಕರೆ ಪರಿಹಾರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಭೂಮಿತಿ (ಯುಎಲ್‌ಸಿ) ಕಾಯ್ದೆಯಡಿ ಸರ್ಕಾರ ಸ್ವಾಧೀನಪಡಿಸಿಕೊಂಡಿದ್ದ 2 ಎಕರೆ 30 ಗುಂಟೆ ಜಮೀನಿಗೆ ಪ್ರತಿಯಾಗಿ 23 ಎಕರೆ ಜಮೀನನ್ನು ವ್ಯಕ್ತಿಯೊಬ್ಬರು ವಾಪಸ್ ಪಡೆದುಕೊಂಡಿರುವ ಭೂ ಹಗರಣವೊಂದನ್ನು ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ವಿಧಾನಸಭೆಯಲ್ಲಿ ಬುಧವಾರ ಬಹಿರಂಗಪಡಿಸಿದರು.

‘ಲಗ್ಗೆರೆ ಗ್ರಾಮದಲ್ಲಿ ಕೆ. ಗೋಪಿನಾಥ್ ಎಂಬುವವರಿಂದ ಯುಎಲ್‌ಸಿ ಕಾಯ್ದೆಯಡಿ 16 ಎಕರೆ 10 ಗುಂಟೆ ಜಮೀನನ್ನು 1981ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಅದರಲ್ಲಿ 4 ಎಕರೆ ಖರಾಬು ಜಮೀನು ಸೇರಿತ್ತು. ಈ ಜಮೀನಿಗೆ ಪರಿಹಾರವನ್ನೂ ನೀಡಲಾಗಿತ್ತು. ಜಮೀನು ಸ್ವಾಧೀನ ಪ್ರಶ್ನಿಸಿ ಮೇಲ್ಮನವಿ ಪ್ರಾಧಿಕಾರ, ಹೈಕೋರ್ಟ್‌ನಲ್ಲಿ ಅವರು ಸಲ್ಲಿಸಿದ್ದ ಅರ್ಜಿಗಳು ತಿರಸ್ಕೃತವಾಗಿದ್ದವು. 2004ರಲ್ಲಿ ಮೇಲ್ಮನವಿಯೊಂದರ ವಿಚಾರಣೆ ನಡೆಸಿದ್ದ ಹೈಕೋರ್ಟ್, ಅರ್ಜಿದಾರರ ಮನವಿ ಪರಿಶೀಲನೆಗೆ ಸೂಚಿತ್ತು. ಅದನ್ನೇ ಬಳಸಿಕೊಂಡು ಭೂಹಗರಣ ನಡೆಸಲಾಗಿದೆ’ ಎಂದು ದೂರಿದರು.

‘2008ರಲ್ಲಿ ಗೋಪಿನಾಥ್ ಕುಟುಂಬದವರು ಸರ್ಕಾರಕ್ಕೆ ಅರ್ಜಿ ಸಲ್ಲಿಸುತ್ತಾರೆ. 2009ರಲ್ಲಿ 4 ಎಕರೆ 20 ಗುಂಟೆ ಜಮೀನು ವಾಪಸ್ ನೀಡಲು ಆದೇಶ ಹೊರಡಿಸಲಾಗುತ್ತದೆ. ಅದರ ಜತೆಗೆ 36 ಗುಂಟೆ ಸರ್ಕಾರದ ಜಮೀನನ್ನೂ ಕಬಳಿಸಿ ಬಡಾವಣೆ ನಿರ್ಮಿಸಿ ಮಾರಾಟ ಮಾಡಲಾಗಿದೆ. ಕೊಳೆಗೇರಿ ಅಭಿವೃದ್ಧಿ ಮಂಡಳಿ ಸ್ವಾಧೀನದಲ್ಲಿದ್ದ 7 ಎಕರೆ 27 ಗುಂಟೆ ಜಮೀನಿನಲ್ಲೂ ಬಡಾವಣೆ ನಿರ್ಮಿಸಿ ಮಾರಿದ್ದಾರೆ. ಇದೇ ವ್ಯಕ್ತಿಯ ಹೆಸರಿಗೆ ಯಲಹಂಕ ತಾಲ್ಲೂಕಿನ ಹೊಸಹಳ್ಳಿ ಗ್ರಾಮದಲ್ಲಿ 11 ಎಕರೆ 30 ಗುಂಟೆ ಬದಲಿ ಜಮೀನು ಮಂಜೂರು ಮಾಡಿ 2012ರಲ್ಲಿ ಆದೇಶ ಹೊರಡಿಸಲಾಗಿದೆ’ ಎಂದು ದಾಖಲೆಗಳನ್ನು ಪ್ರದರ್ಶಿಸಿದರು.

‘ಹೈಕೋರ್ಟ್ ಆದೇಶದಂತೆ ಈ ಪ್ರಕರಣದ ಕುರಿತು ತನಿಖೆ ನಡೆಸಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ, ಅಕ್ರಮ ನಡೆದಿರುವುದನ್ನು ಖಚಿತಪಡಿಸಿ ಇದೇ ಏಪ್ರಿಲ್‌ನಲ್ಲಿ ವರದಿ ನೀಡಿದ್ದಾರೆ. ಯಾವುದೇ ಪರಿಹಾರಕ್ಕೂ ಅರ್ಹವಲ್ಲದ ವ್ಯಕ್ತಿಗೆ ಜಮೀನು ಹಿಂದಿರುಗಿಸಿದ ಮತ್ತು ಪರ್ಯಾಯ ಜಮೀನು ಮಂಜೂರು ಮಾಡಿದ ಆದೇಶಗಳನ್ನು ರದ್ದುಪಡಿಸುವಂತೆ ಶಿಫಾರಸು ಮಾಡಿದ್ದಾರೆ. ಈವರೆಗೂ ಸರ್ಕಾರ ಕ್ರಮ ಕೈಗೊಂಡಿಲ್ಲ’ ಎಂದರು.

ಅಧಿಕಾರಿಗಳು ಶಾಮೀಲು: ‘ಭೂ ಕಬಳಿಕೆಯ ಕರಾಳ ಹಿಡಿತಕ್ಕೆ ಇದೊಂದು ನಿದರ್ಶನ. ಅಧಿಕಾರಿಗಳು ಶಾಮೀಲಾಗದೆ ಇಂತಹ ಹಗರಣ ನಡೆಯಲು ಸಾಧ್ಯವಿಲ್ಲ. ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು. ಜಮೀನು ವಾಪಸ್ ಪಡೆಯಬೇಕು’ ಎಂದು ಜೆಡಿಎಸ್‌ನ ಎ.ಟಿ. ರಾಮಸ್ವಾಮಿ ಆಗ್ರಹಿಸಿದರು.

ಕ್ರಮದ ಭರವಸೆ

‘ಯುಎಲ್‌ಸಿ ಕಾಯ್ದೆಯಡಿ ವಶಪಡಿಸಿಕೊಂಡ ಜಮೀನಿನ ಹೆಸರಿನಲ್ಲಿ ಹೆಚ್ಚಿನ ಜಮೀನು ವಾಪಸ್ ಪಡೆದಿರುವ ಅಕ್ರಮದ ಕುರಿತು ಜಿಲ್ಲಾಧಿಕಾರಿಯವರ ತನಿಖಾ ವರದಿ ಸರ್ಕಾರಕ್ಕೆ ಬಂದಿದೆ. ಈ ಸಂಬಂಧ ಬೆಂಗಳೂರು ಮಹಾನಗರ ಕಾರ್ಯಪಡೆಯಲ್ಲಿ ಪ್ರಕರಣ ದಾಖಲಾಗಿದೆ. ನ್ಯಾಯಾಲಯದ ನಿರ್ದೇಶನ ಸೇರಿ ಎಲ್ಲ ಅಂಶಗಳನ್ನೂ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲಾಗವುದು’ ಎಂದು ಕಂದಾಯ ಸಚಿವ ಆರ್. ಅಶೋಕ ಉತ್ತರಿಸಿದರು.

‘ಉಪನಗರ ರೈಲು ಯೋಜನೆಗೆ ಅನಂತ್ ಕುಮಾರ್ ಹೆಸರು ಶಿಫಾರಸು’

ಬೆಂಗಳೂರು: ‘ಉಪನಗರ ರೈಲು ಯೋಜನೆಗೆ ಕೇಂದ್ರದ ಮಾಜಿ ಸಚಿವ ದಿ. ಎಚ್.ಎನ್. ಅನಂತ್ ಕುಮಾರ್ ಹೆಸರಿಡುವ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜೊತೆ ಮಾತುಕತೆ ನಡೆಸಿ, ಸಂಪುಟ ಸಭೆಯಲ್ಲಿ ಚರ್ಚಿಸಿ ಕೇಂದ್ರಕ್ಕೆ ಶಿಫಾರಸು ಮಾಡುವ ಬಗ್ಗೆ ನಿರ್ಧರಿಸಲಾಗುವುದು’ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಬಿಜೆಪಿಯ ಎಚ್.ಎಸ್. ಗೋಪಿನಾಥ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ನಾಲ್ಕು ಭಾಗಗಳಾಗಿ ವಿಂಗಡಿಸಿದ ಈ ಯೋಜನೆಯ ವೆಚ್ಚ ₹ 5.5 ಸಾವಿರ ಕೋಟಿಯಿಂದ ₹ 15 ಸಾವಿರ ಕೋಟಿಗೆ ಹೆಚ್ಚಿದೆ. ಇದರಲ್ಲಿ ಮೊದಲ ಕಾರಿಡಾರ್ ಬೆಂಗಳೂರಿನಿಂದ ದೇವನಹಳ್ಳಿವರೆಗೆ 41 ಕಿ.ಮೀ. ಇದೆ. ಬೈಯಪ್ಪನಹಳ್ಳಿ-ಚಿಕ್ಕಬಾಣಾವರ, ಕೆಂಗೇರಿ-ವೈಟ್‌ಫೀಲ್ಡ್, ಹೀಲಲಿಗೆ-ರಾಜಾನುಕುಂಟೆ ವಲಯ ಸೇರಿ ಒಟ್ಟು 147 ಕಿ.ಮೀ. ವ್ಯಾಪ್ತಿಯ ಯೋಜನೆಯಿದು’ ಎಂದರು.

‘ಎರಡನೇ ಕಾರಿಡಾರ್ ಬೈಯಪ್ಪನಹಳ್ಳಿ–ಚಿಕ್ಕಬಾಣಾವರ ಕಾಮಗಾರಿ ಕೈಗೆತ್ತಿಕೊಂಡಿದ್ದು, ಇದಕ್ಕೆ ಶೇ 85ರಷ್ಟು ಜಾಗ ಭೂಸ್ವಾಧೀನ ಆಗಿದೆ. ರಾಜ್ಯ ಸರ್ಕಾರ ₹ 600 ಕೋಟಿ ಬಿಡುಗಡೆ ಮಾಡಿದೆ. ಕೇಂದ್ರ ಮತ್ತು ರಾಜ್ಯದ ಪಾಲು ತಲಾ ಶೇ 20. ಉಳಿದ ಶೇ 60ರಷ್ಟನ್ನು ಸಾಲ ಸೌಲಭ್ಯದ ಮೂಲಕ ಪಡೆದುಕೊಳ್ಳಲಾಗುತ್ತದೆ. ಮೊದಲ ಹಂತದ ಕಾಮಗಾರಿ ಆರಂಭಿಸಿದ್ದು, ಎರಡನೇ ಹಂತದ ಕಾಮಗಾರಿ ಪ್ರಕ್ರಿಯೆ ಸದ್ಯದಲ್ಲಿ ಆರಂಭಿಸಲಾಗುತ್ತದೆ. ಮೂರನೇ ಹಂತದ ಟೆಂಡರ್ ಕರೆಯುವ ಕುರಿತು ಕೇಂದ್ರದ ಜೊತೆ ಮಾತುಕತೆ ನಡೆಸಲಾಗುವುದು’ ಎಂದರು.

‘ಈ ಯೋಜನೆ ಪೂರ್ಣಗೊಂಡರೆ 10 ಲಕ್ಷ ಜನರ ಸಂಚಾರಕ್ಕೆ ಅವಕಾಶ ಆಗಲಿದೆ. ಪಾರದರ್ಶಕವಾಗಿ ಇರಬೇಕು ಎಂಬ ಕಾರಣಕ್ಕೆ ಇಡೀ ಯೋಜನೆಯ ರೂಪುರೇಷೆಯನ್ನು ವೆಬ್‌ಸೈಟ್‌ನಲ್ಲಿ ಹಾಕಲಾಗಿದೆ’ ಎಂದೂ ಹೇಳಿದರು.

‘ಆನೆ ಹಾವಳಿಗೆ ದುಪ್ಪಟ್ಟು ಪರಿಹಾರ’

ಬೆಂಗಳೂರು: ಆನೆಗಳ ದಾಳಿಯಿಂದ ಆಗುವ ಮಾನವ ಜೀವ ಹಾನಿ ಹಾಗೂ ಬೆಳೆ ನಷ್ಟಕ್ಕೆ ನೀಡುತ್ತಿರುವ ಪರಿಹಾರದ ಮೊತ್ತವನ್ನು ದ್ವಿಗುಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ವಿಧಾನಸಭೆಯಲ್ಲಿ ಬುಧವಾರ ನಿಯಮ 69ರಡಿ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಕೆ.ಎಸ್. ಲಿಂಗೇಶ್, ಕೆ. ಮಹದೇವ, ಎಚ್.ಕೆ. ಕುಮಾರಸ್ವಾಮಿ ಮತ್ತು ಎ.ಟಿ. ರಾಮಸ್ವಾಮಿ, ‘ಜನವಸತಿ ಪ್ರದೇಶಗಳಿಗೆ ನುಗ್ಗಿ ತೊಂದರೆ ನೀಡುತ್ತಿರುವ ಆನೆಗಳನ್ನು ಸ್ಥಳಾಂತರಿಸಬೇಕು. ಆನೆಗಳು ನಾಡಿನೊಳಕ್ಕೆ ಬರದಂತೆ ತಡೆಯಬೇಕು. ಪ್ರಾಣಹಾನಿ ಮತ್ತು ಬೆಳೆಹಾನಿಗೆ ಹೆಚ್ಚಿನ ಪರಿಹಾರ ನೀಡಬೇಕು’ ಎಂದು ಒತ್ತಾಯಿಸಿದರು.

ಉತ್ತರ ನೀಡಿದ ಮುಖ್ಯಮಂತ್ರಿ, ‘ಆನೆ ಹಾವಳಿ ತಡೆಗೆ ಸಮಗ್ರವಾಗಿ ಕ್ರಮ ಕೈಗೊಳ್ಳಲಾಗುವುದು. ಸೋಲಾರ್ ತಡೆ ಬೇಲಿ ನಿರ್ಮಾಣಕ್ಕೆ ₹ 100 ಕೋಟಿ ಒದಗಿಸಲಾಗಿದೆ. ಎರಡನೇ ಹಂತದಲ್ಲಿ ಇನ್ನಷ್ಟು ಅನುದಾನ ಒದಗಿಸಲಾಗುವುದು’ ಎಂದರು.

‘ವಸತಿ ಪಡೆಯಲು ಆಧಾರ್ ಸಾಕು’

ಬೆಂಗಳೂರು: ‘ವಿವಿಧ ವಸತಿ ಯೋಜನೆಗಳಡಿ ವಸತಿ ಪಡೆಯಲು ಅರ್ಹರಿರುವವರು ಕೇವಲ ಆಧಾರ್ ಸಂಖ್ಯೆ ನೀಡಿದರೆ ಸಾಕು. ಬೇರೆ ದಾಖಲೆಗಳನ್ನು ಕೇಳುವುದಿಲ್ಲ’ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಟಿ.ಎ. ಶರವಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ವಸತಿ ಪಡೆಯಲು ಕೆಲವು ಸಮಸ್ಯೆಗಳಿದ್ದವು. ಅವುಗಳನ್ನು ನಿವಾರಿಸಲಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ಆದಾಯ ಮಿತಿಯನ್ನು ಹೆಚ್ಚಿಸಲಾಗಿದೆ. ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ಸಮಸ್ಯೆ ಇಲ್ಲ’ ಎಂದರು.

ಮುಂದಿನ ತಿಂಗಳು ಶಂಕುಸ್ಥಾಪನೆ: ‘ರಾಯಚೂರು ವಿಮಾನ ನಿಲ್ದಾಣಕ್ಕೆ ಮುಂದಿನ ತಿಂಗಳು ಶಂಕುಸ್ಥಾಪನೆ ನೆರವೇರಿಸಲಾಗುವುದು. ಇದು ಯೋಜನೆಯಾಗಿಯಷ್ಟೆ ಉಳಿಯದೆ, ಕಾರ್ಯಗತ ಆಗಲಿದೆ’ ಎಂದು ವಿ. ಸೋಮಣ್ಣ ಭರವಸೆ ನೀಡಿದರು.

ಕಾಂಗ್ರೆಸ್‌ನ ಶರಣಗೌಡ ಬಯ್ಯಾಪುರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಯೋಜನೆಗೆ ಇನ್ನೂ 22.13 ಎಕರೆ ಭೂಸ್ವಾಧೀನಕ್ಕೆ ಬಾಕಿ ಇದೆ. ಆ ಜಾಗದಲ್ಲಿ ಮನೆ ಕಟ್ಟಿಕೊಂಡವರನ್ನು ಮಾನವೀಯತೆಯಿಂದ ಪರಿಗಣಿಸಲು ಮುಖ್ಯಮಂತ್ರಿ ಸೂಚನೆ ನೀಡಿರುವುದರಿಂದ, ಚರ್ಚಿಸಿ ನಿರ್ಧರಿಸಲಾಗುವುದು’ ಎಂದರು.

ಕಂದಾಯ ದಾಖಲೆ ಡಿಜಿಟಲೀಕರಣ: ‘ಕಂದಾಯ ಇಲಾಖೆಯ ದಾಖಲೆಗಳನ್ನು ಮತ್ತು ರಿಜಿಸ್ಟರ್‌ಗಳನ್ನು ಡಿಜಿಟಲೀಕರಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಡ್ರೋನ್ ಮೂಲಕ ಜಮೀನು ಸರ್ವೆ ಮಾಡಿ ಆಸ್ತಿ ಮಾಲೀಕರಿಗೆ ದಾಖಲೆ ಒದಗಿಸಲಾಗುತ್ತಿದೆ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಪ್ರಶ್ನೆಗೆ ಉತ್ತರಿಸಿದ ಅವರು, '100 ತಾಲ್ಲೂಕುಗಳಲ್ಲಿ ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆಯನ್ನು ಜಾರಿಗೆ ತಂದು ಎಲ್ಲ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗುತ್ತಿದೆ. ಎಲ್ಲ ತಾಲ್ಲೂಕು ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ 312 ಸ್ಕ್ಯಾನರ್ ಖರೀದಿಗೆ ₹ 10 ಕೋಟಿ ಬಿಡುಗಡೆ ಮಾಡಲಾಗಿದೆ’ ಎಂದರು.

ಆಯುಷ್ಮಾನ್ ಕಾರ್ಡ್: 1 ಕೋಟಿ ಗುರಿ

ಬೆಂಗಳೂರು: ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆಯಡಿ ಗುರುತಿನ ಚೀಟಿ ವಿತರಣೆಗೆ ವೇಗ ನೀಡಬೇಕು. ಅ.2ರೊಳಗೆ ಹೊಸದಾಗಿ ಒಂದು ಕೋಟಿ ಕಾರ್ಡ್‌ಗಳನ್ನು ಫಲಾನುಭವಿಗಳಿಗೆ ವಿತರಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಸುತ್ತೋಲೆ ಹೊರಡಿಸಲಾಗಿದ್ದು, ಡಿ.15ರೊಳಗೆ ರಾಜ್ಯದ ಎಲ್ಲ ಫಲಾನುಭವಿಗಳಿಗೆ ಆರೋಗ್ಯ ಕಾರ್ಡ್ ಒದಗಿಸಬೇಕು. ಈ ಸಂಬಂಧ ರಾಜ್ಯದ ಎಲ್ಲ ಜಿಲ್ಲಾ, ತಾಲ್ಲೂಕು, ಸಾರ್ವಜನಿಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳ ಆವರಣದಲ್ಲಿ ಗುರುತಿನ ಚೀಟಿ ವಿತರಣೆ ಕೇಂದ್ರಗಳನ್ನು ಸ್ಥಾಪಿಸಬೇಕು ಎಂದು ಹೇಳಲಾಗಿದೆ.

ದುರಸ್ತಿಯಾಗದ ಮೇಲ್ಸೇತುವೆ: ಆರ್.ಮಂಜುನಾಥ್ ಅಸಮಾಧಾನ



ಮಂಜುನಾಥ್

ಬೆಂಗಳೂರು: ತುಮಕೂರು ರಸ್ತೆಯಲ್ಲಿರುವ ಪೀಣ್ಯ ಮೇಲ್ಸೇತುವೆಯಲ್ಲಿ(ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ) ಭಾರಿ ವಾಹನ ಗಳ ಸಂಚಾರ ನಿರ್ಬಂಧಿಸಿ 9 ತಿಂಗಳಾದರೂ ಸಮಸ್ಯೆ ಬಗೆಹರಿಸದ ಕ್ರಮವನ್ನು ದಾಸರಹಳ್ಳಿ ಶಾಸಕ ಆರ್.ಮಂಜುನಾಥ್ ವಿಧಾನಸಭೆಯಲ್ಲಿ ಮಂಗಳವಾರ ಪ್ರಸ್ತಾಪಿಸಿದರು.

‘ಭಾರಿ ವಾಹನಗಳು ಮೇಲ್ಸೇತುವೆ ಕೆಳಗೆ ಸಾಗುತ್ತಿದ್ದು, ಸಂಚಾರ ದಟ್ಟಣೆ ಉಂಟಾಗುತ್ತಿದೆ. ಇದರ ನಡುವೆ ಎರಡು ತಿಂಗಳ ಹಿಂದಷ್ಟೇ ಐಕಿಯಾ ಎಂಬ ವಿದೇಶಿ ಕಂಪನಿಯು ಗೃಹ ಬಳಕೆ ವಸ್ತುಗಳ ಮಳಿಗೆ ತೆರೆದಿದೆ. ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರ ಇದೆ. ಸುತ್ತಲೂ ಅಪಾರ್ಟ್‌ಮೆಂಟ್ ಸಮುಚ್ಚಯಗಳು ನಿರ್ಮಾಣವಾಗಿವೆ. ಜನವಸತಿ ಹೆಚ್ಚಿಸಲು ಅವಕಾಶ ಕೊಡುವ ಮುನ್ನ ಪರ್ಯಾಯ ರಸ್ತೆಗಳನ್ನು ಸರ್ಕಾರ ನಿರ್ಮಿಸಬಾರದೆ’ ಎಂದು ಪ್ರಶ್ನಿಸಿದರು.

‘ಪೆರಿಫೆರಲ್ ರಿಂಗ್ ರಸ್ತೆ ಪ್ರಸ್ತಾಪ ಹಾಗೇ ಉಳಿದಿದೆ. ಐಕಿಯಾ ಕಂಪನಿಗೆ ಬರುವ ವಾಹನಗಳು ದಾಸರಹಳ್ಳಿ ಸುತ್ತ ಮುತ್ತಲ ಎಲ್ಲಾ ರಸ್ತೆಗಳಲ್ಲೂ ನಿಲ್ಲುತ್ತಿವೆ. ವಾಹನ ನಿಲುಗಡೆಗೆ ಸರಿಯಾದ ವ್ಯವಸ್ಥೆ ಮಾಡದ ಕಂಪನಿ ಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಉದ್ಘಾಟನೆ ಮಾಡಿದರು’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಪಕ್ಕದಲ್ಲೇ ಪೀಣ್ಯ ಕೈಗಾರಿಕಾ ಪ್ರದೇಶ ಇದೆ. ಸಂಚಾರ ದಟ್ಟಣೆ ಸಮಸ್ಯೆ ಕೈಗಾರಿಕೆಗಳ ಮೇಲೆ ಪರಿಣಾಮ ಬೀರುತ್ತಿದೆ. ಇದ್ಯಾವುದನ್ನೂ ಸರ್ಕಾರ ಲೆಕ್ಕಿಸುತ್ತಿಲ್ಲ. ಮೇಲ್ಸೇತುವೆ ದುರಸ್ತಿ ಬಗ್ಗೆ ಆಸಕ್ತಿಯನ್ನೇ ವಹಿಸಿಲ್ಲ. ಟೋಲ್ ಪ್ಲಾಜಾ ಬಳಿ ವಾಹನಗಳು ಸಾಲುಗಟ್ಟಿ ನಿಂತು ಇನ್ನಷ್ಟು ದಟ್ಟಣೆಯಾಗುತ್ತಿದೆ’ ಎಂದುರು.

ಮಂಜುನಾಥ್ ಅವರ ಬೆಂಬಲಕ್ಕೆ ಬಂದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ‘ಐಕಿಯಾ ಕಂಪನಿಯ ಮಳಿಗೆ ತೆರೆದಿರುವುದು ಆ ಭಾಗದಲ್ಲಿ ಹೆಚ್ಚಿನ ವಾಹನ ದಟ್ಟಣೆ ಉಂಟು ಮಾಡುತ್ತಿದೆ. ಅದನ್ನು ಮಂಜುನಾಥ್ ಅವರು ಹೇಳುತ್ತಿದ್ದಾರೆ. ಸರಿಪಡಿಸಲು ಕ್ರಮ ಕೈಗೊಳ್ಳಬೇಕು’ ಎಂದರು.

ಉತ್ತರ ನೀಡಿದ ಬಸವರಾಜ ಬೊಮ್ಮಾಯಿ, ‘ತಾತ್ಕಾಲಿಕವಾಗಿ ಲಘು ವಾಹನಗಳ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಸೇತುವೆ ಸದೃಢಗೊಳಿಸುವ ಕಾಮಗಾರಿ ಕೈಗೆತ್ತಿಕೊಳ್ಳಬೇಕಿದೆ. ಈ ಸಂಬಂಧ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರ ಗಮನಕ್ಕೂ ತಂದಿದ್ದೇನೆ. ಕೂಡಲೇ ಅಂದಾಜು ಸಿದ್ಧಪಡಿಸಿ ಕಳುಹಿಸಲು ಎನ್‌ಎಚ್‌ಎಐ ಅಧಿಕಾರಿಗಳಿಗೆ ಗಡ್ಕರಿ ಅವರು ಸೂಚನೆ ನೀಡಿದರು. ಶೀಘ್ರವೇ ಕಾಮಗಾರಿ ಕೈಗೊಳ್ಳಲು ಕ್ರಮ ವಹಿಸಲಾಗುವುದು’ ಎಂದರು.

ವಕ್ಫ್ ಆಸ್ತಿ ಕಬಳಿಕೆ ವರದಿ ಬಹಿರಂಗಕ್ಕೆ ಉಭಯ ಸದನಗಳಲ್ಲಿ ಪಟ್ಟು

‘ಮಾಣಿಪ್ಪಾಡಿ ವರದಿ ಸಮಗ್ರವಾಗಿ ಮಂಡನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕ್ಫ್ ಆಸ್ತಿಗಳ ಕಬಳಿಕೆ ಮತ್ತು ದುರ್ಬಳಕೆ ಆರೋಪ ಕುರಿತಂತೆ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿದ್ದ ಅನ್ವರ್ ಮಾಣಿಪ್ಪಾಡಿ ಸಲ್ಲಿಸಿರುವ ವರದಿಯನ್ನು ಸಮಗ್ರವಾಗಿ ವಿಧಾನಮಂಡಲದಲ್ಲಿ ಮಂಡಿಸಲಾಗುವುದು. ಎಲ್ಲ ಸದಸ್ಯರಿಗೂ ಪ್ರತಿಗಳನ್ನು ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸಭೆಯಲ್ಲಿ ಬುಧವಾರ ನಿಯಮ–69ರಡಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಕೆ. ರಘುಪತಿ ಭಟ್, ಬಸನಗೌಡ ಪಾಟೀಲ ಯತ್ನಾಳ, ಸಂಜೀವ ಮಠಂದೂರು, ವೇದವ್ಯಾಸ ಕಾಮತ್, ‘ವಕ್ಫ್ ಆಸ್ತಿಗಳ ಕಬಳಿಕೆಗೆ ಸಂಬಂಧಿಸಿದಂತೆ ಅನ್ವರ್ ಮಾಣಿಪ್ಪಾಡಿ ನೇತೃತ್ವದ ಆಯೋಗವು ಸಲ್ಲಿಸಿರುವ ವರದಿಯನ್ನು ನ್ಯಾಯಾಲಯದಲ್ಲಿ ಮಂಡಿಸಬೇಕು’ ಎಂದು ಆಗ್ರಹಿಸಿದರು.

‘₹ 2.30 ಲಕ್ಷ ಕೋಟಿಗಳ ಹಗರಣ ಇದರಲ್ಲಿದೆ. ವಕ್ಫ್ ಮಂಡಳಿ ಸ್ವಾಧೀನದಲ್ಲಿದ್ದ 54,000 ಎಕರೆ ಜಮೀನಿನಲ್ಲಿ 29,000 ಎಕರೆ ಕಬಳಿಕೆಯಾಗಿದೆ. ಈ ಹಗರಣದಲ್ಲಿ ಪ್ರಭಾವಿ ವ್ಯಕ್ತಿಗಳಿದ್ದಾರೆ. ವರದಿಯನ್ನು ಸದನದಲ್ಲಿ ಮಂಡಿಸಿ, ಕ್ರಮ ಜರುಗಿಸಬೇಕು’ ಎಂದು ಆಗ್ರಹಿಸಿದರು.

‘ವಕ್ಫ್ ಮಂಡಳಿಯನ್ನೇ ರದ್ದು ಮಾಡಬೇಕು. ಹಿಂದೂ ಧಾರ್ಮಿಕ ಸಂಸ್ಥೆಗಳ ಮಾದರಿಯಲ್ಲೇ ವಕ್ಫ್ ಆಸ್ತಿಗಳನ್ನೂ ಸರ್ಕಾರದ ವಶಕ್ಕೆ ಪಡೆಯಬೇಕು. ವಿಜಯಪುರದಲ್ಲಿ ಜಿಲ್ಲಾ ಆಸ್ಪತ್ರೆ, ಎಸ್‌ಪಿ ಕಚೇರಿ ಎಲ್ಲವೂ ವಕ್ಫ್ ಆಸ್ತಿ ಎಂದು ಜಿಲ್ಲಾಧಿಕಾರಿಯೊಬ್ಬರು ದಾಖಲೆ ತಿದ್ದಿದ್ದಾರೆ. ಕೆಲವೇ ರಾಜಕೀಯ ಮುಖಂಡರು ಲಕ್ಷಾಂತರ ಕೋಟಿ ಲೂಟಿ ಹೊಡೆದಿದ್ದಾರೆ. ಈ ಕುರಿತು ಸಿಬಿಐ ತನಿಖೆ ನಡೆಸಿ’ ಎಂದು ಯತ್ನಾಳ ಆಗ್ರಹಿಸಿದರು.

‘ಎರಡೂವರೆ ವರ್ಷದಿಂದ ಅಧಿಕಾರದಲ್ಲಿದ್ದೀರಿ. ಈಗ ಅಲ್ಪಸಂಖ್ಯಾತರ ಬಗ್ಗೆ ಕಾಳಜಿ ವಹಿಸುತ್ತಿರುವ ಬಿಜೆಪಿ ಶಾಸಕರಿಗೆ ಅಭಿನಂದನೆ. 40 ಪರ್ಸೆಂಟ್ ಕಮಿಷನ್ ಆರೋಪಕ್ಕೆ ಪ್ರತಿಯಾಗಿ ವಕ್ಫ್ ಮಂಡಳಿ ಆಸ್ತಿ ವಿಚಾರ ತಂದಿದ್ದೀರಾ’ ಎಂದು ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್ ಪ್ರಶ್ನಿಸಿದರು.

ಉತ್ತರ ನೀಡಿದ ಮುಜರಾಯಿ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ, ‘2012ರ ಮಾರ್ಚ್ 26ರಂದು ಮಾಣಿಪ್ಪಾಡಿ ನೇತೃತ್ವದ ಆಯೋಗ ವರದಿ ಸಲ್ಲಿಸಿತ್ತು. ನಂತರ ಬಂದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ವರದಿಯನ್ನು ತಿರಸ್ಕರಿಸುವ ತೀರ್ಮಾನ ಕೈಗೊಂಡಿತ್ತು. ಹೈಕೋರ್ಟ್ ನಿರ್ದೇಶನದಂತೆ ಬಿಜೆಪಿ ಸರ್ಕಾರವು 2020ರಲ್ಲಿ ವಿಧಾನಮಂಡಲದಲ್ಲಿ ವರದಿ ಮಂಡಿಸಿದೆ. ಉಪ ಲೋಕಾಯುಕ್ತರಿಂದಲೂ ತನಿಖಾ ವರದಿ ಬಂದಿದೆ. ಕ್ರಮ ಕೈಗೊಳ್ಳುವ ಕುರಿತು ಸಂಪುಟದಲ್ಲಿ ಚರ್ಚೆ ನಡೆದಿದೆ’ ಎಂದರು.

ನಂತರವೂ ಗದ್ದಲ ಮುಂದುವರಿಯಿತು. ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಕೂಡ ವಿವರವಾದ ಉತ್ತರ ನೀಡಿದರು. ಬಳಿಕ ಉತ್ತರಿಸಿದ ಮುಖ್ಯಮಂತ್ರಿ, ‘ವರದಿಯನ್ನು ಸಮಗ್ರವಾಗಿ ಮಂಡಿಸುತ್ತೇವೆ. ಉಪ ಲೋಕಾಯುಕ್ತರ ವರದಿಯನ್ನೂ ಪರಿಶೀಲಿಸುತ್ತೇವೆ. ಹೆಚ್ಚಿನ ತನಿಖೆ ಸೇರಿದಂತೆ ಅಗತ್ಯವಿರುವ ಎಲ್ಲ ಕ್ರಮಗಳನ್ನೂ ಕೈಗೊಳ್ಳುತ್ತೇವೆ’ ಎಂದರು.

ಪರಿಷತ್‌ನಲ್ಲಿ ಒಂದು ಗಂಟೆ ಗದ್ದಲ

ವಕ್ಫ್ ಆಸ್ತಿ ಕಬಳಿಕೆಗೆ ಸಂಬಂಧಿಸಿದ ವರದಿ ಮಂಡಿಸಬೇಕೆಂದು ಆಡಳಿತ ಪಕ್ಷದ ಸದಸ್ಯರೇ ಗದ್ದಲ ಎಬ್ಬಿಸಿದ್ದರಿಂದಾಗಿ ವಿಧಾನ ಪರಿಷತ್‌ನಲ್ಲಿ ಬುಧವಾರ ಒಂದು ಗಂಟೆ ಕಾಲ ಕಲಾಪ ನಡೆಯಲಿಲ್ಲ.

ಸಭಾಪತಿ ರಘುನಾಥ ರಾವ್ ಮಲ್ಕಾಪುರೆ ಪ್ರಶ್ನೋತ್ತರ ಆರಂಭಿಸುತ್ತಿದ್ದಂತೆ ಮಧ್ಯ ಪ್ರವೇಶಿಸಿದ ಸರ್ಕಾರದ ಮುಖ್ಯ ಸಚೇತಕ ವೈ.ಎ. ನಾರಾಯಣಸ್ವಾಮಿ, ‘ವಕ್ಫ್ ಆಸ್ತಿ ಕಬಳಿಕೆ ಕುರಿತು ಅನ್ವರ್ ಮಾಣಿಪ್ಪಾಟಿ ಸಲ್ಲಿಸಿರುವ ವರದಿ ಮಂಡಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು’ ಎಂದು ಆಗ್ರಹಿಸಿದರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಸದನದ ನಿಯಮದಂತೆ ಪ್ರಶ್ನೋತ್ತರ ಆರಂಭಿಸಲು ಪಟ್ಟು ಹಿಡಿದರು. ಇದೇ ವಿಚಾರದಲ್ಲಿ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ತೀವ್ರ ವಾಕ್ಸಮರ ನಡೆಯಿತು.

ಆರ್‌ಟಿಐ ನೇಮಕ ಪ್ರಶ್ನಿಸಿದ್ದ ಅರ್ಜಿ: ₹ 5 ಲಕ್ಷ ದಂಡ

ಬೆಂಗಳೂರು: ಮಾಹಿತಿ ಹಕ್ಕು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಗೆ ಸಂಬಂಧಿಸಿದಂತೆ ಕ್ಷುಲ್ಲಕ ಅರ್ಜಿ ಸಲ್ಲಿಸಿದ್ದ ಆರೋಪದಡಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ವಕೀಲರೊಬ್ಬರಿಗೆ ಹೈಕೋರ್ಟ್ ₹ 5 ಲಕ್ಷ ದಂಡ ವಿಧಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಸುಳ್ಯ ತಾಲ್ಲೂಕಿನ ಕಳಂಜದ ವಕೀಲ ಪಿ.ಮೋಹನ್ ಚಂದ್ರ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ಹಾಗೂ ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

‘ಅರ್ಜಿದಾರ ಪಿ.ಮೋಹನ್ ಚಂದ್ರ ದಂಡದ ಮೊತ್ತವನ್ನು ಎರಡು ತಿಂಗಳಲ್ಲಿ ಬೆಂಗಳೂರು ವಕೀಲರ ಸಂಘಕ್ಕೆ ಪಾವತಿಸಬೇಕು’ ಎಂದು ಆದೇಶಿಸಿರುವ ನ್ಯಾಯಪೀಠ, ಆದೇಶವನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲು ಸಮಯಾವಕಾಶ ಕೋರಿದ ಅರ್ಜಿದಾರರ ಮನವಿಯನ್ನು ತಿರಸ್ಕರಿಸಿದೆ.

‘ಅರ್ಜಿದಾರರು ವಕೀಲರಾಗಿದ್ದರೂ ಪಾರ್ಟಿ ಇನ್ ಪರ್ಸನ್ (ಸ್ವತಃ ವಾದ ಮಂಡಿಸುವ ಅರ್ಜಿದಾರ) ಎಂದು ಹೇಳಿ ಮಾಹಿತಿಯನ್ನು ಮುಚ್ಚಿಟ್ಟಿದ್ದಾರೆ. ಆ ಮೂಲಕ ನ್ಯಾಯಾಂಗದ ಸಮಯವನ್ನು ವ್ಯರ್ಥ ಮಾಡಿದ್ದಾರೆ. ಇಂತಹ ಪ್ರಯತ್ನಗಳನ್ನು ಕಠಿಣ ರೀತಿಯಲ್ಲಿ ಹತ್ತಿಕ್ಕಲಾಗುವುದು’ ಎಂದು ನ್ಯಾಯಪೀಠ ಎಚ್ಚರಿಸಿದೆ.

ಮಾಹಿತಿ ಹಕ್ಕು ಆಯೋಗದ ಅಧ್ಯಕ್ಷರು ಹಾಗೂ ಇಬ್ಬರು ಸದಸ್ಯರ ನೇಮಕ ಮಾಡಿ 2019ರ ಫೆಬ್ರುವರಿ 22ರಂದು ಹೊರಡಿಸಲಾದ ಸರ್ಕಾರದ ಆದೇಶ ಏಕಪಕ್ಷೀಯವಾಗಿದೆ. ಸಂವಿಧಾನದ 21 ಮತ್ತು 141ನೇ ವಿಧಿಗಳಿಗೆ ವಿರುದ್ಧವಾಗಿದೆ’ ಎಂದು ಅರ್ಜಿದಾರರು ಆರೋಪಿಸಿದ್ದರು.

‘ದೇಶದಲ್ಲಿ ವರ್ಷಕ್ಕೆ 8 ಲಕ್ಷ ಕ್ಯಾನ್ಸರ್ ಪ್ರಕರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಧುನಿಕ ಜೀವನ ವಿಧಾನ, ಪಾಶ್ಚಾತ್ಯ ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಕ್ಯಾನ್ಸರ್ ನೋಂದಣಿ ದತ್ತಾಂಶದ ಪ್ರಕಾರ ದೇಶದಲ್ಲಿ ಪ್ರತಿ ವರ್ಷ 8 ಲಕ್ಷ ಪ್ರಕರಣಗಳು ಹೊಸದಾಗಿ ಪತ್ತೆಯಾಗುತ್ತಿವೆ’ ಎಂದು ಆಸ್ಟರ್ ಡಿಎಂ ಹೆಲ್ತ್‌ಕೇರ್‌ನ ಪ್ರಾದೇಶಿಕ ನಿರ್ದೇಶಕ ಡಾ. ನಿತೀಶ್ ಶೆಟ್ಟಿ ಕಳವಳ ವ್ಯಕ್ತಪಡಿಸಿದರು.

ಆಸ್ಟರ್ ಡಿಎಂ ಹೆಲ್ತ್‌ಕೇರ್ ನಗರದಲ್ಲಿ ಬುಧವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಆಸ್ಟರ್ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ ಕೇಂದ್ರಕ್ಕೆ ಚಾಲನೆ ನೀಡಲಾಯಿತು.

‘ಬಹುತೇಕ ಕ್ಯಾನ್ಸರ್ ಪೀಡಿತರು ರೋಗ ಉಲ್ಬಣಗೊಂಡ ಬಳಿಕ ಚಿಕಿತ್ಸೆಗೆ ತೆರಳುತ್ತಾರೆ. ಕ್ಯಾನ್ಸರ್ ಇರುವುದು ಪ್ರಾಥಮಿಕ ಹಂತದಲ್ಲಿಯೇ ಪತ್ತೆಯಾದರೆ ಅಗತ್ಯ ಚಿಕಿತ್ಸೆ ನೀಡಿ, ಗುಣಪಡಿಸಬಹುದು. ಆದ್ದರಿಂದ ಅತ್ಯಾಧುನಿಕ ತಂತ್ರಜ್ಞಾನಗಳ ನೆರವಿನಿಂದ ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆಗೆ ಕ್ರಮವಹಿಸಲಾಗಿದೆ. ನಮ್ಮ ಕೇಂದ್ರವು ಸದ್ಯ ಬೆಂಗಳೂರು ಕೇಂದ್ರೀಕೃತವಾಗಿರಲಿದೆ. ಮುಂದಿನ ದಿನಗಳಲ್ಲಿ ಸೇವೆಯನ್ನು ರಾಜ್ಯದಾದ್ಯಂತ ವಿಸ್ತರಿಸಲಾಗುವುದು’ ಎಂದು ನಿತೀಶ್ ಶೆಟ್ಟಿ ಹೇಳಿದರು.



ಆಸ್ಟರ್ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಆಂಕೊಲಾಜಿ ಕೇಂದ್ರಕ್ಕೆ ಡಾ. ಆಜಾದ್ ಮೂಪೆನ್ ಚಾಲನೆ ನೀಡಿದರು. ಡಾ. ನಿತೀಶ್ ಶೆಟ್ಟಿ, ಪ್ರೊ. ಸೋಮಶೇಖರ್ ಎಸ್‌.ಪಿ., ಆಸ್ಟರ್ ಸಿಎಂಐ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್. ರಮೇಶ್ ಕುಮಾರ್ ಇದ್ದರು

ಆಸ್ಟರ್ ಡಿಎಂ ಹೆಲ್ತ್‌ಕೇರ್ ವ್ಯವಸ್ಥಾಪಕ ನಿರ್ದೇಶಕ ಡಾ. ಆಜಾದ್ ಮೂಪೆನ್, ‘ಭಾರತದಲ್ಲಿ ಕ್ಯಾನ್ಸರ್ ಪ್ರಮುಖ ಸಾರ್ವಜನಿಕ ಅನಾರೋಗ್ಯ ಸಮಸ್ಯೆಯಾಗಿ ಹೊರಹೊಮ್ಮುತ್ತಿದೆ. ಪ್ರತಿದಿನ ಸರಾಸರಿ 1,300ಕ್ಕೂ ಹೆಚ್ಚು ಭಾರತೀಯರು ಈ ಕಾಯಿಲೆಯಿಂದ ಮೃತಪಡುತ್ತಿದ್ದಾರೆ. ಕ್ಯಾನ್ಸರ್ ಚಿಕಿತ್ಸೆಯಲ್ಲಿ ವಿಶೇಷ ಮೂಲಸೌಕರ್ಯ ಮತ್ತು ಪರಿಣತಿ ಅಗತ್ಯ. ಹೊಸದಾಗಿ ಪ್ರಾರಂಭಿಸಲಾದ ಕೇಂದ್ರವು ಒಂದೇ ಸೂರಿನಡಿ ಎಲ್ಲಾ ರೀತಿಯ ಕ್ಯಾನ್ಸರ್‌ಗಳಿಗೆ ಚಿಕಿತ್ಸೆ ಒದಗಿಸಲಿದೆ’ ಎಂದು ತಿಳಿಸಿದರು.

ಕೇಂದ್ರದ ನಿರ್ದೇಶಕ ಪ್ರೊ. ಸೋಮಶೇಖರ್ ಎಸ್. ಪಿ., ‘ರಾಜೀವ್ ಗಾಂಧಿ ವಿಶ್ವವಿದ್ಯಾಲಯ ಅಥವಾ ಸರ್ಕಾರದ ಮಾನ್ಯತೆ ಹೊಂದಿದ ವಿಶ್ವವಿದ್ಯಾಲಯದ ಸಹಯೋಗದಲ್ಲಿ ತರಬೇತಿ ಕಾರ್ಯಕ್ರಮ ನಡೆಸಲಾಗುವುದು. ಕ್ಲಿನಿಕಲ್ ಪ್ರಯೋಗಗಳಿಗಾಗಿ ವಿಶೇಷ ಸಂಶೋಧನಾ ವಿಭಾಗವಿರುತ್ತದೆ’ ಎಂದು ವಿವರಿಸಿದರು.

ಪಂಚಮಸಾಲಿ ಮೀಸಲಾತಿಗೆ ಯಡಿಯೂರಪ್ಪ ಅಡ್ಡಿಪಡಿಸಿಲ್ಲ: ನಿರಾಣಿ

ಬೆಂಗಳೂರು: ಪಂಚಮಸಾಲಿಗಳಿಗೆ ‘2ಎ’ ಮೀಸಲಾತಿ ನೀಡಲು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಡ್ಡಗಾಲು ಹಾಕಿಲ್ಲ ಎಂದು ಕೈಗಾರಿಕಾ ಸಚಿವ ಡಾ.ಮುರುಗೇಶ ನಿರಾಣಿ ಹೇಳಿದರು.

ವಿಧಾನಸೌಧದಲ್ಲಿ ಬುಧವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.

ಯಡಿಯೂರಪ್ಪ ತಮ್ಮ ಸಮುದಾಯಕ್ಕೆ ಮೀಸಲಾತಿ ನೀಡದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೇಲೆ ಒತ್ತಡ ಹಾಕಿದ್ದಾರೆ ಎಂದು ಅವರ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಲು ಪಂಚಮಸಾಲಿ ಸಮುದಾಯದ ಜಯಮೃತ್ಯುಂಜಯ ಸ್ವಾಮೀಜಿ ಕರೆ ನೀಡಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಂಚಮಸಾಲಿ ಸಮುದಾಯಕ್ಕೆ ನ್ಯಾಯ ಒದಗಿಸಲು ಯಡಿಯೂರಪ್ಪ ಅವರು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಶೈಕ್ಷಣಿಕ, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದಿರುವ ಪಂಚಮಸಾಲಿ ಸಮುದಾಯದ ಅಭಿವೃದ್ಧಿಗೆ ಪ್ರಾಧಿಕಾರ ರಚಿಸಿ, ₹ 500 ಕೋಟಿ ಅನುದಾನ ಕೊಟ್ಟಿದ್ದರು. ‘2ಎ’ ಮೀಸಲಾತಿಗೆ ಸಂಪುಟ ಉಪ ಸಮಿತಿ ರಚಿಸಿದ್ದರು ಎಂದು ಸ್ಮರಿಸಿದರು.

ಮುಖ್ಯಮಂತ್ರಿ ಪಂಚಮಸಾಲಿ ಸಮುದಾಯಕ್ಕೆ ನ್ಯಾಯ ಒದಗಿಸುವ ಭರವಸೆ ನೀಡಿದ್ದಾರೆ. ಸರ್ಕಾರ ಈಗಾಗಲೇ ಹಿಂದುಳಿದ ವರ್ಗಗಳ ಶಾಶ್ವತ ಆಯೋಗಕ್ಕೆ ಶಿಫಾರಸು ಮಾಡಿದೆ. ಕುಲಶಾಸ್ತ್ರ ಅಧ್ಯಯನ ನಡೆಸುತ್ತಿದೆ. ಆಯೋಗದ ವರದಿ ನಂತರ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದರು.

ಚಿರತೆ ಚರ್ಮ, ಹುಲಿ ಉಗುರು ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿರತೆ ಚರ್ಮ ಮಾರಾಟ ಯತ್ನಿಸುತ್ತಿದ್ದ ಮೂವರು ಆರೋಪಿಗಳನ್ನು ಹನುಮಂತನಗರ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆಯ ಬಾಗೂರಿನ ಮುನೀರ್ ಬಾಷಾ (39), ಬಳ್ಳಾರಿಯ ಮೋಕಾ ರಸ್ತೆಯ ನಿವಾಸಿ ಎಂ.ಜಿ.ಶ್ರೀನಿವಾಸ ರಾವ್ (54), ಕೋಲಾರ ಜಿಲ್ಲೆ ಮುಳುಬಾಗಿಲಿನ ಶಾಮಿದ್ ಮೊಹಲ್ಲಾದ ಸೈಯದ್ ಅಕ್ಬರ್ (50) ಬಂಧಿತರು.

‘ಅನಂತಯಾನ’ ಪುಸ್ತಕ ಬಿಡುಗಡೆ ಮಾಡಿದ ವಿಶ್ವೇಶ್ವರ ಹೆಗಡೆ ಕಾಗೇರಿ

ವಿಷವರ್ತುಲದಲ್ಲಿ ಪ್ರಜಾಪ್ರಭುತ್ವದ ಅಂಗಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸ್ತುತ ಸನ್ನಿವೇಶದಲ್ಲಿ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಹಾಗೂ ಪತ್ರಿಕಾ ಕ್ಷೇತ್ರ ವಿಷವರ್ತುಲದಲ್ಲಿವೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ವಿಶ್ಲೇಷಿಸಿದರು.

ತೇಜಸ್ವಿನಿ ಅನಂತಕುಮಾರ್ ಅವರ ಅದಮ್ಯ ಚೇತನ ಸಂಸ್ಥೆ ಬುಧವಾರ ಆಯೋಜಿಸಿದ್ದ ಅನಂತಕುಮಾರ್–63 ಕಾರ್ಯಕ್ರಮದಲ್ಲಿ ‘ಅನಂತಯಾನ’ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಎಲ್ಲ ಕ್ಷೇತ್ರಗಳೂ ಮೌಲ್ಯಗಳನ್ನು ಕಳೆದುಕೊಳ್ಳುತ್ತಿವೆ. ಅಧಿವೇಶನದಲ್ಲೂ ತಾಳ್ಮೆಯಿಂದ ಕಲಾಪ ನಡೆಸಲು ಸಾಧ್ಯವಾಗುತ್ತಿಲ್ಲ. ಪ್ರತಿಯೊಬ್ಬರೂ ವೈಯಕ್ತಿಕ ಸ್ವಾರ್ಥ ತೊರೆದು, ಸಮಾಜಮುಖಿಯಾಗಿ ಚಿಂತಿಸಿದಾಗ ಮೌಲ್ಯಗಳನ್ನು ಪುನರ್ ಸ್ಥಾಪಿಸಬಹುದು. ಅದಕ್ಕೆ ಅನಂತಕುಮಾರ್ ಒಳ್ಳೆಯ ಮಾದರಿ ಎಂದು ಬಣ್ಣಿಸಿದರು.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿದ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, "ಸಮಾಜ ನೀಡುವ ಸಣ್ಣ ನೆರವು ಹಲವು ವಿದ್ಯಾರ್ಥಿಗಳ ಭವಿಷ್ಯ ರೂಪಿಸುತ್ತದೆ. ಅಂಥವರು ಸಮಾಜದ ಋಣ ಮರಳಿಸುವ ಮೂಲಕ ನೆರವಿನ ಪರಂಪರೆ ಬಲಗೊಳಿಸುತ್ತಾರೆ' ಎಂದು ಹೇಳಿದರು.



ಅದಮ್ಯ ಚೇತನ ಬುಧವಾರ ಆಯೋಜಿಸಿದ್ದ ಅನಂತಕುಮಾರ್–63 ಕಾರ್ಯಕ್ರಮದಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ‘ಅನಂತಯಾನ’ ಪುಸ್ತಕ ಬಿಡುಗಡೆ ಮಾಡಿದರು. ತೇಜಸ್ವಿನಿ ಅನಂತಕುಮಾರ್, ಸಚಿವ ಬಿ.ಸಿ.ನಾಗೇಶ್, ವಿ.ನಾಗರಾಜ ಇದ್ದಾರೆ ಪ್ರಜಾವಾಣಿ ಚಿತ್ರ.

ಒಂದು ಸರ್ಕಾರ ಮಾಡಬೇಕಾದ ಕೆಲಸವನ್ನು ಅನಂತಕುಮಾರ್ ಅವರ ವಿವಿಧ ಸೇವಾ ಸಂಸ್ಥೆಗಳು ಮಾಡುತ್ತಿವೆ. ಅನಂತ ಪ್ರೇರಣಾ, ಅದಮ್ಯ ಚೇತನ, ಗಿರಿಜಾಶಾಸ್ತ್ರಿ ಸ್ಮಾರಕ ಸಂಸ್ಥೆ, ಅನಂತಕುಮಾರ್ ಪ್ರತಿಷ್ಠಾನಗಳ ಮೂಲಕ ತೇಜಸ್ವಿನಿ ಅನಂತಕುಮಾರ್ ಅವರು ಹತ್ತು ಹಲವು ಜನೋಪಕಾರ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ನಟಿ ತಾರಾ ಅನೂರಾಧ ಅವರು ಅನಂತಕುಮಾರ್ ಜೀವನ ಪಯಣದ ಚಿತ್ರಗಳ ಗ್ಯಾಲರಿ ‘ಪ್ರದರ್ಶಿನಿ’ ಉದ್ಘಾಟಿಸಿದರು. ಉತ್ತಮ ಅಂಕ ಪಡೆದ 70 ಪ್ರೌಢಶಾಲೆಗಳವರನ್ನು ಗೌರವಿಸಲಾಯಿತು.

‘ಮುಲ್ಕನಾಡು’ ನೀಡುವ ಸರ್.ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ ಸಿ.ಎಸ್.ಆರ್. ಸತ್ಯನಾರಾಯಣರಾವ್ ಅವರಿಗೆ, ಅನಂತ ಕುಮಾರ್ ಪ್ರಶಸ್ತಿಯನ್ನು ಕೆ.ಆರ್. ಎಸ್. ಮೂರ್ತಿಗೆ ಅವರಿಗೆ ಪ್ರದಾನ ಮಾಡಲಾಯಿತು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್, ಲೇಖಕ ದೊಡ್ಡ ರಂಗೇಗೌಡ, ಬೆಂಗಳೂರು ದಕ್ಷಿಣ ಡಿಸಿಪಿ ಕೃಷ್ಣಕಾಂತ್, ಗುಜರಾತ್‌ನ ಸಮಾಜಸೇವಕ ಸಾವಜೀ ಭಾಯಿ ವಕಾರಿಯಾ, ಕಿದ್ವಾಯಿ ಸಂಸ್ಥೆ ನಿರ್ದೇಶಕ ಡಾ.ಸಿ.ರಾಮಚಂದ್ರ, ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ ಬಳ್ಳಿ, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪಿ.ವಿ.ಕೃಷ್ಣಭಟ್ ಇದ್ದರು.

ಪುಸ್ತಕ ಪರಿಚಯ

ಪುಸ್ತಕ:	ಅನಂತಯಾನ
ಲೇಖಕ:	ಟಿ.ಎಸ್.ಗೋಪಾಲ್
ಪ್ರಕಾಶನ:	ಸಾಹಿತ್ಯಪ್ರಕಾಶನ, ಹುಬ್ಬಳ್ಳಿ
ಪುಟಗಳು:	*312*
ಬೆಲೆ:	*₹295*

ಮೆಗ್ಗಾನ್ ಆಸ್ಪತ್ರೆಗೆ ದಾಖಲಾದ ಮುರುಘಾಶ್ರೀ

ಶಿವಮೊಗ್ಗ: ಪ್ರೌಢಶಾಲೆ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರನ್ನು ಹೃದಯ ತಪಾಸಣೆಗಾಗಿ ಬುಧವಾರ ರಾತ್ರಿ ಚಿತ್ರದುರ್ಗದಿಂದ ಶಿವಮೊಗ್ಗಕ್ಕೆ ಕರೆತರಲಾಯಿತು.

ಕೇಂದ್ರ ಕಾರಾಗೃಹಕ್ಕೆ ಪೊಲೀಸ್ ವಾಹನ ದಲ್ಲಿ ಆರೋಪಿಯನ್ನು ಕರೆತಂದ ಬಳಿಕ ಮುಖ್ಯ ಅಧೀಕ್ಷಕಿ ಸಿ.ಎಸ್.ಅನಿತಾ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಕಾರಾಗೃಹದ ಸುಪರ್ದಿಗೆ ಪಡೆದರು. ವೈದ್ಯರ ಶಿಫಾರಸ್ಸಿನಂತೆ ಅವರನ್ನು ಹೃದಯ ತಪಾಸಣೆಗೆ ಮೆಗ್ಗಾನ್ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ವೈದ್ಯರ ತಂಡ ರಚನೆ: ‘ಮುರುಘಾ ಶರಣರ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆಗಾಗಿ ಆಸ್ಪತ್ರೆಯ ವೈದ್ಯರನ್ನು ಒಳಗೊಂಡ ತಂಡ ರಚಿಸಲಾಗಿದೆ. ಕಾರ್ಡಿಯಾಲಜಿ ವಿಭಾಗದ ಮುಖ್ಯಸ್ಥ ಡಾ.ಪರಮೇಶ್ವರಪ್ಪ ತಂಡದ ನೇತೃತ್ವ ವಹಿಸಿದ್ದಾರೆ’ ಎಂದು ಶಿವಮೊಗ್ಗ ವೈದ್ಯಕೀಯ ಶಿಕ್ಷಣ ಸಂಸ್ಥೆ (ಸಿಮ್ಸ್) ಮುಖ್ಯಸ್ಥ ಡಾ.ವಿ.ವಿರೂಪಾಕ್ಷಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

ನಿಧನ ವಾರ್ತೆ

ಟಿ. ದಯಾಕರ್



ಬೆಂಗಳೂರು: ಕಿರ್ಲೋಸ್ಕರ್ ಹಾಗೂ ಇತರೆ ಕಂಪನಿಗಳಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡಿದ್ದ ಟಿ. ದಯಾಕರ್ (76) ಬುಧವಾರ ನಿಧನರಾದರು. ಅವರಿಗೆ ಪತ್ನಿ, ಮೂವರು ಪುತ್ರಿಯರು ಇದ್ದಾರೆ.

ಬನಶಂಕರಿಯ ಚಿತಾಗಾರದಲ್ಲಿ ದಯಾಕರ್ ಅವರ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.


ಚಿತ್ರಾವಳಿ



ಮಾಗಡಿ ರಸ್ತೆ ಸುಮನಹಳ್ಳಿ ಬಳಿ ಮೇಲ್ಸೇತುವೆಯಲ್ಲಿನ ಗುಂಡಿ ಪರಿಶೀಲನೆ ಕಾರ್ಯ ಗುರುವಾರದಿಂದ ಆರಂಭವಾಗಲಿದ್ದು, ಕಾರ್ಮಿಕರು ಕೆಲಸ ಆರಂಭಿಸಿದರು. ತಜ್ಞರ ಪರಿಶೀಲನೆ ನಂತರ ಅವರ ವರದಿಯನುಸಾರ ಗುಂಡಿ ದುರಸ್ತಿ ಕಾರ್ಯ ಆರಂಭವಾಗಲಿದೆ



ಕ್ರಿಯಾ ಮಾಧ್ಯಮ ಹಾಗೂ ನವಕರ್ನಾಟಕ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಬುಧವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ನಾ. ದಿವಾಕರ (ಎಡದಿಂದ ನಾಲ್ಕನೆಯವರು) ಅವರು ಅನುವಾದಿಸಿದ ‘ಜರ್ಮನ್ ರೈತ ಯುದ್ಧ’ ಪುಸ್ತಕವನ್ನು ಚಿಂತಕ ಜಿ.ಎನ್. ನಾಗರಾಜ್ (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. ಲೇಖಕ ವಸಂತರಾಜ್ ಎನ್.ಕೆ., ಜನಸಂಗ್ರಾಮ ಪರಿಷತ್ ಸಂಸ್ಥಾಪಕ ರಾಘವೇಂದ್ರ ಕುಷ್ಟಗಿ, ಎಐಕೆಎಸ್ ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಪಿ.ವಿ. ಲೋಕೇಶ್, ಸಿದ್ಧನಗೌಡ ಪಾಟೀಲ ಮತ್ತು ನವೀನ್ ಕುಮಾರ್ ಎಚ್.ಆರ್. ಇದ್ದಾರೆ –ಪ್ರಜಾವಾಣಿ ಚಿತ್ರ



ಬಾದಾಮಿ ತಾಲ್ಲೂಕಿನ ಕೆರೂರು ಗ್ರಾಮದ ಅಂಗವಿಕಲ ಶಿವಾನಂದ ಈರಪ್ಪ ಸುಂಕದ ಅವರಿಗೆ ಜೀವನೋಪಾಯಕ್ಕೆ ಅನುಕೂಲ ಆಗುವಂತೆ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್.ಶಿವಣ್ಣ ಅವರು ಬೆಂಗಳೂರಿನಲ್ಲಿ ಕಂಪ್ಯೂಟರ್ ವಿತರಿಸಿದರು. ಸುಜಾತಾ ಬೇವಿನಹಾಳ ಇದ್ದರು – ಪ್ರಜಾವಾಣಿ ಚಿತ್ರ



ಚಿನ್ನಾಭರಣ ಕಂಪನಿ ಜೋಯಾಲುಕ್ಕಾಸ್‌ಗೆ ಬೆಂಗಳೂರಿನಲ್ಲಿ ಈಚೆಗೆ ನಡೆದ ‘ದಕ್ಷಿಣ ಆಭರಣ ಪ್ರದರ್ಶನ – 2022’ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅತ್ಯುತ್ತಮ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಪ್ರಶಸ್ತಿ ಪ್ರದಾನ ಮಾಡಿದರು. ಕಂಪನಿಯ ಕರ್ನಾಟಕ ವಲಯದ ಪ್ರಾದೇಶಿಕ ವ್ಯವಸ್ಥಾಪಕ ಜಿನೇಶ್ ವಿ.ಎಸ್. ಅವರು ಪ್ರಶಸ್ತಿ ಸ್ವೀಕರಿಸಿದರು

5 ಮಸೂದೆಗಳಿಗೆ ಅನುಮೋದನೆ

ಬೆಂಗಳೂರು: ವಿಧಾನಸಭೆ ಅಂಗೀಕರಿಸಿದ್ದ ಐದು ಮಸೂದೆಗಳಿಗೆ ವಿಧಾನ ಪರಿಷತ್ ಬುಧವಾರ ಅನುಮೋದನೆ ನೀಡಿತು.

ಬಿಬಿಎಂಪಿಯಲ್ಲಿ ಎಸ್‌ಸಿ,ಎಸ್‌ಟಿ,ಒಬಿಸಿ ಮತ್ತು ಮಹಿಳೆಯರಿಗೆ ಶೇ 50 ರಷ್ಟು ಮೀಸಲಾತಿ ನೀಡುವ ಉದ್ದೇಶದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ಮಸೂದೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಮಸೂದೆ, ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಮಸೂದೆಗೆ ಅನುಮೋದನೆ ನೀಡಲಾಯಿತು.

ಜತೆಗೆ, ಆನ್‌ಲೈನ್‌ನಲ್ಲಿ ರೇಷ್ಮೆ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸುವ ಕರ್ನಾಟಕ ರೇಷ್ಮೆ ಹುಳು ಬಿತ್ತನೆ, ರೇಷ್ಮೆಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ) (ತಿದ್ದುಪಡಿ) ಮಸೂದೆ ಹಾಗೂ ಸರಕು ಮತ್ತು ಸೇವೆಗಳ ತೆರಿಗೆ ತಿದ್ದುಪಡಿ ಮಸೂದೆಗಳಿಗೂ ಅನುಮೋದನೆ ನೀಡಲಾಯಿತು.

ಭೂಕಬಳಿಕೆ ನಿಷೇಧ ಕಾಯ್ದೆ: ಬದಲಾವಣೆಯೊಂದಿಗೆ ಪ್ರಸ್ತಾವ ಮಂಡನೆಗೆ ಒಪ್ಪಿದ ಸರ್ಕಾರ

ಒತ್ತುವರಿ: ಗ್ರಾಮೀಣರು ನಿರಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ವಿರುದ್ಧದ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯುವುದು ಮತ್ತು ಅವರಿಗೆ ಕಿರುಕುಳ ತಪ್ಪಿಸುವ ಉದ್ದೇಶದಿಂದ ಭೂ ಕಬಳಿಕೆ ನಿಷೇಧ ಕಾಯ್ದೆ–2011 ವ್ಯಾಪ್ತಿಯಿಂದ ಗ್ರಾಮೀಣ ಪ್ರದೇಶಗಳನ್ನಷ್ಟೇ ಹೊರಗಿಡುವ ತಿದ್ದುಪಡಿ ತರಲು ಸರ್ಕಾರ ಒಪ್ಪಿಗೆ ಸೂಚಿಸಿದೆ. ಈ ಬದಲಾವಣೆಯೊಂದಿಗೆ ತಿದ್ದುಪಡಿ ಮಸೂದೆ ಗುರುವಾರ ಮಂಡನೆಯಾಗಲಿದೆ.

ಬಿಬಿಎಂಪಿ ಮತ್ತು ಇತರ ಮಹಾನಗರ ಪಾಲಿಕೆಗಳ ವ್ಯಾಪ್ತಿ ಹೊರತುಪಡಿಸಿ ಎಲ್ಲ ಪ್ರದೇಶವನ್ನೂ ಭೂ ಕಬಳಿಕೆ ನಿಷೇಧ ಕಾಯ್ದೆ ವ್ಯಾಪ್ತಿಯಿಂದ ಹೊರಗಿಡುವ ತಿದ್ದುಪಡಿ ಮಸೂದೆಯನ್ನು ವಿಧಾನಸಭೆಯಲ್ಲಿ ಅಂಗೀಕಾರಕ್ಕಾಗಿ ಮಂಡಿಸಲಾಗಿದೆ. ಮಸೂದೆ ಕುರಿತು ಬುಧವಾರ ವಿಸ್ತೃತ ಚರ್ಚೆ ನಡೆಯಿತು.

'ಭೂ ಕಬಳಿಕೆ ನಿಷೇಧ ಕಾಯ್ದೆಯ ದುರ್ಬಳಕೆಯಿಂದ ಪ್ರತಿ ಹಳ್ಳಿಯಲ್ಲೂ ನೂರಾರು ಮಂದಿ ಬೆಂಗಳೂರಿನ ನ್ಯಾಯಾಲಯಕ್ಕೆ ಅಲೆಯುವಂತಹ ಸ್ಥಿತಿ ನಿರ್ಮಾಣವಾಗಿದೆ. ತಕ್ಷಣ ಮಸೂದೆಗೆ ಒಪ್ಪಿಗೆ ನೀಡಬೇಕು. ಜೀವನೋಪಾಯಕ್ಕಾಗಿ ಸರ್ಕಾರಿ ಜಮೀನು ಒತ್ತುವರಿ ಮಾಡಿರುವವರನ್ನು ಸಂಕಷ್ಟದಿಂದ ಪಾರು ಮಾಡಬೇಕು' ಎಂದು ಬಿಜೆಪಿಯ ಕೆ.ಜಿ. ಬೋಪಯ್ಯ, ದೊಡ್ಡನಗೌಡ ಪಾಟೀಲ, ಕೆ.ಬಿ. ಅಶೋಕ್ ನಾಯ್ಕ್, ಹರತಾಳು ಹಾಲಪ್ಪ, ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ ಆಗ್ರಹಿಸಿದರು.

'ಮಸೂದೆಯನ್ನು ಯಥಾವತ್ತಾಗಿ ಅಂಗೀಕರಿಸಿದರೆ ಇತರ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಭೂಗಳ್ಳರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಭೂಕಬಳಿಕೆ ನಿಷೇಧ ಕಾಯ್ದೆಯನ್ನು ಭೂಗಳ್ಳರ ವಿರುದ್ಧ ಬಳಸಬೇಕು. ಜೀವನೋಪಾಯಕ್ಕಾಗಿ ಅನಧಿಕೃತ ಸಾಗುವಳಿ ಮಾಡುತ್ತಿರುವ ಒತ್ತುವರಿದಾರರ ವಿರುದ್ಧ ಅಲ್ಲ. ಬಿಬಿಎಂಪಿ, ಮಹಾನಗರ ಪಾಲಿಕೆಗಳು ಮಾತ್ರವಲ್ಲ, ಎಲ್ಲ ನಗರ ಸ್ಥಳೀಯ ಸಂಸ್ಥೆಗಳನ್ನೂ ಭೂಕಬಳಿಕೆ ನಿಷೇಧ ಕಾಯ್ದೆಯ ವ್ಯಾಪ್ತಿಯಲ್ಲಿಡಬೇಕು. ಇಲ್ಲವಾದರೆ ಭೂಗಳ್ಳರಿಗೆ ಹಸಿರು ಚೀಟಿ ಕೊಟ್ಟಂತಾಗುತ್ತದೆ' ಎಂದು ಜೆಡಿಎಸ್‌ನ ಎ.ಟಿ. ರಾಮಸ್ವಾಮಿ ಆತಂಕ ವ್ಯಕ್ತಪಡಿಸಿದರು.

ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್, ಜೆಡಿಎಸ್‌ನ ಕೆ.ಎಂ. ಶಿವಲಿಂಗೇಗೌಡ, ಎಚ್.ಕೆ. ಕುಮಾರಸ್ವಾಮಿ, ಕಾಂಗ್ರೆಸ್‌ನ ಆರ್.ವಿ. ದೇಶಪಾಂಡೆ, ಪಿ.ಟಿ. ಪರಮೇಶ್ವರ ನಾಯ್ಕ, ಯತೀಂದ್ರ ಸಿದ್ದರಾಮಯ್ಯ, ಬಿಜೆಪಿಯ ಗೂಳಿಹಟ್ಟಿ ಶೇಖರ್ ಮಾತನಾಡಿ, 'ರೈತರಿಗೆ ಸೀಮಿತವಾಗಿ ತಿದ್ದುಪಡಿಯನ್ನು ಭಾಗಶಃ ಸ್ವಾಗತಿಸುತ್ತೇವೆ. ಆದರೆ, ನಗರ ಪ್ರದೇಶಗಳಲ್ಲಿ ಭೂಗಳ್ಳರಿಗೆ ವರವಾಗುವ ತಿದ್ದುಪಡಿ ಬೇಡ' ಎಂದರು.

'ನಗರ ಪ್ರದೇಶಗಳನ್ನು ಕಾಯ್ದೆ ವ್ಯಾಪ್ತಿಯಿಂದ ಹೊರಗಿಡುವುದು ಸರಿಯಲ್ಲ. ಗ್ರಾಮೀಣ ಪ್ರದೇಶದಲ್ಲೂ ಒಂದು ಕುಟುಂಬಕ್ಕೆ ಒಂದು ಬಾರಿ ಮಾತ್ರ ಸರ್ಕಾರಿ ಜಮೀನು ಮಂಜೂರು ಮಾಡುವುದಕ್ಕೆ ಮಿತಿ ವಿಧಿಸಬೇಕು' ಎಂದು ಬಿಜೆಪಿಯ ಕುಮಾರ್ ಬಂಗಾರಪ್ಪ ಸಲಹೆ ನೀಡಿದರು.

> ಕಾಯ್ದೆಯಿಂದ ರೈತರ ಜೀವನವೇ ಹಾಳಾಗಿದೆ. ಅರಣ್ಯ ಒಳಾವರಣದಲ್ಲಿರುವ ಈ ಕಾಯ್ದೆಯಡಿ ದಾಖಲಿಸಿರುವ ಪ್ರಕರಣಗಳನ್ನೂ ಹಿಂಪಡೆಯುವ ನಿರ್ಧಾರ ಮಾಡಬೇಕು.
> **ಹರತಾಳು ಹಾಲಪ್ಪ,** ಬಿಜೆಪಿ ಸದಸ್ಯ

> 30 ವರ್ಷದ ಹಿಂದೆ ನಿರ್ಮಿಸಿದ್ದ ನನ್ನ ಮನೆ ಸಿ.ಎ ನಿವೇಶನದಲ್ಲಿದೆ ಎಂಬ ಕಾರಣ ನೀಡಿ ಭೂ ಕಬಳಿಕೆ ಆರೋಪದಡಿ ಪ್ರಕರಣ ದಾಖಲಿಸಿದ್ದಾರೆ. ಈ ರೀತಿ ಕಾಯ್ದೆ ದುರ್ಬಳಕೆ ಆಗುವುದನ್ನು ತಪ್ಪಿಸಬೇಕು.
> **ಕೆ.ಎಂ. ಶಿವಲಿಂಗೇಗೌಡ,** ಜೆಡಿಎಸ್ ಸದಸ್ಯ

> ರೈತರು ಯಾರು ಎನ್ನುವುದನ್ನು ಸ್ಪಷ್ಟಪಡಿಸಬೇಕು. ನಿಜವಾಗಿ ಉಳುಮೆ ಮಾಡುವವರಿಗೆ ರಕ್ಷಣೆ ನೀಡಬೇಕು. ರೈತರ ಹೆಸರಿನಲ್ಲಿ ಭೂಗಳ್ಳರ ನೆರವಿಗೆ ನಿಲ್ಲುವುದು ಸರಿಯಲ್ಲ.
> **ಯು.ಟಿ. ಖಾದರ್,** ವಿರೋಧ ಪಕ್ಷದ ಉಪ ನಾಯಕ

> ಕಾಯ್ದೆಯನ್ನು ನಿಜವಾದ ಭೂಗಳ್ಳರ ವಿರುದ್ಧ ಈವರೆಗೂ ಬಳಸಿಲ್ಲ. ಈಗ ನಗರಗಳಿಗೆ ಹೊಂದಿಕೊಂಡ ಪ್ರದೇಶಗಳನ್ನೂ ಕಾಯ್ದೆ ವ್ಯಾಪ್ತಿಯಿಂದ ಹೊರಗಿಡುವುದು ಅಪಾಯಕಾರಿ.
> **ಎ.ಟಿ. ರಾಮಸ್ವಾಮಿ,** ಜೆಡಿಎಸ್ ಸದಸ್ಯ

ತಿದ್ದುಪಡಿಗೆ ಒಪ್ಪಿದ ಸಿಎಂ

ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಕೆಲವು ತಿದ್ದುಪಡಿಗಳೊಂದಿಗೆ ಮಸೂದೆಯನ್ನು ಅಂಗೀಕಾರಕ್ಕಾಗಿ ಗುರುವಾರ ಮಂಡಿಸುತ್ತೇವೆ. ಬಿಬಿಎಂಪಿಯಿಂದ 18 ಕಿ.ಮೀ., ಇತರ ಮಹಾನಗರ ಪಾಲಿಕೆಗಳ ವ್ಯಾಪ್ತಿಯಿಂದ 10 ಕಿ.ಮೀ., ನಗರಸಭೆ ಮತ್ತು ಪುರಸಭೆಗಳಿಂದ 5 ಕಿ.ಮೀ. ಮತ್ತು ಪಟ್ಟಣ ಪಂಚಾಯಿತಿಗಳಿಂದ 3 ಕಿ.ಮೀ.ವರೆಗಿನ ವ್ಯಾಪ್ತಿಗೆ ಭೂಕಬಳಿಕೆ ನಿಷೇಧ ಕಾಯ್ದೆಯನ್ನು ಅನ್ವಯಿಸಲಾಗುವುದು' ಎಂದರು.


ಸುದ್ದಿ 2 ನಿಮಿಷ

'ದಾಖಲೆ ತಿದ್ದಿದರೆ ಕ್ರಿಮಿನಲ್ ಕೇಸ್'

ಬೆಂಗಳೂರು: 'ಕಂದಾಯ ಇಲಾಖೆಯ ಕಾಗದ ಪತ್ರಗಳಲ್ಲಿ ಹೆಸರು ತಿದ್ದಿದರೆ ಅವರು ಅಪರಾಧಿಗಳಾಗುತ್ತಾರೆ. ಬದಲಾವಣೆ ಮಾಡಿಕೊಟ್ಟವರೂ ಅಪರಾಧಿಗಳಾಗುತ್ತಾರೆ. ಅಂತಹವರನ್ನು ಅಮಾನತು ಮಾಡಿ, ಕ್ರಿಮಿನಲ್ ಕೇಸ್ ದಾಖಲಿಸುತ್ತೇವೆ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ವಿಧಾನಸಭೆಯಲ್ಲಿ ಶೂನ್ಯ ವೇಳೆಯಲ್ಲಿ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, 'ಬಾಗಲಕೋಟೆ ಜಿಲ್ಲೆ ಕೊಡಕಲ್ ಗ್ರಾಮದಲ್ಲಿ ಸರ್ವೆ ಸಂಖ್ಯೆ 72 ರಲ್ಲಿ 15 ಎಕರೆ 10 ಗುಂಟೆ ಜಮೀನನ್ನು ಕೃಷ್ಣಾ ಭಾಗ್ಯ ಜಲ ನಿಗಮ ಯೋಜನೆಗೆ ತೆಗೆದುಕೊಂಡು ಪರಿಹಾರವನ್ನು ಕೊಟ್ಟಿದ್ದಾರೆ. ಅಲ್ಲಿನ ತಹಶೀಲ್ದಾರ್ ಹಾಗೂ ಅವರ ಸಿಬ್ಬಂದಿ ಸೇರಿ ಭ್ರಷ್ಟಾಚಾರದ ಉದ್ದೇಶದಿಂದ ಬೇರೆ ವ್ಯಕ್ತಿಗಳ ಹೆಸರನ್ನು ಕೋರ್ಟ್ ಡಿಕ್ರಿ ಮಾಡುತ್ತಿದ್ದಾರೆ ಎಂಬ ಹೆಸರಿನಲ್ಲಿ ಪಹಣಿ ಬದಲಾಯಿಸಿ, ಹೆಸರು ಬದಲಾವಣೆ ಮಾಡಿದ್ದಾರೆ' ಎಂದರು.

'ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಕಾರಜೋಳ, 'ಭೂಸ್ವಾಧೀನವನ್ನು ಕಂದಾಯ ಇಲಾಖೆ ಅಧಿಕಾರಿಗಳೇ ಮಾಡಬೇಕು. ಅಷ್ಟು ಎಸಗಿರುವುದು ತಹಶೀಲ್ದಾರರೇ ಆಗಿರಬಹುದು, ಕೆಳಗಿನ ನೌಕರರೇ ಇರಬಹುದು. ಅವರ ವಿರುದ್ಧ ಖಂಡಿತಾ ಕ್ರಮ ತೆಗೆದುಕೊಳ್ಳುತ್ತೇನೆ. ಅವರನ್ನು ಅಮಾನತು ಮಾಡಿ, ಹಣವನ್ನು ವಾಪಸ್ ಪಡೆಯಲು ಜಿಲ್ಲಾಧಿಕಾರಿಗೆ ಹೇಳುತ್ತೇನೆ. ಕ್ರಿಮಿನಲ್ ಕೇಸ್ ಹಾಕಲು ಜಿಲ್ಲಾಧಿಕಾರಿಗೆ ಸೂಚನೆ ಕೊಡುತ್ತೇನೆ' ಎಂದರು.



ಸಚಿವ ನಿರಾಣಿ ವಿರುದ್ಧ ದಲಿತ ಉದ್ದಿಮೆದಾರರ ಆಕ್ರೋಶ

ಬೆಂಗಳೂರು: ಕೈಗಾರಿಕಾ ನಿವೇಶನಗಳ ಮೀಸಲಾತಿ, ಹಂಚಿಕೆಯಲ್ಲಿ ದಲಿತ ಉದ್ದಿಮೆದಾರರಿಗೆ ಆಗಿರುವ ಲೋಪಗಳನ್ನು ಸರಿಪಡಿಸಲು ಸರ್ಕಾರ ಮೀನಮೇಷ ಎಣಿಸುತ್ತಿದೆ ಎಂದು ಕರ್ನಾಟಕ ದಲಿತ ಉದ್ದಿಮೆದಾರರ ಸಂಘ ಆರೋಪಿಸಿದೆ.

ಹಿಂದೆ ಕೈಗಾರಿಕಾ ಸಚಿವರಾಗಿದ್ದ ಜಗದೀಶ ಶೆಟ್ಟರ್ ಅಧ್ಯಕ್ಷತೆಯಲ್ಲಿ ನಡೆದಿದ್ದ ಏಕ ಗವಾಕ್ಷಿ ಸಭೆ, ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯ ಸಭೆಯಲ್ಲಿ ರಾಜ್ಯದಲ್ಲಿ ಇರುವ ಕೈಗಾರಿಕಾ ನೀತಿಯಂತೆ ಲೋಪಗಳನ್ನು ಸರಿಪಡಿಸಲು ನಿರ್ಧರಿಸಲಾಗಿದ್ದರೂ, ಈಗಿನ ಸಚಿವ ಮುರುಗೇಶ ನಿರಾಣಿ ಅವರು ವಿಳಂಬ ಮಾಡುತ್ತಿದ್ದಾರೆ ಎಂದು ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಶ್ರೀನಿವಾಸನ್ ದೂರಿದ್ದಾರೆ.

ಅವರ ಕುಟುಂಬದ ಒಡೆತನದ ಮೆ:ನಿರಾಣಿ ಶುಗರ್ಸ್ ಕಂಪನಿಯ ಕಡತಗಳು ವಿಳಂಬವಾಗುತ್ತಿವೆ ಎಂದು ಸ್ವತಃ ನಿರಾಣಿ ಅವರೇ ವಿಧಾನ ಪರಿಷತ್ ಕಲಾಪದಲ್ಲಿ ಅಧಿಕಾರಿಗಳ ಮೇಲೆ ಹರಿಹಾಯ್ದಿದ್ದಾರೆ. ಆದರೆ, ಪರಿಶಿಷ್ಟ ಜಾತಿ, ಪಂಗಡದ ಉದ್ದಿಮೆದಾರರ ಸಮಸ್ಯೆಗಳನ್ನು ಆಲಿಸಲು ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ, ಸ್ಪಂದಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನೇಮಕಾತಿ ಮತ್ತು ಕಟ್ಟಡಗಳ ನಿರ್ಮಾಣ ಅಧಿಕಾರ ಹಿಂಪಡೆಯಲು ಒತ್ತಾಯ

ವಿಶ್ವವಿದ್ಯಾಲಯಗಳಲ್ಲಿ ಭಯಾನಕ ಸ್ಥಿತಿ: ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಶೈಕ್ಷಣಿಕ ವಾತಾವರಣವಿಲ್ಲ, ಗುಣಮಟ್ಟ ಕುಸಿದು ಹೋಗಿದೆ. ಕಾಪಿ ಹೊಡೆಸಿ ಸ್ನಾತಕೋತ್ತರ ಮತ್ತು ಪಿಎಚ್‌ಡಿ ಪದವಿ ನೀಡುವ ಪರಿಸ್ಥಿತಿ ಇದೆ. ನೇಮಕಾತಿ ಮತ್ತು ಕಟ್ಟಡ ನಿರ್ಮಾಣ ಬಿಟ್ಟು ಶೈಕ್ಷಣಿಕ ಚಟುವಟಿಕೆಗಳೇ ನಡೆಯುತ್ತಿಲ್ಲ. ಹಗರಣಗಳಲ್ಲೇ ಮುಳುಗಿವೆ'.

ವಿಧಾನಸಭೆಯಲ್ಲಿ ಬುಧವಾರ ಪಕ್ಷಬೇಧ ಮರೆತು ವಿಶ್ವವಿದ್ಯಾಲಯಗಳ ಸ್ಥಿತಿಗತಿಯನ್ನು ಒರೆಗೆ ಹಚ್ಚಿದಾಗ ಕೇಳಿಬಂದ ತೀಕ್ಷ್ಣ ಮಾತುಗಳಿವು.

'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ತಿದ್ದುಪಡಿ ಮಸೂದೆ'ಯ ಮೇಲೆ 20ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು. ಈ ಸುದೀರ್ಘ ಚರ್ಚೆಯ ವೇಳೆ ಸದಸ್ಯರು 'ವಿಶ್ವವಿದ್ಯಾಲಯಗಳಲ್ಲಿ ಪರಿಸ್ಥಿತಿ ಭಯಾನಕವಾಗಿದೆ' ಎಂಬ ವಿಚಾರವನ್ನು ಎಳೆ ಎಳೆಯಾಗಿ ಬಿಡಿಸಿದರು.

ವಿರೋಧಪಕ್ಷದ ಉಪನಾಯಕ ಯು.ಟಿ.ಖಾದರ್ ಮಾತನಾಡಿ, 'ಹಿಂದೆ ಮಂಗಳೂರು ವಿಶ್ವವಿದ್ಯಾಲಯ 'ಎ' ಗ್ರೇಡ್ ಹೊಂದಿತ್ತು. ಈಗ 'ಬಿ' ಗ್ರೇಡ್‌ಗೆ ಇಳಿದಿದೆ. 'ಸಿ' ಗೆ ಹೋದರೂ ಅಚ್ಚರಿ ಇಲ್ಲ. ಅಲ್ಲಿನ ಸಿಂಡಿಕೇಟ್ ಸದಸ್ಯರು ಬೆಂಗಳೂರಿನ ಪಂಚತಾರಾ ಹೋಟೆಲ್‌ಗೆ ಬಂದು ಸಭೆ ಮಾಡುತ್ತಾರೆ' ಎಂದರು.

ಬಿಜೆಪಿಯ ಅರವಿಂದ್ ಬೆಲ್ಲದ ಮಾತನಾಡಿ, 'ವಿಶ್ವವಿದ್ಯಾಲಯಗಳಿಂದ ಕಟ್ಟಡ ನಿರ್ಮಿಸುವ ಮತ್ತು ನೇಮಕಾತಿ ಮಾಡುವ ಅಧಿಕಾರವನ್ನು ಹಿಂದಕ್ಕೆ ಪಡೆದು, ಶೈಕ್ಷಣಿಕ ಚಟುವಟಿಕೆಗೆ ಮಾತ್ರ ಸಿಮೀತಗೊಳಿಸಬೇಕು. ಯುಜಿಸಿ ಸಂಬಳ ಪಡೆಯುವ ಅಧ್ಯಾಪಕರು, ಪ್ರೊಫೆಸರ್‌ಗಳು ವಾರಕ್ಕೆ 40 ಗಂಟೆ ಪಾಠ ಮಾಡಬೇಕು. ಅವರು ವಾರಕ್ಕೆ ಒಂದು ಅಥವಾ ಎರಡು ಪೀರಿಯೆಡ್ ಮಾಡಿದರೇ ಹೆಚ್ಚು' ಎಂದರು.

'ಈಗಿರುವ ವಿಶ್ವವಿದ್ಯಾಲಯಗಳೇ ಹದಗೆಟ್ಟು ಹೋಗಿವೆ, ಜಿಲ್ಲೆಗೊಂದಲ್ಲ, ತಾಲ್ಲೂಕಿಗೊಂದು ವಿಶ್ವವಿದ್ಯಾಲಯ ಮಾಡಿ. ಆಗ ಶಿಕ್ಷಣ ಸಬಲೀಕರಣ ಆಗೋದಿಲ್ಲವೇ' ಎಂದು ಜೆಡಿಎಸ್‌ನ ಎ.ಟಿ. ರಾಮಸ್ವಾಮಿ ವ್ಯಂಗ್ಯವಾಗಿ ಪ್ರಶ್ನಿಸಿದರು.

'ವಿ.ಸಿ ಹುದ್ದೆ: ಕೈ–ಕಾಲು ಹಿಡಿಯುತ್ತಾರೆ'

'ಒಂದು ಕಾಲದಲ್ಲಿ ಕುವೆಂಪು, ನರಸಿಂಹಯ್ಯ, ನಂಜುಂಡಪ್ಪ ಅಂತಹವರ ಮನೆಗೆ ಸರ್ಕಾರವೇ ಹೋಗಿ ಕುಲಪತಿ ಹುದ್ದೆ ಅಲಂಕರಿಸಿ ಎಂದು ಕೇಳಿಕೊಳ್ಳುತ್ತಿತ್ತು. ಈಗ ವಿ.ಸಿ ಮಾಡಿ ಎಂದು ಸರ್ಕಾರದಲ್ಲಿರುವವರ ಕಾಲು ಹಿಡಿಯುತ್ತಿದ್ದಾರೆ. ಇಲ್ಲಿ ನೇಮಕಾತಿ, ಬಡ್ತಿ ಮತ್ತು ಖರೀದಿಯಲ್ಲಿ ಭಾರಿ ಅಕ್ರಮ ನಡೆಯುತ್ತಿವೆ' ಎಂದು ಜೆಡಿಎಸ್‌ನ ಎ.ಟಿ.ರಾಮಸ್ವಾಮಿ ಹರಿಹಾಯ್ದರು.

ಇವರ ಮಾತು ಸಮರ್ಥಿಸಿದ ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ, 'ಕುಲಪತಿಗಳ ನೇಮಕದಲ್ಲಿ ಶಾಸಕರ ಲಾಬಿಯೂ ದೊಡ್ಡ ಮಟ್ಟದಲ್ಲಿ ನಡೆಯುತ್ತದೆ. ಕೃಷಿ ಸಚಿವನಾಗಿದ್ದಾಗ ಅದರ ಅನುಭವ ಆಗಿದೆ. ಆಗ ನನ್ನ ಬಳಿ ಎಷ್ಟು ಶಾಸಕರು ಬಂದಿದ್ದರು ಎಂಬುದು ಗೊತ್ತಿದೆ. ನಮ್ಮ (ರಾಜಕಾರಣಿಗಳ) ಪಾತ್ರವನ್ನು ಅಲ್ಲಗಳೆಯಬಾರದು ಎಂದರು.

'ವಿಶ್ವವಿದ್ಯಾಲಯಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡದ ಕಾರಣ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಯುಜಿಸಿ ಮತ್ತು ಸರ್ಕಾರದ ನಿಯಮಕ್ಕೆ ಬಾಹಿರವಾಗಿ ಅಪಾರ ಪ್ರಮಾಣದಲ್ಲಿ ನೇಮಕಾತಿ ನಡೆಯುತ್ತಿವೆ. ಅನುಭವ, ಅರ್ಹತೆ ಮತ್ತು ಯೋಗ್ಯತೆ ಇಲ್ಲದವರನ್ನು ನೇಮಿಸಿಕೊಳ್ಳಲಾಗುತ್ತಿದೆ' ಎಂದರು.

> **ಕುಲಪತಿ ಹುದ್ದೆ ₹5 ರಿಂದ ₹10 ಕೋಟಿಗೆ ಫಿಕ್ಸ್ ಆಗುತ್ತದೆ. ಈಗ ಈ ಹುದ್ದೆಗಳಿಗೆ ಪಾವಿತ್ರ್ಯವೇ ಉಳಿದಿಲ್ಲ**
> **ಈಶ್ವರ ಖಂಡ್ರೆ,** ಕಾಂಗ್ರೆಸ್

ಏಳು ವಿ.ವಿಗಳ ಸ್ಥಾಪನೆ ಮಸೂದೆಗೆ ವಿಧಾನಸಭೆ ಒಪ್ಪಿಗೆ

ಬೀದರ್, ಹಾವೇರಿ, ಕೊಡಗು, ಚಾಮರಾಜನಗರ, ಹಾಸನ, ಕೊಪ್ಪಳ ಮತ್ತು ಬಾಗಲಕೋಟೆ ವಿಶ್ವವಿದ್ಯಾಲಯಗಳ ಸ್ಥಾಪನೆಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ತಿದ್ದುಪಡಿ ಮಸೂದೆ 2022ಕ್ಕೆ ವಿಧಾನಸಭೆಯಲ್ಲಿ ಬುಧವಾರ ಅಂಗೀಕಾರ ದೊರೆಯಿತು.

ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ ನಾರಾಯಣ ಮಸೂದೆಯನ್ನು ಮಂಡಿಸಿ, ಏಳು ಜಿಲ್ಲೆಗಳ ಜಿಲ್ಲಾ ಕೇಂದ್ರಗಳಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಬೇಕು ಎಂಬ ಬೇಡಿಕೆ ಇತ್ತು. ಬಜೆಟ್‌ನಲ್ಲೂ ಘೋಷಿಸಲಾಗಿತ್ತು. ಇದರಿಂದ ವಿದ್ಯಾರ್ಥಿಗಳ ಸಬಲೀಕರಣವಾಗಲಿದ್ದು, ಮುಂಬರುವ ದಿನಗಳಲ್ಲಿ ಬೇರೆ ಜಿಲ್ಲೆಗಳಲ್ಲೂ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು ಎಂದು ಹೇಳಿದರು.

ಪ್ರತಿಯೊಂದು ವಿಶ್ವವಿದ್ಯಾಲಯಕ್ಕೆ ತಲಾ ₹2 ಕೋಟಿಯಂತೆ ವಾರ್ಷಿಕ ಆವರ್ತಕ ವೆಚ್ಚ ವರ್ಷವೊಂದಕ್ಕೆ ₹14 ಕೋಟಿ ವೆಚ್ಚವಾಗುತ್ತದೆ. ಮಂಡ್ಯದ ಸರ್ಕಾರಿ ಮಹಾವಿದ್ಯಾಲಯವನ್ನು (ಸ್ವಾಯತ್ತ) ಏಕೀಕೃತ ವಿಶ್ವವಿದ್ಯಾಲಯವೆಂದು 2019ರಲ್ಲಿ ಘೋಷಣೆ ಮಾಡಲಾಗಿತ್ತು. ಈಗ ಮಸೂದೆಯ ಮೂಲಕ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಾಡು ಮಾಡಲಾಗಿದ್ದು, ಮಂಡ್ಯ ವಿಶ್ವವಿದ್ಯಾಲಯ ಎಂದು ಕರೆಸಿಕೊಳ್ಳಲಿದೆ ಎಂದರು.

ವಿ.ವಿ.ಕಾಯಕಲ್ಪಕ್ಕೆ ಹೊಸ ಕಾನೂನು: ರಾಜ್ಯದ ವಿಶ್ವವಿದ್ಯಾಲಯಗಳಿಗೆ ಕಾಯಕಲ್ಪ ನೀಡಲು ಹೊಸ ಕಾನೂನು ತರಲಾಗುವುದು. ವಿಶ್ವವಿದ್ಯಾಲಯ ಕಾಯ್ದೆ ಮಾಡಿ 22 ವರ್ಷಗಳು ಕಳೆದಿವೆ. ಅದನ್ನು ಬದಲಿಸಲು ಮಸೂದೆಯನ್ನು ಮಂಡಿಸಲಾಗುವುದು. ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳು ಮತ್ತು ಸವಾಲುಗಳಿಗೆ ಅದರಲ್ಲಿ ಪರಿಹಾರವಿದೆ. ಇದು ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಿಗೂ ಅನ್ವಯಿಸುತ್ತದೆ ಎಂದು ಅಶ್ವತ್ಥನಾರಾಯಣ ಹೇಳಿದರು.

30 ಜನರಿಗೊಂದು ವಿ.ವಿ?

ಮೈಸೂರಿನಲ್ಲಿರುವ ಸಂಗೀತ ವಿಶ್ವವಿದ್ಯಾಲಯದಲ್ಲಿ ಕೇವಲ 20 ರಿಂದ 30 ವಿದ್ಯಾರ್ಥಿಗಳಿದ್ದಾರೆ. ಇಷ್ಟು ಜನಕ್ಕಾಗಿ ವಿಶ್ವವಿದ್ಯಾಲಯ ನಡೆಯುತ್ತಿದೆ. ಈ ರೀತಿಯ ಅಂತರ್ ಶಿಸ್ತೀಯ ವಿಶ್ವವಿದ್ಯಾಲಯಗಳನ್ನು ಸೇರಿಸಿ ಏಕೀಕೃತ ವಿಶ್ವವಿದ್ಯಾಲಯವಾಗಿ ಪರಿವರ್ತಿಸಲಾಗುವುದು ಎಂದು ಅಶ್ವತ್ಥನಾರಾಯಣ ತಿಳಿಸಿದರು.

ರೇಷ್ಮೆ ಹೈಟೆಕ್ ಮಾರುಕಟ್ಟೆ ನಿರ್ಮಾಣಕ್ಕೆ ನಿರ್ಧಾರ

ಬೆಂಗಳೂರು: 'ರೇಷ್ಮೆ ಮಾರುಕಟ್ಟೆಗಳಲ್ಲಿ ಇ-ಹರಾಜು ವ್ಯವಸ್ಥೆ ಜಾರಿಗೊಳಿಸಲಾಗುತ್ತಿದ್ದು, ವಿವಿಧೆಡೆ ಹೈಟೆಕ್ ಮಾರುಕಟ್ಟೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ' ಎಂದು ರೇಷ್ಮೆ ಸಚಿವ ನಾರಾಯಣಗೌಡ ತಿಳಿಸಿದರು.

ಕರ್ನಾಟಕ ರೇಷ್ಮೆಹುಳು ಬಿತ್ತನೆ, ರೇಷ್ಮೆಗೂಡು ಮತ್ತು ರೇಷ್ಮೆ ನೂಲು- (ಉತ್ಪಾದನೆ, ಸರಬರಾಜು, ಮಾರಾಟ ವಿನಿಮಯ) ತಿದ್ದುಪಡಿ ಮಸೂದೆ ಮಂಡಿಸಿ ಮಾತನಾಡಿದ ಅವರು, 'ರಾಮನಗರದಲ್ಲಿ ₹75 ಕೋಟಿ ಮತ್ತು ಶಿಡ್ಲಘಟ್ಟದಲ್ಲಿ ₹30 ಕೋಟಿ ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಮಾರುಕಟ್ಟೆಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ. ಕಲಬುರಗಿ, ಹಾವೇರಿಯಲ್ಲೂ ಹೈಟೆಕ್ ಮಾರುಕಟ್ಟೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ' ಎಂದು ತಿಳಿಸಿದರು.

'ಸರ್ವರ್ ಸಮಸ್ಯೆಯು ಸಹ ಈಗ ಬಹುತೇಕ ಬಗೆಹರಿದಿದೆ. ಆರ್‌ಟಿಜಿಎಸ್ ವ್ಯವಸ್ಥೆ ಮೂಲಕ ರೈತರಿಗೆ ಹಣ ಪಾವತಿಸುವ ವ್ಯವಸ್ಥೆ ಮಾಡಿರುವುದರಿಂದ ರೈತರಿಗೂ ಅನುಕೂಲವಾಗಿದೆ' ಎಂದು ತಿಳಿಸಿದರು.

'ರಾಜಕಾರಣದಲ್ಲಿ ಎಲ್ಲವನ್ನೂ ಅರಗಿಸಿಕೊಳ್ಳಬೇಕು'

ಬೆಂಗಳೂರು: 'ಬಿಜೆಪಿ ನಾಯಕರು ಸಿದ್ದರಾಮಯ್ಯ ಅವರನ್ನು ನಿದ್ರಾಮಯ್ಯ ಎಂದು ಲೇವಡಿ ಮಾಡುತ್ತಿದ್ದರು. ನನ್ನನ್ನು ಕೊತ್ವಾಲ್ ರಾಮಚಂದ್ರನ ಶಿಷ್ಯ ಎಂದು ಕರೆಯುತ್ತಾರೆ. ರಾಜಕಾರಣದಲ್ಲಿ ಅಧಿಕಾರದಲ್ಲಿರುವವರು ಎಲ್ಲವನ್ನೂ ಅರಗಿಸಿಕೊಳ್ಳಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಮುಖ್ಯಮಂತ್ರಿ ವಿರುದ್ಧ ಕಾಂಗ್ರೆಸ್ ಆರಂಭಿಸಿರುವ 'ಪೇಸಿಎಂ' ಅಭಿಯಾನದ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಭ್ರಷ್ಟಾಚಾರ ವಿಚಾರದಲ್ಲಿ ಬೊಮ್ಮಾಯಿ ನೇತೃತ್ವದ ಸರ್ಕಾರದ ವಿರುದ್ಧ ನಾವು ವಿವಿಧ ರೀತಿಯ ಅಭಿಯಾನ ಆರಂಭಿಸಿದ್ದೇವೆ. ಜನರಿಗೆ ವಿಚಾರ ತಲುಪಿಸಲು ಈ ರೀತಿ ಮಾಡಲಾಗಿದೆ. ಇದರಲ್ಲಿ ಯಾವುದೇ ತಪ್ಪಿಲ್ಲ' ಎಂದು ಸಮರ್ಥನೆ ನೀಡಿದರು.

'ಈ ಅಭಿಯಾನದ ವಿರುದ್ಧ ದೂರು ನೀಡುತ್ತೇವೆ' ಎಂಬ ಮುಖ್ಯಮಂತ್ರಿ ಹೇಳಿಕೆ ಬಗ್ಗೆ ಕೇಳಿದಾಗ, 'ಅವರು ದೂರು ನೀಡಲಿ. ಅವರ ಬಗ್ಗೆ ವ್ಯಂಗ್ಯ ಚಿತ್ರಗಳು ಬಂದಾಗ ಯಾಕೆ ದೂರು ನೀಡಲಿಲ್ಲ. ಅದರಲ್ಲಿ ತಪ್ಪೇನು? ಸಾರ್ವಜನಿಕ ಜೀವನದಲ್ಲಿ ಇರುವಾಗ ಇಂಥದ್ದನ್ನು ಸ್ವೀಕರಿಸಬೇಕು' ಎಂದರು.

ಭಾರತ್ ಜೋಡೊ ಯಾತ್ರೆ: 'ಪಾದಯಾತ್ರಿಗಳನ್ನು ನಿಗದಿತ ದಿನ ಕರೆ ತರಲು ನಾಯಕರಿಗೆ ಸೂಚಿಸಲಾಗಿದೆ. ಎಲ್ಲ ಸಮಿತಿಗಳ ಅಧ್ಯಕ್ಷರನ್ನು ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲ ಶುಕ್ರವಾರ ಭೇಟಿ ಮಾಡಲಿದ್ದಾರೆ' ಎಂದರು.

ಮಠಗಳಿಗೆ ₹400 ಕೋಟಿ ಹಂಚಿಕೆ

₹14,762 ಕೋಟಿಯ ಪೂರಕ ಅಂದಾಜು • ಮನೆಮನೆಗೆ ಧ್ವಜಕ್ಕೆ ₹3 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ಪಾವತಿಸುವ 'ರೈತ ವಿದ್ಯಾನಿಧಿ' ಯೋಜನೆಗೆ ₹810 ಕೋಟಿ ನೀಡಿದ್ದರೆ, ದೇವಸ್ಥಾನ, ಟ್ರಸ್ಟ್ ಮತ್ತು ಮಠಗಳಿಗೆ ₹400 ಕೋಟಿಯನ್ನು ಹೆಚ್ಚುವರಿಯಾಗಿ ನೀಡುವ ₹14,762 ಕೋಟಿ ಮೊತ್ತದ ಪೂರಕ ಅಂದಾಜನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾಯಿತು.

ಬಜೆಟ್‌ನಲ್ಲಿ ಹಂಚಿಕೆ ಮಾಡಲಾಗಿರುವ ಮೊತ್ತಕ್ಕಿಂತ ಹೆಚ್ಚಿನ ಅನುದಾನವನ್ನು ನೀಡಲು ಈ ಸಾಲಿನ ಮೊದಲ ಪೂರಕ ಅಂದಾಜನ್ನು ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಬೊಮ್ಮಾಯಿ ಮಂಡಿಸಿದರು.

ರೈತ ವಿದ್ಯಾನಿಧಿ ಬೊಮ್ಮಾಯಿ ಅವರ ನೆಚ್ಚಿನ ಕಾರ್ಯಕ್ರಮವಾಗಿದ್ದು, ಇದಕ್ಕೆ ಗಣನೀಯ ಮೊತ್ತ ನಿಗದಿ ಮಾಡಿದ್ದಾರೆ. ಅಲ್ಲದೆ, ಟ್ಯಾಕ್ಸಿ ಚಾಲಕರ ಮಕ್ಕಳ ಉನ್ನತ ವಿದ್ಯಾಭ್ಯಾಸವನ್ನು ಉತ್ತೇಜಿಸಲು ವಿದ್ಯಾನಿಧಿ ಯೋಜನೆ ವಿಸ್ತರಿಸಲು ಮತ್ತು ಆರೋಗ್ಯ ಸೌಲಭ್ಯಕ್ಕಾಗಿ ವಿಶೇಷ ಯೋಜನೆ ರೂಪಿಸಲು ₹10 ಕೋಟಿ ಒದಗಿಸಲಾಗಿದೆ.

ಪ್ರವಾಹದಿಂದ ಹಾನಿಗೊಳಗಾದ ಪ್ರದೇಶಗಳ ಅಭಿವೃದ್ಧಿಗೆ ಹಾಗೂ ಹಾನಿಗೊಳಗಾದ ಮನೆಗಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ನು ಹೊರತುಪಡಿಸಿ ಹೆಚ್ಚುವರಿ ಪಾಲಿನ ಅನುದಾನವೂ ಸೇರಿ ಒಟ್ಟು ₹837.37 ಕೋಟಿ ಸೇರಿಸಲಾಗಿದೆ.



ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯ ಸಲೀಂ ಅಹ್ಮದ್ ಕೇಳಿದ ಪ್ರಶ್ನೆಗೆ ಸಚಿವ ಆರ್. ಅಶೋಕ ಉತ್ತರ ನೀಡಲಿಲ್ಲವೆಂದು ಆಕ್ಷೇಪಿಸಿ ಸಭಾಪತಿ ಪೀಠ ಎದುರು ಕಾಂಗ್ರೆಸ್ ಸದಸ್ಯರು ಧರಣಿ ನಡೆಸಿದರು –ಪ್ರಜಾವಾಣಿ ಚಿತ್ರ

ಲಿಂಗಾಯಿತರಿಗೆ ₹100 ಕೋಟಿ, ಒಕ್ಕಲಿಗರಿಗೆ ₹105 ಕೋಟಿ

ಲಿಂಗಾಯಿತ ನಿಗಮಕ್ಕಿಂತ ಒಕ್ಕಲಿಗ ನಿಗಮಕ್ಕೇ ಹೆಚ್ಚು ಅನುದಾನ ನೀಡಲಾಗಿದೆ. ಒಕ್ಕಲಿಗ ನಿಗಮಕ್ಕೆ ₹105 ಕೋಟಿ ನೀಡಿದ್ದರೆ, ಲಿಂಗಾಯಿತ ನಿಗಮಕ್ಕೆ ₹100 ಕೋಟಿ ನೀಡಲಾಗಿದೆ.

ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮಕ್ಕೆ ₹50 ಕೋಟಿ, ಉಪ್ಪಾರ ಅಭಿವೃದ್ಧಿ ನಿಗಮಕ್ಕೆ ₹7 ಕೋಟಿ, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ₹100 ಕೋಟಿ, ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ₹15 ಕೋಟಿ, ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೆ ₹14 ಕೋಟಿ, ಕಾಡುಗೊಲ್ಲ ಅಭಿವೃದ್ಧಿ ನಿಗಮಕ್ಕೆ ₹17 ಕೋಟಿ, ಮರಾಠ ಅಭಿವೃದ್ಧಿ ನಿಗಮಕ್ಕೆ ₹60 ಕೋಟಿ, ಮಡಿವಾಳ ಮಾಚಿದೇವ ನಿಗಮಕ್ಕೆ ₹9 ಕೋಟಿ, ಬಾಬು ಜಗಜೀವನರಾಮ್ ಅಭಿವೃದ್ಧಿ ನಿಗಮಕ್ಕೆ ₹25 ಕೋಟಿ ನೀಡಲಾಗಿದೆ.

ಕಾಂಗ್ರೆಸ್ ಸಭಾತ್ಯಾಗದ ಮಧ್ಯೆ ಮತಾಂತರ ನಿಷೇಧಕ್ಕೆ ಅಸ್ತು

ಬೆಂಗಳೂರು: ವಿಧಾನಪರಿಷತ್ತಿನಲ್ಲಿ ಅಂಗೀಕಾರಗೊಂಡ ರೂಪದಲ್ಲಿದ್ದ 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆ 2022' ಅನ್ನು (ಮತಾಂತರ ನಿಷೇಧ) ವಿಧಾನಸಭೆ ಒಪ್ಪಿಗೆ ನೀಡಿತು. ಮಸೂದೆಗೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು.

ಬೆಳಗಾವಿಯಲ್ಲಿ ನಡೆದ ಅಧಿವೇಶನದ ವೇಳೆ ವಿಧಾನ ಸಭೆಯಲ್ಲಿ ಈ ಮಸೂದೆಗೆ ಒಪ್ಪಿಗೆ ನೀಡಲಾಗಿತ್ತು. ಆಗ ವಿಧಾನಪರಿಷತ್ತಿನಲ್ಲಿ ಬಿಜೆಪಿಗೆ ಬಹುಮತ ಇಲ್ಲದ ಕಾರಣ ಮಸೂದೆಯನ್ನು ಮಂಡಿಸಿರಲಿಲ್ಲ. ಉಭಯ ಸದನಗಳಲ್ಲಿ ಅಂಗೀಕಾರಗೊಂಡ ಮಸೂದೆಯನ್ನು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗುವುದು. ಆ ಬಳಿಕ ಅದು ಕಾನೂನು ಆಗಲಿದೆ.

ಈ ಸಂದರ್ಭದಲ್ಲಿ ಮಾತನಾಡಿದ ವಿರೋಧಪಕ್ಷದ ಉಪನಾಯಕ ಯು.ಟಿ.ಖಾದರ್, 'ಬಲವಂತದ ಮತಾಂತರಕ್ಕೆ ನಮ್ಮ ವಿರೋಧವಿದೆ. ಆದರೆ ಈ ಮಸೂದೆಯ ಉದ್ದೇಶ ಸರಿಯಾದುದಲ್ಲ. ಸಂವಿಧಾನ ವಿರೋಧಿಯಾಗಿದೆ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ, 'ಈ ಮಸೂದೆ ಯಾವುದೇ ಧರ್ಮದ ವಿರುದ್ಧ ಅಲ್ಲ. ಧಾರ್ಮಿಕ ಆಚರಣೆಯ ಸ್ವಾತಂತ್ರ್ಯಕ್ಕೂ ಧಕ್ಕೆ ತರುವುದಿಲ್ಲ. ಸ್ವಯಂ ಪ್ರೇರಿತರಾಗಿ ಮತಾಂತರ ಹೊಂದುವವರನ್ನು ತಡೆಯುವ ಉದ್ದೇಶವನ್ನೂ ಹೊಂದಿಲ್ಲ. ಆದರೆ, ಬಲವಂತವಾಗಿ, ವಿವಿಧ ರೀತಿಯ ಆಮಿಷಗಳನ್ನು ಒಡ್ಡಿ ಮತಾಂತರ ಮಾಡುವುದನ್ನು ತಡೆಯುವ ಉದ್ದೇಶ ಹೊಂದಿದೆ' ಎಂದರು.

'ಒಬ್ಬ ವ್ಯಕ್ತಿ ಒಂದು ಧರ್ಮವನ್ನು ತೊರೆದು ಮತ್ತೊಂದು ಧರ್ಮ ಸೇರಿದಾಗ ಹಿಂದಿನ ಧರ್ಮದಲ್ಲಿ ಹೊಂದಿದ್ದ ಹಕ್ಕುಗಳನ್ನು ಕಳೆದುಕೊಂಡು ಹೊಸ ಧರ್ಮದ ಹಕ್ಕುಗಳನ್ನು ಪಡೆಯುತ್ತಾನೆ. ಆದರೆ, ಆತನಿಗೆ ಸರ್ಕಾರದ ಸೌಲಭ್ಯಗಳು ಸಿಗುವುದಿಲ್ಲ' ಎಂದು ಅವರು ತಿಳಿಸಿದರು.

ಭ್ರಷ್ಟಾಚಾರದ ಚರ್ಚೆಗೆ ಸಿದ್ಧರಾಗಿ: ಸಿ.ಎಂ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರದ ಕುರಿತು ವಿಧಾನಮಂಡದಲ್ಲಿ ಚರ್ಚೆ ನಡೆಸಲು ಸರ್ಕಾರ ಸಿದ್ಧವಿದ್ದು, ಚರ್ಚೆಯಿಂದ ಪಲಾಯನ ಮಾಡುವುದಿಲ್ಲ. ನೀವೂ ಸಿದ್ದರಾಗಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಸವಾಲು ಹಾಕಿದರು.

'ಶೇ 40 ಲಂಚಕ್ಕೆ ಸಂಬಂಧಿಸಿದಂತೆ ನಿಲುವಳಿ ಸೂಚನೆಯಡಿ ಚರ್ಚೆಗೆ ಅವಕಾಶ ನೀಡಬೇಕು' ಎಂದು ಸಿದ್ದರಾಮಯ್ಯ ಆಗ್ರಹಕ್ಕೆ ಪ್ರತಿಕ್ರಿಯೆ ನೀಡಿದ ಬೊಮ್ಮಾಯಿ, 'ಭ್ರಷ್ಟಾಚಾರ ಇವತ್ತು ನಿನ್ನೆಯ ಪ್ರಶ್ನೆ ಅಲ್ಲ. ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೂಪದಲ್ಲಿ ಬಂದಿದೆ. ಚರ್ಚೆಗೆ ನೀವೂ ಸಿದ್ಧರಿರಬೇಕು. ಸರ್ಕಾರವೂ ಇದಕ್ಕೆ ತಯಾರಿದೆ' ಎಂದು ಹೇಳಿದರು.

'ಚರ್ಚೆಗೆ ಬರುವಾಗ ನಿಮ್ಮ ಆರೋಪಗಳಿಗೆ ಪೂರಕವಾದ ವಿಶ್ವಾಸಾರ್ಹ ದಾಖಲೆಗಳನ್ನು ತಂದು ಮಾತನಾಡಿ' ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಸಿದ್ದರಾಮಯ್ಯ ಅವರಿಗೆ ಹೇಳಿದರು.

2013 ರಿಂದ 2018 ರವರೆಗೆ ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿಗಳಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಪ್ರಸ್ತಾಪಿಸಲು ನೋಟಿಸ್ ನೀಡಿದ್ದು, ಅದರ ಬಗ್ಗೆಯೂ ಚರ್ಚೆ ಆಗಬೇಕು ಎಂದು ಬಿಜೆಪಿಯ ಪಿ.ರಾಜೀವ್ ಆಗ್ರಹಿಸಿದರು. 'ಅದನ್ನು ಸೇರಿಸಿಯೇ ಪೂರ್ಣ ಪ್ರಮಾಣದ ಚರ್ಚೆಗೆ ಅವಕಾಶ ನೀಡಲಾಗುವುದು' ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

'ಪೇಸಿಎಂ' ಅಭಿಯಾನ: ಬೊಮ್ಮಾಯಿ ಕೆಂಡ

ಒಂದನೇ ಪುಟದಿಂದ....

'ಪೇಸಿಎಂ' ಅಭಿಯಾನವನ್ನು ಟೀಕಿಸಿದ ವಿಧಾನ ಪರಿಷತ್ ಬಿಜೆಪಿ ಸದಸ್ಯ ಎನ್. ರವಿಕುಮಾರ್, 'ಕಾಂಗ್ರೆಸ್‌ನವರು ಭಾರತ್ ಜೋಡೊ ಯಾತ್ರೆಗೆ ಮೊದಲು ಪೇ ಮಾಡಲಿ. ಸಿದ್ದರಾಮಯ್ಯ ಕಾರು ಹಾಗೂ ವಾಚುಗಳಿಗೆ ಪೇ ಮಾಡಲಿ. ರಮೇಶ್ ಕುಮಾರ್ ಹೇಳಿದ್ರಲ್ಲ, ತಲೆಮಾರು ಕುಳಿತು ತಿನ್ನು ವಷ್ಟು ಮಾಡಿದ್ದೇವೆಂದು, ಅದಕ್ಕೆ ಪೇ ಮಾಡಲಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಿಕ್ಷಣ ಸಚಿವ ಬಿ.ಸಿ. ನಾಗೇಶ್, 'ತುಂಬಾ ವರ್ಷ ಅಧಿಕಾರ ಅನುಭವಿಸಿರುವ ಕಾಂಗ್ರೆಸ್ಸಿಗರು, ಕಳೆದ ಎಂಟು ವರ್ಷಗಳಲ್ಲಿ ಏನೂ ಸಿಗದೆ ಹತಾಶರಾಗಿದ್ದಾರೆ. ಈ ರೀತಿಯ ಕೆಳಮಟ್ಟದ ಯೋಚನೆ ಕಾಂಗ್ರೆಸ್‌ಗೆ ಒಳ್ಳೆಯದಲ್ಲ' ಎಂದರು.

ಜಾಲತಾಣದಲ್ಲಿ ಪ್ರತಿ ಅಭಿಯಾನ

ಒಂದನೇ ಪುಟದಿಂದ...

'ಬಿಜೆಪಿ ಕರ್ನಾಟಕ'ದ ಅಧಿಕೃತ ಟ್ವೀಟರ್ ಖಾತೆಯಲ್ಲಿ, 'ಭಾರತ್ ಜೋಡೋ ಯಾತ್ರೆಗಾಗಿ ಕೇರಳದ ಕೊಲ್ಲಂನಲ್ಲಿ ತರಕಾರಿ ಮಾರುವವರನ್ನು ಕಾಂಗ್ರೆಸ್ ಕಾರ್ಯಕರ್ತರು ದೋಚಿದ ಪ್ರಕರಣ ಬೆಳಕಿಗೆ ಬಂದಿತ್ತು. ಕಾಂಗ್ರೆಸ್ಸಿಗರೇ, ಯಾತ್ರೆಗಾಗಿ ರಾಹುಲ್ ಗಾಂಧಿ ಅವರ ಫೋಟೋ ಹಾಕಿ, ಕ್ಯುಆರ್ ಕೋಡ್ ಸೃಷ್ಟಿಸಿ ಭಿಕ್ಷೆ ಬೇಡಬಹುದಲ್ಲವೇ?' ಎಂದು ಕುಟುಕಿದೆ.

'ಸಿದ್ದರಾಮಯ್ಯ ಅವರೇ, ನಿಮ್ಮ ಕಾಲದಲ್ಲಿ ಹಗರಣದ ಮೂಲಕ ಯಾವುದರ ಗಂಟು ಪಡೆದಿದ್ದು? ಸ್ಟೀಲ್ ಬ್ರಿಡ್ಜ್ ನಿರ್ಮಾಣದಲ್ಲಿ ಕಮಿಷನ್ ಯಾವ ಗಂಟಿನ ರೂಪದಲ್ಲಿ ಪಡೆದಿದ್ದು ಬಿಬಿಎಂಪಿಯಲ್ಲಿ ನಿಮ್ಮ ಅವಧಿಯಲ್ಲಿ 1400 ಕೋಟಿ ಹಗರಣ ನಡೆದಿತ್ತು. ಈ ಹಗರಣದಲ್ಲಿನ ಕಮಿಷನ್ ಮೊತ್ತವನ್ನು ಯಾವ ರೂಪದಲ್ಲಿ ಪಡೆದಿದ್ದು? ಎಂದು ಬಿಜೆಪಿ ಪ್ರಶ್ನಿಸಿತು.

ಹೆಸರು ಕೆಡಿಸಲು ಅಭಿಯಾನ: ಸಿ.ಎಂ

ಒಂದನೇ ಪುಟದಿಂದ....

ಆಧಾರರಹಿತವಾಗಿ ಅಭಿಯಾನ ಮಾಡುವುದು ಎಲ್ಲರಿಗೂ ಬರುತ್ತದೆ. ಆದರೆ ಇದು ಸುಳ್ಳು ಎಂದು ಜನಕ್ಕೆ ತಿಳಿಯುತ್ತದೆ. ಇದಕ್ಕೆ ಯಾವ ಬೆಲೆಯೂ ಇಲ್ಲ. ರಾಜ್ಯದ ಹೆಸರು ಕೆಡಿಸುವ ಇಂತಹ ಪ್ರಯತ್ನಕ್ಕೆ ಕಡಿವಾಣ ಹಾಕುವ ಪ್ರಯತ್ನ ನಮ್ಮದು' ಎಂದರು.

ಸಿಸಿಬಿಗೆ ವರ್ಗ

'ಪೇ ಸಿಎಂ' ಎಂಬ ಘೋಷಣೆಯ ಭಿತ್ತಿಪತ್ರ ಹಾಗೂ ಕ್ಯೂಆರ್ ಕೋಡ್ ಅಭಿಯಾನದ ವಿರುದ್ಧ ಹೈಗ್ರೌಂಡ್ಸ್, ಸದಾಶಿವನಗರ, ಭಾರತಿ ನಗರ, ಶೇಷಾದ್ರಿಪುರಂ, ಜೆಸಿ ನಗರ ಸೇರಿ ನಗರದ ಹಲವು ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ. ಈ ಪ್ರಕರಣವನ್ನು ಸಿಸಿಬಿಗೆ ವರ್ಗಾಯಿಸಿ, ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಆದೇಶ ಹೊರಡಿಸಿದ್ದಾರೆ.


'ಬಿಬಿಎಂಪಿ ಅಧಿಕಾರಿಗಳ ದೂರು ಆಧರಿಸಿ ಅಪರಿಚಿತರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಲಾಗುತ್ತಿದೆ. ಮಂಗಳವಾರ ರಾತ್ರಿ ಈ ಭಿತ್ತಿಪತ್ರಗಳನ್ನು ಅಂಟಿಸಿರುವ ಸಾಧ್ಯತೆ ಇದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಳಕೆಯಾಗದ ಸಾವಿರಕ್ಕೂ ಹೆಚ್ಚು ಭವನ

'ಅಂಬೇಡ್ಕರ್ ಭವನ' ಇನ್ನು ಮುಂದೆ ಗ್ರಂಥಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ನಿರ್ಮಿಸಿರುವ ಅಂಬೇಡ್ಕರ್ ಭವನಗಳು ಬಳಕೆಯಾಗದೇ ಮುಚ್ಚಿವೆ. ಇವುಗಳನ್ನು ಗ್ರಂಥಾಲಯಗಳನ್ನಾಗಿ ಪರಿವರ್ತಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.



ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಎ.ಟಿ. ರಾಮಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬಳಕೆಯಾಗದಿರುವ ಅಂಬೇಡ್ಕರ್ ಭವನಗಳನ್ನು ಗ್ರಂಥಾಲಯಗಳ ಮೂಲಕ ಸದ್ಬಳಕೆ ಮಾಡಲಾಗುವುದು. ಈ ಮೂಲಕ ಗ್ರಾಮದ ಜನರ ಜ್ಞಾನಾಭಿವೃದ್ಧಿಗೆ ಅನುಕೂಲವಾಗಲಿದೆ ಎಂದರು.

ಗ್ರಾಮಗಳು ಅಥವಾ ಸಣ್ಣ ಪಟ್ಟಣಗಳಲ್ಲಿ ವಿವಿಧ ಯೋಜನೆಗಳಡಿ ಪ್ರತ್ಯೇಕ ಭವನಗಳನ್ನು ನಿರ್ಮಿಸುವುದರ ಬದಲು ಎಲ್ಲ ಹಣವನ್ನು ಒಟ್ಟು ಸೇರಿಸಿ ಉತ್ತಮ ಗುಣಮಟ್ಟದ ಒಂದು ದೊಡ್ಡ ಭವನ ನಿರ್ಮಿಸುವುದು ಸೂಕ್ತ ಎಂದು ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್ ಅವರು ನೀಡಿದ್ದ ಸಲಹೆಯನ್ನು ಸಭಾಧ್ಯಕ್ಷರು ಸಚಿವರ ಗಮನಕ್ಕೆ ತಂದರು.

ಉಡುಪಿಯಲ್ಲಿ ಇಎಸ್‌ಐ ಆಸ್ಪತ್ರೆ

ಉಡುಪಿಯಲ್ಲಿ 200 ಹಾಸಿಗೆಗಳ ಸಾಮರ್ಥ್ಯದ ಇಎಸ್‌ಐ ಆಸ್ಪತ್ರೆಯನ್ನು ನಿರ್ಮಿಸಲು ಕೇಂದ್ರ ಸರ್ಕಾರ ಮಂಜೂರಾತಿ ನೀಡಿದೆ ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ತಿಳಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ, ಗಂಜೀಮಠ, ಉಜಿರೆ, ಬೆಳ್ತಂಗಡಿ, ಮೂಡಬಿದ್ರಿಗಳಲ್ಲಿ ಇಎಸ್‌ಐ ಚಿಕಿತ್ಸಾಲಯಗಳನ್ನು ಆರಂಭಿಸಲು ಅನುಮತಿ ನೀಡಲಾಗಿದೆ ಎಂದರು.

ಮಕ್ಕಳಿಗೆ ಆದ್ಯತೆ

ರಾಜ್ಯದ ಹಲವು ಭಾಗಗಳಲ್ಲಿ ಶಾಲಾ ಮಕ್ಕಳಿಗೆ ಶಾಲೆಗೆ ಹೋಗಲು ಬಸ್ ವ್ಯವಸ್ಥೆ ಇಲ್ಲದಿರುವುದು ಶಾಸಕರು ಗಮನಕ್ಕೆ ತಂದಿದ್ದಾರೆ. ಆದಷ್ಟು ಬೇಗ ವ್ಯವಸ್ಥೆ ಮಾಡಲಾಗುವುದು ಎಂದು ಕಾಂಗ್ರೆಸ್‌ನ ಈಶ್ವರ್ ಖಂಡ್ರೆ ಅವರ ಪ್ರಶ್ನೆಗೆ ಸಾರಿಗೆ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ ಲೇಖನದಲ್ಲಿ ಹಲವು ಉಲ್ಲೇಖ


ಕರ್ನಾಟಕದಲ್ಲೂ ಇದ್ದವು ಚೀತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೀತಾಗಳು ಈ ಹಿಂದೆ ಕರ್ನಾಟಕದಲ್ಲೂ ಇದ್ದವು ಎನ್ನುತ್ತವೆ ಐತಿಹಾಸಿಕ ದಾಖಲೆಗಳು ಮತ್ತು ಸಾಹಿತ್ಯ ಕೃತಿಗಳು. 2019ರ ಜುಲೈನಲ್ಲಿ ಪ್ರಕಟವಾಗಿರುವ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯ ಜರ್ನಲ್‌ನಲ್ಲಿ ಈ ಬಗ್ಗೆ ಉಲ್ಲೇಖಿಸಲಾಗಿದೆ.

ಬಾಂಬೆ ನ್ಯಾಚುರಲ್ ಹಿಸ್ಟರಿಯ ಜರ್ನಲ್‌ನಲ್ಲಿ ದಿವ್ಯಭಾನು ಸಿಂಹ ಮತ್ತು ರಾಜಾ ಕಾಸ್ಮಿ ಅವರು ಬರೆದಿರುವ ಲೇಖನದಲ್ಲಿ ಕರ್ನಾಟಕದಲ್ಲಿ ಚೀತಾಗಳಿದ್ದ ಬಗ್ಗೆ ಉಲ್ಲೇಖಿಸಿದ್ದಾರೆ. ಮೈಸೂರಿನ ಟಿಪ್ಪು ಸುಲ್ತಾನ್ ಒಟ್ಟು 16 ಚೀತಾಗಳನ್ನು ಸಾಕಿದ್ದ ಎಂದು ಈ ಲೇಖನದಲ್ಲಿ ಉಲ್ಲೇಖಿಸಲಾಗಿದೆ.

ಕೇಂದ್ರ ಅರಣ್ಯ ಸಚಿವಾಲಯವು ಸಿದ್ಧಪಡಿಸಿರುವ 'ಪ್ರಾಜೆಕ್ಟ್ ಚೀತಾ' ವರದಿಯಲ್ಲೂ, ಈ ಹಿಂದೆ ಕರ್ನಾಟಕದಲ್ಲಿ ಚೀತಾಗಳಿದ್ದವು ಎಂದು ಉಲ್ಲೇಖಿಸಲಾಗಿದೆ. ಈ ವರದಿಯಲ್ಲಿ ರಾಜ್ಯದ ಯಾವ ಭಾಗಗಳಲ್ಲಿ ಚೀತಾಗಳಿದ್ದವು ಎಂಬುದನ್ನು ಗುರುತಿಸಲಾಗಿದೆ. ಕೇಂದ್ರ ಅರಣ್ಯ ಸಚಿವಾಲಯದ 'ಭಾರತಕ್ಕೆ ಚೀತಾಗಳ ಮರುಪರಿಚಯ ಕಾರ್ಯಯೋಜನೆ' ವರದಿಯಲ್ಲೂ ಈ ಬಗ್ಗೆ ಉಲ್ಲೇಖಿಸಲಾಗಿದೆ. ಕರ್ನಾಟಕದಲ್ಲೂ ಚೀತಾಗಳ ಆವಾಸಕ್ಕೆ ಯೋಗ್ಯವಾದ ಪರಿಸರವಿರುವ ಪ್ರದೇಶಗಳಿವೆ ಎಂದು ಗುರುತಿಸಲಾಗಿದೆ. ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದ ಗಡಿಯಲ್ಲಿ ಇಂತಹ ಪ್ರದೇಶವಿದೆ ಎಂದು ನಕ್ಷೆಯಲ್ಲಿ ಗುರುತಿಸಲಾಗಿದೆ.


1897ರಲ್ಲಿ ಧಾರವಾಡದಲ್ಲಿ ನಾಯಿಯ ಜತೆಗೆ ಇರುವ ಚೀತಾ ಮರಿಗಳು. ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯ ಜರ್ನಲ್‌ನಲ್ಲಿ 1897ರ ಆಗಸ್ಟ್ 17ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಈ ಚಿತ್ರವನ್ನು ಮೇಜರ್ ಜಿ.ಎಸ್.ರೋಡೊನ್ ತೆಗೆದಿದ್ದರು

ರಾಜ್ಯದ ವಿವಿಧ ಭಾಗಗಳಲ್ಲಿ ಚೀತಾ ಸಂತತಿ

ವರ್ಷ	ಸ್ಥಳ	ಉಲ್ಲೇಖ	ಮೂಲ
1799	ಮೈಸೂರು	16 ಚೀತಾಗಳನ್ನು ಟಿಪ್ಪು ಸುಲ್ತಾನ್ ಬಳಸುತ್ತಿದ್ದ. ಇದರಲ್ಲಿ ಮೂರನ್ನು ದೊರೆ 3ನೇ ಜಾರ್ಜ್‌ಗೆ ನೀಡಿದ್ದ	ಬಡ್ಡ್ 1990
1815	ಬೆಂಗಳೂರು	ಮೈಸೂರು ರಾಜ ಹಾಗೂ ಬ್ರಿಟಿಷ್ ನಿವಾಸಿ ಎ.ಎಚ್. ಕೋಲ್ ಅವರು ಚೀತಾಗಳನ್ನು ಬೇಟೆಗಾಗಿ ನೀಡಿದ್ದರು	ಬೆವನ್ 1839
1839-40	ಕಲಾದಗಿ	ಪಳಗಿಸಿದ್ದ ಒಂದು ಚೀತಾ ಪ್ರಾಣಿಬೇಟೆಗೆ ಬಳಕೆ	ಹ್ಯಾಮಿಲ್ಟನ್ 1892
1864-77	ಮೈಸೂರು ರಾಜ್ಯ	ಚೀತಾದ ಎರಡು ಚರ್ಮ ಪತ್ತೆ	ಸ್ಯಾಂಡರ್ಸನ್ 1878
1875	ಬಳ್ಳಾರಿ	ತಲಾ ₹12ರಂತೆ ₹61ಕ್ಕೆ ಐದು ಚೀತಾ ಮಾರಾಟ	ಎನ್‌ಎಐ 1877
1882	ಬೇರಂಬಾಡಿ ಅರಣ್ಯ, ಮೈಸೂರು	ಐದು ಚೀತಾ ಪತ್ತೆ, ಒಂದಕ್ಕೆ ಗುಂಡೇಟು	ರಸೆಲ್ 1990
1890-95	ಅಟ್ಟಿಕಲ್‌ಪುರ, ಮೈಸೂರು	ಒಂದು ಚೀತಾ ಇತ್ತು	ಮೋರಿಸ್ 1935
1896	ದಕ್ಷಿಣ ಕನ್ನಡ	ಕಾಡಿನ ಜನರು ಚೀತಾ ಮರಿಯನ್ನು ಲೇಖಕರಿಗೆ ನೀಡಿದ್ದರು. ದೊಡ್ಡದಾದ ಬಳಿಕ ಮೂರು ವರ್ಷ ಅದನ್ನು ಬೇಟೆಗೆ ಬಳಸಲಾಗಿತ್ತು	ಕ್ಲೇ 1901
1901	ದಕ್ಷಿಣ ಕನ್ನಡ	ಬಹುಮಾನಕ್ಕಾಗಿ ಒಂದು ಹತ್ಯೆ ₹50 ಬಹುಮಾನಕ್ಕೆ ಮತ್ತೆ 3 ಚೀತಾ ಹತ್ಯೆ	ಎನ್‌ಎಐ 1902
1903	ದಕ್ಷಿಣ ಕನ್ನಡ	ಮೂರು ಚೀತಾ, ಬಹುಮಾನದ ಹಣ ಪಾವತಿಸಲಿಲ್ಲ	ಎನ್‌ಎಐ 1904
1912	ಬಳ್ಳಾರಿ	ಒಂದು ಚೀತಾ ಸೆರೆ	ಶಾಹಜೀ ಮಹಾರಾಜ್ 1994
1914	ಮೈಸೂರು ರಾಜ್ಯ	ಚೀತಾ ಪತ್ತೆ	ಪ್ಲೇನೆ 1914-15
1914	ಚಿಕ್ಕಮಗಳೂರು	ಚೀತಾ ಪತ್ತೆ	ಪ್ಲೇನೆ 1914-15

ಡಿಎನ್‌ಎ ಪರೀಕ್ಷೆಗೆ ಮೈಸೂರಿನ 'ಚೀತಾ'!

• ಮೋಹನ್ ಕುಮಾರ ಸಿ.

ಮೈಸೂರು: 'ಏಷ್ಯಾಟಿಕ್ ಚೀತಾ'ವನ್ನು ಹೋಲುವ 'ಸ್ಟಫ್ಡ್' ಗೊಂಬೆಯು ನಗರದ ಪ್ರಾದೇಶಿಕ ಪ್ರಾಕೃತಿಕ ವಿಜ್ಞಾನ ವಸ್ತುಸಂಗ್ರಹಾಲಯದಲ್ಲಿದ್ದು (ಆರ್‌ಎಂಎನ್‌ಎಚ್), ಅದರ ಕೂದಲನ್ನು ಸಂಸ್ಥೆಯು ಡಿಎನ್‌ಎ ಪರೀಕ್ಷೆಗಾಗಿ ಕಳುಹಿಸಲಿದೆ.

ಇಲ್ಲಿರುವ 'ಚೀತಾ' ಗೊಂಬೆಯನ್ನು 'ಟ್ಯಾಕ್ಸಿಡರ್ಮಿ' ಕಲೆಯಲ್ಲಿ ಸಿದ್ಧಪಡಿಸಲಾಗಿದೆ. ಇದು ಭಾರತದ್ದೇ ಅಥವಾ ಆಫ್ರಿಕಾದ ಚೀತಾವೇ ಎಂಬುದು ಸ್ಪಷ್ಟವಾಗಿಲ್ಲ. ಈ ಗೊಂಬೆಯನ್ನು 40ರ ದಶಕದಲ್ಲಿ ನಗರದಲ್ಲಿ ನೆಲೆಸಿದ್ದ 'ಟ್ಯಾಕ್ಸಿಡೆರ್ಮಿ' ತಜ್ಞ ವ್ಯಾನ್ ಈಗನ್, ಚಾಮರಾಜೇಂದ್ರ ಮೃಗಾಲಯದಲ್ಲಿ ಮೃತಪಟ್ಟಿದ್ದ ಚೀತಾದ ಚರ್ಮದಿಂದ ತಯಾರಿಸಿದ್ದರೆನ್ನಲಾಗಿದೆ.

'ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿನ ಪಾಕೃತಿಕ ಇತಿಹಾಸ ಸಂಗ್ರಹ ವಿಭಾಗವನ್ನು ಮುಚ್ಚುವಾಗ ಈ ಬೊಂಬೆಯನ್ನು ನಮಗೆ ಹಸ್ತಾಂತರಿಸಲಾಗಿತ್ತು' ಎಂದು ಸಂಸ್ಥೆಯ ನಿರ್ದೇಶಕ ಅರ್ಜುನ್ ಪ್ರಸಾದ್ ತಿವಾರಿ 'ಪ್ರಜಾವಾಣಿ'ಗೆ ತಿಳಿಸಿದರು.

'ಹೈದರಾಬಾದ್‌ನ ಸಿಸಿಎಂಬಿ ಹಾಗೂ ಕೋಲ್ಕತ್ತಾದ ಭಾರತೀಯ ಪ್ರಾಣಿ ಸರ್ವೇಕ್ಷಣಾಲಯದ ವಿಜ್ಞಾನಿ ಅರ್ಚನಾ ಬಹುಗುಣ ಅವರಿಗೆ ಚೀತಾದ ಚರ್ಮದ ಕೂದಲನ್ನು ಕಳುಹಿಸಲಾಗುವುದು' ಎಂದರು.

'ಚಾಮರಾಜೇಂದ್ರ ಮೃಗಾಲಯದಲ್ಲಿ ಏಷ್ಯಾಟಿಕ್ ಹಾಗೂ ಆಫ್ರಿಕಾ ಚೀತಾಗಳು ಒಂದೇ ಕಡೆಯಿದ್ದವು. ಡಿಎನ್‌ಎ ಪರೀಕ್ಷೆಯಿಂದ ಸಂಸ್ಥೆಯ ಚೀತಾ ಮೂಲ ಪತ್ತೆಯಾಗಲಿದೆ' ಎಂದು ಸಂಸ್ಥೆಯ ವಿಜ್ಞಾನಿ ಡಾ.ಎಂ.ವಿಜಯ್ ತಿಳಿಸಿದರು.


'ಏಷ್ಯಾಟಿಕ್ ಚೀತಾ'ವನ್ನು ಹೋಲುವ 'ಸ್ಟಫ್ಡ್' ಗೊಂಬೆ

'ಟ್ಯಾಕ್ಸಿಡರ್ಮಿ' ಕಲೆ

ನಜರ್‌ಬಾದ್‌ನಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ವ್ಯಾನ್ ಈಗನ್ ಸ್ಥಾಪಿಸಿದ್ದ 'ವ್ಯಾನ್ ಈಗನ್ ಅಂಡ್ ವ್ಯಾನ್ ಈಗನ್' ಕಂಪನಿಯು 'ಟ್ಯಾಕ್ಸಿಡರ್ಮಿ' ಬೊಂಬೆಗಳನ್ನು ತಯಾರಿಸುತ್ತಿತ್ತು. ವನ್ಯಜೀವಿ ಸಂರಕ್ಷಣಾ ಕಾಯ್ದೆ ಜಾರಿಯಿಂದಾಗಿ ನಷ್ಟದಲ್ಲಿದ್ದ ಕಂಪನಿ 1998ರಲ್ಲಿ ಮುಚ್ಚಿತು. ಪ್ರಾಣಿಗಳ ಚರ್ಮವನ್ನು ಈಗನ್ ಸಂರಕ್ಷಿಸಿ ಬೊಂಬೆ ತಯಾರಿಸುತ್ತಿದ್ದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.30	9,221	8,889
ಹಾರಂಗಿ	2,859	2,857.85	1,194	990
ಕಬಿನಿ	2284.00	2283.04	5,620	1,500
ಹೇಮಾವತಿ	2,922	2,922	5,296	5,200
ಲಿಂಗನಮಕ್ಕಿ	1,819	1,816	6,168	7,232
ಸೂಪಾ (ಮೀ)	564	554.00	4,991	1,600
ಮಾಣಿ	595	590	707	707
ತುಂಗಭದ್ರಾ	1,633	1,633	18,200	20,289
ಮಲಪ್ರಭಾ	2079.5	2,079.50	1,794	1,794
ಘಟಪ್ರಭಾ	2175	2,175	5,384	3,606
ಭದ್ರಾ	186	184.4	4,770	4,770
ಆಲಮಟ್ಟಿ (ಮೀ)	519.6	519.55	72,468	50,000
ನಾರಾಯಣಪುರ (ಮೀ)	492.25	491.84	50,000	40,260

* ನೆಲಮಟ್ಟದಿಂದ

ಸಿಇಟಿ ಸಮನ್ವಯ ಸೂತ್ರ: ಇಂದು ಕೋರ್ಟ್‌ಗೆ ವರದಿ

ಬೆಂಗಳೂರು: ಸಿಇಟಿ ರ‍್ಯಾಂಕಿಂಗ್ ಬಿಕ್ಕಟ್ಟು ಪರಿಹರಿಸಲು ಅಗತ್ಯವಾದ ಸಮನ್ವಯ ಸೂತ್ರ ರೂಪಿಸಲು ರಚಿಸಿದ್ದ ಐವರ ಸಮಿತಿ ನೀಡಿರುವ ವರದಿಯನ್ನು ಸರ್ಕಾರ ಸೆ.22ರಂದು ಹೈಕೋರ್ಟ್‌ಗೆ ಸಲ್ಲಿಸಲಿದೆ.

ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಬಿ.ತಿಮ್ಮೇಗೌಡ ಅವರ ಅಧ್ಯಕ್ಷತೆಯಲ್ಲಿ ಐವರ ಸಮಿತಿಯನ್ನು ಸರ್ಕಾರ ರಚಿಸಿತ್ತು. ಸಮಿತಿ ಬುಧವಾರ ಸರ್ಕಾರಕ್ಕೆ ವರದಿ ಸಲ್ಲಿಸಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರತಿಕ್ರಿಯಿಸಿದರು.

2021ರಲ್ಲಿ ಕೋವಿಡ್ ಕಾರಣ ದ್ವಿತೀಯ ಪಿಯು ಪರೀಕ್ಷೆಯನ್ನು ನಡೆಸದೆ, ಎಸ್ಸೆಸ್ಸೆಲ್ಸಿ ಮತ್ತು ಪ್ರಥಮ ಪಿಯುಸಿ ಅಂಕ ಪರಿಗಣಿಸಿ, ತೇರ್ಗಡೆ ಮಾಡಲಾಗಿತ್ತು.

ಎಂಜಿನಿಯರಿಂಗ್ ಕೋರ್ಸ್ ಪ್ರವೇಶ ನೀಡುವಾಗ ಸಿಇಟಿ ಅಂಕಗಳನ್ನಷ್ಟೆ ಪರಿಗಣಿಸಿ, ಪ್ರವೇಶ ನೀಡಲಾಗಿತ್ತು. ಅವರಲ್ಲಿ 24 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಬಾರಿ ಮತ್ತೆ ಸಿಇಟಿ ಬರೆದಿದ್ದರು. ಪಿಯು ಅಂಕವನ್ನೂ ಪರಿಗಣಿಸಿ, ಸಿಇಟಿ ರ‍್ಯಾಂಕ್ ನೀಡಬೇಕು ಎಂದು ಹಲವರು ಹೈಕೋರ್ಟ್ ಮೊರೆ ಹೋಗಿದ್ದರು. ಸಮನ್ವಯ ಸೂತ್ರ ಸಿದ್ಧಪಡಿಸುವಂತೆ ಕೋರ್ಟ್ ಸೂಚಿಸಿತ್ತು.

ಊರಿನಾಚೆ ಶೆಡ್‌ನಲ್ಲಿ ವಾಸ: ಉಳ್ಳೇರಹಳ್ಳಿ ಪರಿಶಿಷ್ಟ ಜಾತಿ ಬಾಲಕನ ಕುಟುಂಬದ ಸಂಕಷ್ಟ

ಹಾಸಿಗೆ ಹಿಡಿದ ತಂದೆ, ಕೂಲಿ ಮಾಡುವ ತಾಯಿ

• ಕೆ.ಓಂಕಾರ ಮೂರ್ತಿ

ಕೋಲಾರ: ಅನಾರೋಗ್ಯಪೀಡಿತ ತಂದೆ, ಊರಿನಾಚೆ ಮುರಿದು ಬೀಳುವ ಸ್ಥಿತಿಯಲ್ಲಿರುವ ಶೆಡ್‌ನಲ್ಲಿ ವಾಸ. ನಿತ್ಯ ಬೆಂಗಳೂರಿಗೆ ರೈಲಿನಲ್ಲಿ ಸಂಚರಿಸಿ ಕೂಲಿ ಕೆಲಸ ಮಾಡಿ ಕುಟುಂಬ ನಿರ್ವಹಣೆ ಮಾಡುತ್ತಿರುವ ತಾಯಿ. ಇಷ್ಟೆಲ್ಲಾ ಸಂಕಷ್ಟಗಳ ನಡುವೆ ದೇವರ ಗುಜ್ಜಕೋಲು ಮುಟ್ಟಿದ ಕಾರಣಕ್ಕೆ ಗ್ರಾಮಸ್ಥರಿಂದ ಬಹಿಷ್ಕಾರದ ಬೆದರಿಕೆ.

– ಇದು ಬಹಿಷ್ಕಾರದ ಭೀತಿಯಲ್ಲಿ ಬದುಕುತ್ತಿರುವ ಜಿಲ್ಲೆಯ ಮಾಲೂರು ತಾಲ್ಲೂಕಿನ ಟೇಕಲ್ ಹೋಬಳಿಯ ಉಳ್ಳೇರಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಬಾಲಕ ಚೇತನ್ ಕುಟುಂಬದ ಸ್ಥಿತಿ.

ಗ್ರಾಮ ಹೊರವಲಯದ ಗುಡ್ಡದ ಪಕ್ಕದ ಅರಣ್ಯ ಇಲಾಖೆ ಜಾಗದಲ್ಲಿ ಗುಬ್ಬಿ ಗೂಡಿನಂತಹ ಪುಟ್ಟ ಶೀಟ್ ಮನೆಯಲ್ಲಿ ಕುಟುಂಬ ವಾಸವಾಗಿದೆ. ಬಾಲಕನ ತಾಯಿ ಶೋಭಾ ಬೆಂಗಳೂರಿನ ವೈಟ್‌ಫೀಲ್ಡ್‌ನ ಖಾಸಗಿ ಸಂಸ್ಥೆಯೊಂದರ ಹೌಸ್ ಕೀಪಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಾರೆ. ನಿತ್ಯ ರೈಲಿನಲ್ಲಿ ಬೆಂಗಳೂರಿಗೆ ಹೋಗಿ ಬರುತ್ತಾರೆ. ₹300 ಕೂಲಿ ಸಿಗುತ್ತದೆ. ಪತಿ ರಮೇಶ್ ಬೈಕ್ ಅಪಘಾತದಲ್ಲಿ ಬೆನ್ನು, ಕಾಲಿಗೆ ಪೆಟ್ಟು ಮಾಡಿಕೊಂಡು ದುಡಿಯುಲು ಸಾಧ್ಯವಾಗದ ಅಸಹಾಯಕ ಪರಿಸ್ಥಿತಿಯಲ್ಲಿದ್ದಾರೆ. ಒಬ್ಬನೇ ಪುತ್ರ ಚೇತನ್ ಸಮೀಪದ ಟೇಕಲ್‌ನಲ್ಲಿ 10ನೇ ತರಗತಿ ಓದುತ್ತಿದ್ದಾನೆ.

'ಹಲವಾರು ವರ್ಷಗಳಿಂದ ಊರಿನ ಮಧ್ಯದಲ್ಲಿ ಗುಡಿಸಲು ಮನೆಯಲ್ಲಿದ್ದೆವು. ಗ್ರಾಮಸ್ಥರ ಒತ್ತಾಯದಿಂದ ಊರ ಹೊರಗೆ ಹೋದೆವು' ಎಂದು ಶೋಭಾ 'ಪ್ರಜಾವಾಣಿ' ಎದುರು ಅಳಲು ತೋಡಿಕೊಂಡರು.

'ಬಾಲಕನ ಕುಟುಂಬದ ಮನೆ ಮುರಿದು ಬೀಳುವ ಹಂತದಲ್ಲಿದ್ದರೂ ಗ್ರಾಮ ಪಂಚಾಯಿತಿಯಿಂದ ಈವರೆಗೆ ಮನೆ ನೀಡಿಲ್ಲ. ಊರಿನವರೆಲ್ಲಾ ಸೇರಿ ಕುಟುಂಬವನ್ನು ಹೊರಗೆ ಇಟ್ಟಿದ್ದಾರೆ' ಎಂದು ಎಸ್‌.ಸಿ, ಎಸ್‌.ಟಿ ಮೇಲಿನ ದೌರ್ಜನ್ಯ ನಿಯಂತ್ರಣ ಹಾಗೂ ಜಾಗೃತಿ ಸಮಿತಿ ಸದಸ್ಯ ವೆಂಕಟರಾಮ್ ಹೇಳುತ್ತಾರೆ.

ಸಾಲಕ್ಕಾಗಿ ಗೋಗರೆದಿದ್ದ ಮಹಿಳೆ: ₹60 ಸಾವಿರ ದಂಡ ಕಟ್ಟದಿದ್ದರೆ ಬಹಿಷ್ಕಾರ ಹಾಕಿ ಊರು ಬಿಟ್ಟು ಕಳುಹಿಸುತ್ತಾರೆ ಎಂಬ ಭಯದಿಂದ ಬಾಲಕನ ತಾಯಿ 12 ದಿನಗಳಿಂದ ಕಂಡಕಂಡವರಲ್ಲಿ ಸಾಲಕ್ಕಾಗಿ ಕೈಯೊಡ್ಡಿದ್ದರು. ಎಲ್ಲೆಂದರಲ್ಲಿ ಸಾಲ ಹುಡುಕಿಕೊಂಡು ಅಲೆದಿದ್ದರು. ಆದರೆ, ಎಲ್ಲಿಯೂ ಸಾಲ ಸಿಗದೆ ನಿರಾಸೆಯಿಂದ ಬರಿಗೈಯಲ್ಲಿ ಮರಳಿದ್ದರು.

'ನನಗೆ ದಿನಕ್ಕೆ ಸಿಗುವುದೇ ₹300 ಕೂಲಿ. ಎಲ್ಲಿಂದ ₹60 ಸಾವಿರ ತಂದು ಕೊಡಲಿ ಎಂದು ಕೇಳಿದೆ. ಹಣ ನೀಡದಿದ್ದರೆ ಊರು ತೊರೆಯಬೇಕು. ಜೆಸಿಬಿ ಯಂತ್ರ ತಂದು ಮನೆ ಬೀಳಿಸುವುದಾಗಿ ಗ್ರಾಮಸ್ಥರು ಬೆದರಿಸಿದ್ದರು' ಎಂದು ಅವರು ಕಣ್ಣೀರಿಟ್ಟರು.

ದೇವರ ಗುಜ್ಜುಕೋಲು ಮುಟ್ಟಿದನೆಂದು ಪರಿಶಿಷ್ಟ ಜಾತಿ ಬಾಲಕನಿಗೆ ಗ್ರಾಮದ ಕೆಲ ಒಕ್ಕಲಿಗ ಮುಖಂಡರು ₹ 60 ಸಾವಿರ ದಂಡ ವಿಧಿಸಿ, ಸಾಮಾಜಿಕ ಬಹಿಷ್ಕಾರದ ಬೆದರಿಕೆ ಹಾಕಿರುವ ಘಟನೆ ಸೆ. 8ರಂದು ನಡೆದಿತ್ತು. ಸೆ. 20ರಂದು ಘಟನೆ ಗೊತ್ತಾಗಿ ಗ್ರಾಮದ ಎಂಟು ಮಂದಿ ವಿರುದ್ಧ ದೌರ್ಜನ್ಯ ಪ್ರಕರಣ ದಾಖಲಾಗಿದೆ.

₹60 ಸಾವಿರಕ್ಕಾಗಿ 12 ದಿನ ತಳಮಳ

ಪರಿಶಿಷ್ಟ ಜಾತಿ ಬಾಲಕನಿಗೆ ಗ್ರಾಮದ ಕೆಲವು ಒಕ್ಕಲಿಗ ಮುಖಂಡರು ದಂಡ ವಿಧಿಸಿ, ಸಾಮಾಜಿಕ ಬಹಿಷ್ಕಾರದ ಬೆದರಿಕೆ ಹಾಕಿ 12 ದಿನ ಕಳೆದರೂ ಪ್ರಕರಣ ರಹಸ್ಯವಾಗಿದ್ದ ಬಗ್ಗೆ ಜಿಲ್ಲೆಯಲ್ಲಿ ಆಕ್ರೋಶ ವ್ಯಕ್ತವಾಗಿದೆ.

ಈ ಅವಧಿಯಲ್ಲಿ ಕುಟುಂಬ ಅನುಭವಿಸಿದ ತಳಮಳ, ಸಂಕಷ್ಟ ಅಷ್ಟಿಷ್ಟಲ್ಲ. ಜೀವ ಬೆದರಿಕೆ ಕಾರಣ ಯಾರೂ ಬಳಿಯೂ ಸಮಸ್ಯೆ ಹೇಳಿಕೊಂಡಿಲ್ಲ. ₹60 ಸಾವಿರ ದಂಡದ ಹಣ ಹೊಂದಿಸಲು ಸಾಧ್ಯವಾಗದೆ ಕುಟುಂಬ ನಿದ್ದೆ ಇಲ್ಲದ ರಾತ್ರಿ ಕಳೆದಿದೆ.

ಜಿಲ್ಲಾಡಳಿತ, ಪೊಲೀಸ್, ಎಸ್‌.ಸಿ, ಎಸ್‌.ಟಿ ಮೇಲಿನ ದೌರ್ಜನ್ಯ ನಿಯಂತ್ರಣ ಹಾಗೂ ಜಾಗೃತಿ ಸಮಿತಿ, ಸಂಘಟನೆಗಳು, ಜಿಲ್ಲಾಡಳಿತಕ್ಕೂ ಈ ಬಗ್ಗೆ ಮಾಹಿತಿ ಗೊತ್ತಾಗಿಲ್ಲ.

ಪರಿಶಿಷ್ಟ ಕುಟುಂಬಕ್ಕೆ ಬಹಿಷ್ಕಾರ ಖೇದಕರ: ಪೇಜಾವರ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಉಡುಪಿ: ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಉಳ್ಳೇರಹಳ್ಳಿಯಲ್ಲಿ ಪಲ್ಲಕ್ಕಿ ಹೊತ್ತವರನ್ನು ಮುಟ್ಟಿದ್ದಕ್ಕೆ ಪರಿಶಿಷ್ಟ ಜಾತಿಯ ಬಾಲಕನ ಕುಟುಂಬಕ್ಕೆ ಬಹಿಷ್ಕಾರ ಹಾಕಿರುವುದು ಖೇದಕರ. ಯಾವುದೇ ಧರ್ಮ ಗ್ರಂಥಗಳು ಈ ನಡೆಯನ್ನು ಒಪ್ಪುವುದಿಲ್ಲ ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಬುಧವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ, ಉತ್ಸವಗಳು ಗ್ರಾಮದ ಎಲ್ಲರಿಗೂ ಸಂಬಂಧಪಟ್ಟಿದ್ದು. ಬಹಿಷ್ಕಾರದಂತಹ ಘಟನೆಗಳು ನಡೆಯಬಾರದು. ಬಹಿಷ್ಕಾರದಂತಹ ಕೃತ್ಯಗಳಲ್ಲಿ ಭಾಗಿಯಾದವರನ್ನು ಶಿಕ್ಷಿಸಿದರೆ ಸಾಲದು, ಸರ್ಕಾರ ಜನರಲ್ಲಿ ಜಾಗೃತಿ ಮೂಡಿಸುವಂತಹ ಕೆಲಸ ಮಾಡಬೇಕು ಎಂದರು.

ಉಳ್ಳೇರಹಳ್ಳಿಗೆ ಅಧಿಕಾರಿಗಳ ದಂಡು

ಒಂದನೇ ಪುಟದಿಂದ...

'ಕುಟುಂಬದ ರಕ್ಷಣೆಗಾಗಿ ಕಾನ್‌ಸ್ಟೆಬಲ್ ನಿಯೋಜಿಸಲಾಗಿದೆ. ತಲೆಮರೆಸಿಕೊಂಡಿರುವ ಆರೋಪಿಗಳನ್ನು ಶೀಘ್ರವೇ ಬಂಧಿಸಲು ಸಿಬ್ಬಂದಿಗೆ ಸೂಚನೆ ನೀಡಿದ್ದೇನೆ' ಎಂದು ಎಸ್ಪಿ ದೇವರಾಜ್ ಹೇಳಿದರು.

ಅದರ ಬೆನ್ನಲ್ಲೇ, ಮಧ್ಯಾಹ್ನ ಸಂಸದ ಎಸ್. ಮುನಿಸ್ವಾಮಿ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಗ್ರಾಮಕ್ಕೆ ತೆರಳಿ ಸಭೆ ನಡೆಸಿತು. ಸಮಾಜ ಕಲ್ಯಾಣ ಇಲಾಖೆಯ ಆಯುಕ್ತ ರಾಕೇಶ್ ಕುಮಾರ್, ಜಂಟಿ ನಿರ್ದೇಶಕ ಚನ್ನಬಸವಪ್ಪ, ಜಿಲ್ಲಾ ಪಂಚಾಯಿತಿ ಸಿಇಒ ಯುಕೇಶ್ ಕುಮಾರ್ ಸೇರಿದಂತೆ ಬಹುತೇಕ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಈ ನಡುವೆ ಘಟನೆ ಖಂಡಿಸಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಸದಸ್ಯರು ಗ್ರಾಮದಲ್ಲಿ ಪ್ರತಿಭಟನೆ ನಡೆಸಿದರು.

ದೇವರ ಬದಲು ಅಂಬೇಡ್ಕರ್!: ಬಹಿಷ್ಕಾರ ಬೆದರಿಕೆ ನಂತರ ಬಾಲಕನ ತಾಯಿ ಮನೆಯಲ್ಲಿ ವೆಂಕಟೇಶ್ವರ ದೇವರ ಫೋಟೊ ತೆಗೆದು ಅಂಬೇಡ್ಕರ್ ಫೋಟೊ ಇಟ್ಟಿದ್ದಾರೆ.

'ನಾವು ಮುಟ್ಟಿದರೆ ಮೈಲಿಗೆ ಆಗುವುದಾದರೆ ಆ ದೇವರ ಫೋಟೊವೇ ಬೇಡ' ಎಂದು ಬಾಲಕನ ತಾಯಿ ನೊಂದು ನುಡಿದ್ದಾರೆ. 'ಬೇರೆ ಯಾವ ದೇವರೂ ಇಲ್ಲ. ಅಂಬೇಡ್ಕರ್ ಒಬ್ಬರೇ ದೇವರು. ಅವರು ಬರೆದ ಸಂವಿಧಾನದಿಂದ ಕುಟುಂಬಕ್ಕೆ ನ್ಯಾಯ ಸಿಕ್ಕಿದೆ' ಎಂದು ವಿವಿಧ ದಲಿತ ಸಂಘಟನೆಗಳ ಮುಖಂಡರು ಬಾಲಕನ ಕುಟುಂಬಕ್ಕೆ ತಿಳಿವಳಿಕೆ ನೀಡಿದರು.

'ಸಂತ್ರಸ್ತ ಪರಿಶಿಷ್ಟ ಬಾಲಕನ ಮನೆಯಲ್ಲಿ ಈಗ ವೆಂಕಟೇಶ್ವರ ಫೋಟೊ ಜಾಗದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಫೋಟೊ ರಾರಾಜಿಸುತ್ತಿದೆ' ಎಂದು ದಲಿತ ಸಂಘಟನೆಗಳ ಯುವಕರು ಹೇಳಿದ್ದಾರೆ.


ಮಾಲೂರು ತಾಲ್ಲೂಕಿನ ಉಳ್ಳೇರಹಳ್ಳಿಯಲ್ಲಿ ಪರಿಶಿಷ್ಟ ಜಾತಿಯ ಬಾಲಕನ ತಾಯಿ ಶೋಭಾ ಅವರಿಗೆ ಸಂಸದ ಮುನಿಸ್ವಾಮಿ, ಸಮಾಜ ಕಲ್ಯಾಣ ಇಲಾಖೆಯ ಆಯುಕ್ತ ರಾಕೇಶ್ ಕುಮಾರ್ ನಿವೇಶನದ ದಾಖಲೆ ಪತ್ರ ವಿತರಿಸಿದರು

ಸೆಪ್ಟೆಂಬರ್ 8ರಂದು ನಡೆದ ಘಟನೆ 20 ರಂದು ಹೊರಬಂದಿದೆ. ಈ ವಿಳಂಬಕ್ಕೆ ಎಲ್ಲರೂ ಹೊಣೆಗಾರರು. ಈ ಬಗ್ಗೆ ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು

ವೆಂಕಟ್ ರಾಜಾ, ಜಿಲ್ಲಾಧಿಕಾರಿ, ಕೋಲಾರ

ಬಾಲಕನ ಕುಟುಂಬದ ಪರಿಸ್ಥಿತಿ ಕಂಡು ಬೇಸರವಾಯಿತು. ತೀರಾ ಸಂಕಷ್ಟದ ಪರಿಸ್ಥಿತಿಯಲ್ಲಿದ್ದು, ಈ ಘಟನೆಯಿಂದ ಮಾನವೀಯ ಮೌಲ್ಯಗಳ ದಮನವಾಗಿದೆ.

ಡಿ. ದೇವರಾಜ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಕೋಲಾರ

ಲಂಚ ವಾಪಸ್ ಮಾಡುವಾಗ ಕೆಎಎಸ್ ಅಧಿಕಾರಿ ಬಂಧನ

ಬೆಂಗಳೂರು: ವ್ಯಕ್ತಿಯೊಬ್ಬರ ಜಮೀನು ಭೂಸ್ವಾಧೀನಗೊಂಡಿಲ್ಲ ಎಂದು ನಿರಾಕ್ಷೇಪಣಾ ಪತ್ರ ನೀಡಲು ₹ 2.5 ಲಕ್ಷ ಲಂಚ ಪಡೆದು, ಈ ಬಗ್ಗೆ ದೂರು ದಾಖಲಾದ ಬಳಿಕ ಲಂಚದ ಹಣವನ್ನು ಮರಳಿಸುತ್ತಿದ್ದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಭೂಮಾಪಕರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಕೆಐಎಡಿಬಿ ವಿಶೇಷ ಭೂಸ್ವಾಧೀನಾಧಿಕಾರಿ–2 ಹುದ್ದೆಯಲ್ಲಿದ್ದ ಕೆಎಎಸ್ ಅಧಿಕಾರಿ ಎ.ಬಿ. ವಿಜಯಕುಮಾರ್ ಮತ್ತು ಅವರ ಕಚೇರಿಯ ಭೂಮಾಪಕ ರಘುನಾಥ್ ಬಂಧಿತರು.

ಬೆಂಗಳೂರು ಉತ್ತರ ತಾಲ್ಲೂಕಿನ ಲಗ್ಗೆರೆ ಹೋಬಳಿಯಲ್ಲಿರುವ 30 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನಿರಾಕ್ಷೇಪಣಾ ಪತ್ರ ಕೋರಿ ವ್ಯಕ್ತಿಯೊಬ್ಬರು ಅರ್ಜಿ ಸಲ್ಲಿಸಿದ್ದರು. ₹ 2.5 ಲಕ್ಷ ಲಂಚ ಪಡೆದುಕೊಂಡು ಆರೋಪಿಗಳು ನಿರಾಕ್ಷೇಪಣಾ ಪತ್ರ ನೀಡಿದ್ದರು. ಈ ಕುರಿತು ಅರ್ಜಿದಾರರು ಕೆಐಎಡಿಬಿ ಉಪ ಆಯುಕ್ತರಿಗೆ ದೂರು ನೀಡಿದ್ದರು. ಹಿರಿಯ ಅಧಿಕಾರಿಗಳು ತನಿಖೆ ಆರಂಭಿಸುತ್ತಿದ್ದಂತೆ ದೂರುದಾರರನ್ನು ಸಂಪರ್ಕಿಸಿದ್ದ ಆರೋಪಿಗಳು, ದೂರನ್ನು ಹಿಂಪಡೆದರೆ ₹ 2.5 ಲಕ್ಷದೊಂದಿಗೆ ₹ 50,000 ಸೇರಿಸಿ ವಾಪಸ್ ನೀಡುವುದಾಗಿ ಆಮಿಷ ಒಡ್ಡಿದ್ದರು. ದೂರುದಾರರಿಗೆ ಹಣ ವಾಪಸ್ ನೀಡುತ್ತಿದ್ದಾಗ ಇಬ್ಬರನ್ನೂ ಬಂಧಿಸಲಾಗಿದೆ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಪಿಎಸ್‌ಐ ಅಕ್ರಮ: ಇ.ಡಿ ತನಿಖೆಗೆ ಕೋರ್ಟ್ ಅನುಮತಿ


ಬೆಂಗಳೂರು: ರಾಜ್ಯದಲ್ಲಿ ನಡೆದಿದ್ದ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಮತ್ತೊಂದು ತಿರುವು ಪಡೆದುಕೊಂಡಿದ್ದು, ಇ.ಡಿ (ಜಾರಿ ನಿರ್ದೇಶನಾಲಯ) ತನಿಖೆಗೆ 1ನೇ ಎಸಿಎಂಎಂ ನ್ಯಾಯಾಲಯವು ಅನುಮತಿ ನೀಡಿದೆ.

ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಜಪ್ತಿ ಮಾಡಿರುವ ಹಣದ ಮೂಲ ಪತ್ತೆಹಚ್ಚಲು ಇ.ಡಿ ಮುಂದಾಗಿದೆ. ಇ.ಡಿಯ ಬೆಂಗಳೂರು ಘಟಕವು ಬಂಧಿತ ಆರೋಪಿಗಳ ವಿರುದ್ಧ ಹಣ ಅಕ್ರಮ ವರ್ಗಾವಣೆ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಕೈಗೆತ್ತಿಕೊಂಡಿದೆ.

'ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು ಕೋಟ್ಯಂತರ ರೂಪಾಯಿ ಹಣ ವರ್ಗಾವಣೆಗೊಂಡಿದ್ದನ್ನು ಪತ್ತೆಹಚ್ಚಿ ಹಣ ಜಪ್ತಿ ಮಾಡಿಕೊಂಡಿದ್ದರು. ಹಣದ ಮೂಲ ಪತ್ತೆ ಹಚ್ಚಲು ಈಚೆಗೆ ಸಿಐಡಿ ಅಧಿಕಾರಿಗಳು ಇ.ಡಿಗೆ ಪತ್ರ ಬರೆದಿದ್ದರು. ಅದರಂತೆ ತನಿಖೆಗೆ ಜಾರಿ ನಿರ್ದೇಶನಾಲಯವು ನ್ಯಾಯಾಲಯದ ಅನುಮತಿ ಪಡೆದುಕೊಂಡಿದೆ. ಐಪಿಎಸ್ ಅಧಿಕಾರಿ, ನೇಮಕಾತಿ ವಿಭಾಗದ ಸಿಬ್ಬಂದಿ, ಮಧ್ಯವರ್ತಿಗಳನ್ನು ಇ.ಡಿ ಅಧಿಕಾರಿಗಳು ವಿಚಾರಣೆ ನಡೆಸಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ನಿಧನ ವಾರ್ತೆ

ಐ.ಎ.ಪ್ರಸನ್ನ



ಮಂಗಳೂರು: ಪ್ರಗತಿಪರ ಚಿಂತಕರ ವೇದಿಕೆ ಅಧ್ಯಕ್ಷ, ಮೆಸ್ಕಾಂ ನಿವೃತ್ತ ಅಧಿಕಾರಿ ಐ.ಎ.ಪ್ರಸನ್ನ (80) ಅಲ್ಪಕಾಲದ ಅಸೌಖ್ಯದಿಂದ ಬುಧವಾರ ನಿಧನರಾದರು.

ಎಳೆಯ ವಯಸ್ಸಿನಲ್ಲೇ ಎಡ ಪಂಥೀಯ ಚಿಂತನೆಯಿಂದ ಪ್ರಭಾವಿತರಾಗಿದ್ದ ಅವರು, ವಿದ್ಯಾರ್ಥಿ ಸಂಘಟನೆಯಲ್ಲಿ ಸಕ್ರಿಯರಾಗಿದ್ದರು.

ಇಂದು ಸಚಿವರೊಬ್ಬರ ಅಕ್ರಮ ಬಯಲು: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ರಾಜ್ಯದ ಸಚಿವರೊಬ್ಬರು ನಿಯಮ ಉಲ್ಲಂಘಿಸಿ, ಅಧಿಕಾರ ದುರುಪಯೋಗ ಮಾಡಿಕೊಂಡಿದ್ದನ್ನು ಗುರುವಾರ (ಸೆ 22) ದಾಖಲೆಗಳ ಸಮೇತ ಬಯಲಿಗೆ ಎಳೆಯುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಬುಧವಾರ ಮಾಧ್ಯಮದವರ ಜೊತೆಗೆ ಮಾತನಾಡಿದ ಅವರು, 'ಅಕ್ರಮ ಎಸಗಿದ್ದ ದಾಖಲೆಗಳನ್ನು ಸದನದಲ್ಲಿಯೇ ಬಿಡುಗಡೆ ಮಾಡುತ್ತೇನೆ. ಗುರುವಾರದವರೆಗೂ ಕಾಯಿರಿ. ಯಾವ ಸಚಿವರು, ಅವರ ಹೆಸರು ಏನು ಎಂಬುದು ಸದನದಲ್ಲಿ ಬಹಿರಂಗವಾಗಲಿದೆ' ಎಂದರು.

'ನಾನು ಗಾಳಿಯಲ್ಲಿ ಗುಂಡು ಹಾರಿಸುವ ಕೆಲಸ ಮಾಡುವುದಿಲ್ಲ. ಹಿಟ್ ಅಂಡ್ ರನ್ ಅಲ್ಲ' ಎಂದು ಹೇಳಿದರು.

2014–2015ನೇ ಸಾಲಿನ ಶಿಕ್ಷಕರ ಅಕ್ರಮ ನೇಮಕಾತಿ ಹಗರಣ: ಬಂಧಿತರ ಸಂಖ್ಯೆ 14ಕ್ಕೆ ಏರಿಕೆ

ಇಬ್ಬರು ಶಿಕ್ಷಕಿಯರ ಬಂಧನ, ಮೂವರು ಸಿಐಡಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ವಿಜಯಪುರ: '2014–2015ನೇ ಸಾಲಿನ ಶಿಕ್ಷಕರ ನೇಮಕಾತಿಯ ಅಕ್ರಮದ ತನಿಖೆ ನಡೆಸುತ್ತಿರುವ ಸಿಐಡಿ ತಂಡವು ಮತ್ತೆ ಇಬ್ಬರು ಶಿಕ್ಷಕಿಯರನ್ನು ಬಂಧಿಸಿದ್ದು, ಮೂವರು ಶಿಕ್ಷಕರನ್ನು ವಿಚಾರಣೆ ಸಲುವಾಗಿ ವಶಕ್ಕೆ ಪಡೆದಿದೆ.

ಯಾಸ್ಮಿನ್ (38) ಹಾಗೂ ಬಿ.ಸಿ. ಚೈತ್ರಾ ಬಂಧಿತರು. ಇದರಿಂದ ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ. ಯಾಸ್ಮಿನ್ ಚಿತ್ರದುರ್ಗದಲ್ಲಿ ಇಂಗ್ಲಿಷ್ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ಚೈತ್ರಾ, ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಇಂಗ್ಲಿಷ್ ಶಿಕ್ಷಕಿ.

'ಈ ಇಬ್ಬರು ಶಿಕ್ಷಕಿಯರು ಪ್ರಸಾದ್ ಎಂಬ ಮಧ್ಯವರ್ತಿಗೆ ₹ 5 ಲಕ್ಷ ನೀಡಿ ಶಿಕ್ಷಕ ಹುದ್ದೆ ಗಿಟ್ಟಿಸಿಕೊಂಡಿದ್ದರು ಎಂಬುದು ಸಿಐಡಿ ತನಿಖೆಯಿಂದ ಗೊತ್ತಾಗಿತ್ತು. ಮಂಗಳವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಮೂವರು ವಶಕ್ಕೆ: ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಜಯಪುರ ಜಿಲ್ಲೆಯ ಮೂವರು ಶಿಕ್ಷಕರನ್ನು ಸಿಐಡಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಬಸವನಬಾಗೇವಾಡಿ ತಾಲ್ಲೂಕಿನ ಭೈರವಾಡಗಿ ಸರ್ಕಾರಿ ಪ್ರೌಢ ಶಾಲೆಯ ವಿಜ್ಞಾನ ಶಿಕ್ಷಕ ಅಶೋಕ ಚವ್ಹಾಣ, ಚಡಚಣ ತಾಲ್ಲೂಕಿನ ಹತ್ತಳ್ಳಿ ಸರ್ಕಾರಿ ಪ್ರೌಢಶಾಲೆಯ ಇಂಗ್ಲಿಷ್ ಶಿಕ್ಷಕ ಮಹೇಶ ಸೂಸಲಾದಿ ಹಾಗೂ ಕಪನಿಂಬರಗಿ ಸರ್ಕಾರಿ ಪ್ರೌಢ ಶಾಲೆಯ ಸಮಾಜ ವಿಜ್ಞಾನ ಶಿಕ್ಷಕ ಸಿದ್ರಾಮಪ್ಪ ಬಿರಾದಾರ ಅವರನ್ನು ಸಿಐಡಿ ಅಧಿಕಾರಿಗಳು ವಶಕ್ಕೆ ಪಡೆದು, ವಿಚಾರಣೆಗಾಗಿ ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದಾರೆ.

ಶಿಕ್ಷಕ ಅಶೋಕ ಚವ್ಹಾಣ ಅವರು 2014–15ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಶಿಕ್ಷಕರಾಗಿ ಆಯ್ಕೆಯಾಗಿದ್ದರು. ಬಳಿಕ ಕೌನ್ಸೆಲಿಂಗ್‌ನಲ್ಲಿ ವಿಜಯಪುರ ಜಿಲ್ಲೆಗೆ ವರ್ಗಾವಣೆಯಾಗಿ ಬಂದಿದ್ದರು.

ಶಿಕ್ಷಕ ಮಹೇಶ 2014–15ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಶಿಕ್ಷಕರಾಗಿ ನೇಮಕವಾಗಿದ್ದು, ಅವರು ಸಹ ಜಿಲ್ಲೆಗೆ ವರ್ಗಾವಣೆಯಾಗಿ ಬಂದಿದ್ದರು. ಸಿದ್ರಾಮಪ್ಪ ಬಿರಾದಾರ ಅವರು 2012ರಲ್ಲಿ ಕೋಲಾರದಲ್ಲಿ ಶಿಕ್ಷಕರಾಗಿ ಆಯ್ಕೆಯಾಗಿದ್ದರು. ಬಳಿಕ ಅವರೂ ಸಹ ಜಿಲ್ಲೆಗೆ ವರ್ಗಾವಣೆಯಾಗಿ ಬಂದಿದ್ದರು.

'ಸಿಐಡಿ ವಶಕ್ಕೆ ಪಡೆದಿರುವ ವಿಷಯ ತಿಳಿದಿದೆ. ಆದರೆ, ಎಫ್‌ಐಆರ್ ದಾಖಲಿಸಿರುವ ಪ್ರತಿ ಇನ್ನೂ ನನ್ನ ಕೈಸೇರಿಲ್ಲ. ಎಫ್‌ಐಆರ್ ಪ್ರತಿ ಲಭಿಸಿದ ತಕ್ಷಣ ಮೂವರು ಶಿಕ್ಷಕರನ್ನು ಕರ್ತವ್ಯದಿಂದ ಅಮಾನತುಗೊಳಿಸಲಾಗುವುದು' ಎಂದು ವಿಜಯಪುರ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಉಮೇಶ ಶಿರಹಟ್ಟಿಮಠ 'ಪ್ರಜಾವಾಣಿ'ಗೆ ತಿಳಿಸಿದರು.

ಸ್ಪರ್ಧಾ ವಾಣಿ



ಡಿಆರ್/ಸಿಎಆರ್ ನೇಮಕಾತಿ

ಅರ್ಜಿ ಹಾಕಿ, ಪರೀಕ್ಷೆಗೆ ಸಿದ್ಧರಾಗಿ

ಮಂಜುನಾಥ್ ಭದ್ರಶೆಟ್ಟಿ

ಬಹಳ ಕಾಲದ ನಂತರ ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ 3,484 ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಕಾನ್‌ಸ್ಟೆಬಲ್ (ಡಿಆರ್) ಹಾಗೂ ನಗರ ಸಶಸ್ತ್ರ ಮೀಸಲು ಪೊಲೀಸ್ (ಸಿಎಆರ್) ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪೊಲೀಸ್ ಇಲಾಖೆ ಸೇರಬೇಕು ಎಂಬ ಕನಸನ್ನು ಹೊತ್ತಿರುವ ಯುವಕರಿಗೆ ಹೊಸ ಸದಾವಕಾಶವೊಂದು ಒದಗಿ ಬಂದಿದೆ.

ಡಿಆರ್ ಹಾಗೂ ಸಿಎಆರ್ ಪೊಲೀಸ್ ಕಾನ್‌ಸ್ಟೆಬಲ್‌ಗಳ ನೇಮಕಾತಿ ಬಗ್ಗೆ ರಾಜ್ಯ ಸರ್ಕಾರ ಸೆ.12 ರಂದು ಅಧಿಸೂಚನೆ ಹೊರಡಿಸಿದೆ. ಕಲ್ಯಾಣ ಕರ್ನಾಟಕ (ಹೈ-ಕ ವಿಭಾಗ) ವಿಭಾಗದ ಹುದ್ದೆಗಳ ನೇಮಕಾತಿಗೂ ಪ್ರತ್ಯೇಕ ಅಧಿಸೂಚನೆ ಹೊರಡಿಸಲಾಗಿದೆ.

ಹುದ್ದೆಗಳ ವಿಂಗಡಣೆ

ರಾಜ್ಯದ ಎಲ್ಲ ಜಿಲ್ಲೆ ಹಾಗೂ ಕಮಿಷನರೇಟ್ ವ್ಯಾಪ್ತಿಯಲ್ಲಿ 2,996 ಡಿಆರ್ ಹಾಗೂ ಸಿಎಆರ್ ಹುದ್ದೆಗಳಿವೆ. ಇದರೊಂದಿಗೆ ತೃತೀಯ ಲಿಂಗಿಗಳಿಗೂ(ಪುರುಷ) ಹೆಚ್ಚುವರಿಯಾಗಿ 68 ಹುದ್ದೆಗಳಿವೆ. ಕಲ್ಯಾಣ ಕರ್ನಾಟಕ ವೃಂದದಲ್ಲಿ 420 ಹುದ್ದೆಗಳನ್ನು ನಿಗದಿಪಡಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆ ದಿನ ಅಕ್ಟೋಬರ್ 31. ಅರ್ಜಿಯನ್ನು ಇಲಾಖೆಯ ಅಧಿಕೃತ ಜಾಲತಾಣದ (www.ksp-recruitment.in) ಮೂಲಕ ಮಾತ್ರ ಅರ್ಜಿ ಸಲ್ಲಿಸಬೇಕು. ನವೆಂಬರ್ 3ರವರೆಗೆ ಶುಲ್ಕ ಪಾವತಿಗೆ ಅವಕಾಶವಿದೆ.

ಶುಲ್ಕ ವಿವರ

ಸಾಮಾನ್ಯ, 2ಎ, 2ಬಿ, 3ಬಿ, 3ಎ ಅಭ್ಯರ್ಥಿಗಳು ₹400 , ಎಸ್‌ಸಿ, ಎಸ್‌ಟಿ ಹಾಗೂ ಪ್ರವರ್ಗ 1 ಅಭ್ಯರ್ಥಿ ಗಳು ₹200 ಶುಲ್ಕ ಪಾವತಿಸಬೇಕು.

ಶುಲ್ಕವನ್ನು ಆನ್‌ಲೈನ್ ಮೂಲಕವೂ ಪಾವತಿಸಬ ಹುದು. ನಗದು ರೂಪದಲ್ಲಿ ಬ್ಯಾಂಕ್ ಮೂಲಕವೂ ಪಾವತಿಸಬಹುದು. ಶುಲ್ಕ ಪಾವತಿ ವೇಳೆ ತೊಂದರೆಯಾದರೆ ಸಹಾಯವಾಣಿ 080-22943346 ಸಂಪರ್ಕಿಸಬಹುದು.

ವಿದ್ಯಾರ್ಹತೆ, ವಯೋಮಿತಿ

ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆ ಉತ್ತೀರ್ಣರಾಗಿರುವವರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು.

ಅಭ್ಯರ್ಥಿಗಳ ವಯೋಮಿತಿ ಕನಿಷ್ಠ 18 ವರ್ಷ ಗರಿಷ್ಠ 25 ವರ್ಷಗಳು (ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ). ಎಸ್.ಸಿ, ಎಸ್.ಟಿ, ಒಬಿಸಿ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ 27 ವರ್ಷ.

ಆಯ್ಕೆ ವಿಧಾನ ಹೇಗೆ?

ಲಿಖಿತ ಪರೀಕ್ಷೆ, ದೇಹದಾರ್ಢ್ಯತೆ ಮತ್ತು ಸಹಿಷ್ಣುತೆ ಪರೀಕ್ಷೆಗಳ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಲಿಖಿತ ಪರೀಕ್ಷೆಯ ದಿನಾಂಕವನ್ನು ಪ್ರಕಟಿಸಲಿದೆ. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಪ್ರವೇಶ ಪತ್ರ ಪಡೆದುಕೊಂಡು ಲಿಖಿತ ಪರೀಕ್ಷೆಗೆ ಹಾಜರಾಗಬೇಕು. ಇದೇ ವರ್ಷದ ನವೆಂಬರ್/ ಡಿಸೆಂಬರ್ ವೇಳೆಗೆ ಲಿಖಿತ ಪರೀಕ್ಷೆ ನಡೆಯುವ ಸಾಧ್ಯತೆ ಇದೆ.

ಪರೀಕ್ಷಾ ಪಠ್ಯಕ್ರಮ

ಸಿಎಆರ್/ಡಿಆರ್ ಹುದ್ದೆಗಳಿಗೆ ಸಂಬಂಧಿಸಿದಂತೆ 100 ಅಂಕಗಳಿಗೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಬಹು ಆಯ್ಕೆ ಮಾದರಿಯ (ಆಬ್ಜೆಕ್ಟಿವ್) ಪ್ರಶ್ನೆ ಪತ್ರಿಕೆ ಇರುತ್ತದೆ. ಇದು ಒಂದೂವರೆ ಗಂಟೆ ಅವಧಿಯ ಪರೀಕ್ಷೆ.

ಪರೀಕ್ಷೆಯಲ್ಲಿ ಸಾಮಾನ್ಯ ಜ್ಞಾನ, ವಿಜ್ಞಾನ, ಭೂಗೋಳ, ಇತಿಹಾಸ, ಭಾರತದ ಸಂವಿಧಾನ, ಭಾರತದ ಸ್ವಾತಂತ್ರ್ಯ ಸಂಗ್ರಾಮ, ಸಾಮಾನ್ಯ ಮಾನಸಿಕ ಸಾಮರ್ಥ್ಯ ಹಾಗೂ ನೀತಿ ಶಿಕ್ಷಣ ಮತ್ತು ಪ್ರಚಲಿತ ವಿದ್ಯಮಾನಗಳ ಬಗ್ಗೆ ಪ್ರಶ್ನೆಗಳಿರುತ್ತವೆ.

ಸರಿ ಉತ್ತರಕ್ಕೆ 1 ಅಂಕ ನೀಡಲಾಗುತ್ತದೆ. 4 ತಪ್ಪು ಉತ್ತರಗಳಿಗೆ 1 ಅಂಕ ಕಳೆಯಲಾಗುತ್ತದೆ (1ಕ್ಕೆ 0.25 ಅಂಕ). ಹಾಗಾಗಿ ಅಭ್ಯರ್ಥಿಗಳು ಸರಿಯಾದ ಉತ್ತರವನ್ನೇ ಗುರುತಿಸಲು ಪ್ರಯತ್ನಿಸಬೇಕು. ಒ.ಎಂ.ಆರ್ ಶೀಟ್ ನಲ್ಲಿ ಅಭ್ಯರ್ಥಿಗಳು ಉತ್ತರಿಸಬೇಕು.

ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು 1:5ರ ಅನುಪಾತದಲ್ಲಿ ದೇಹದಾರ್ಢ್ಯ ಪರೀಕ್ಷೆಗೆ ಕರೆಯಲಾಗುತ್ತದೆ. ಅದರಲ್ಲಿ ಉತ್ತೀರ್ಣಗೊಂಡವರಿಗೆ ವೈದ್ಯಕೀಯ ಪರೀಕ್ಷೆ. ನಂತರ ಮೆರಿಟ್ ಆಧಾರ ಹಾಗೂ ಮೀಸಲಾತಿ ಅನುಗುಣವಾಗಿ ಆಯ್ಕೆ ಪಟ್ಟಿ ಪ್ರಕಟವಾಗುತ್ತದೆ.

ವೇತನ ಶ್ರೇಣಿ

ಅಧಿಸೂಚನೆಯಲ್ಲಿ ಉಲ್ಲೇಖಿಸಿದಂತೆ ವೇತನ ಶ್ರೇಣಿ ₹23,500 ರಿಂದ ₹47,650ವರೆಗಿರುತ್ತದೆ. ನೇರ ನೇಮಕಾತಿ ಮೂಲಕ ಆಯ್ಕೆಯಾಗುವ ಅಭ್ಯರ್ಥಿಗಳು ಎರಡೂವರೆ ವರ್ಷ ಕಾಯಂ ಪೂರ್ವ ತರಬೇತಿ ಅವಧಿಯಲ್ಲಿರುತ್ತಾರೆ.

ಯಾವ ಜಿಲ್ಲೆಗೆ ಹಾಗೂ ಕಮಿಷನರೇಟ್‌ಗೆ ಎಷ್ಟು ಡಿಆರ್ ಹಾಗೂ ಸಿಎಆರ್ ಹುದ್ದೆಗಳು ಮೀಸಲಿವೆ, ಕಲ್ಯಾಣ ಕರ್ನಾಟಕ ವೃಂದಕ್ಕೆ ಹಂಚಿಕೆ ಆಗಿರುವ ಹುದ್ದೆಗಳು ಮತ್ತು ಇನ್ನಿತರ ಹೆಚ್ಚಿನ ಮಾಹಿತಿಗಳಿಗೆ ಆಸಕ್ತರು ಪೊಲೀಸ್ ಇಲಾಖೆಯ ಅಧಿಕೃತ ವೆಬ್‌ಸೈಟ್ https://recruitment.ksp.gov.in ನೋಡಬಹುದು.

ಪ್ರಮಾಣ ಪತ್ರ ಸಲ್ಲಿಕೆ

ಮೀಸಲಾತಿ ಬಯಸಿ ಅರ್ಜಿ ಸಲ್ಲಿಸುವವರು ಆಯಾ ವರ್ಗದ ನಮೂನೆಯಲ್ಲೇ ಮೀಸಲಾತಿ ಪ್ರಮಾಣಪತ್ರಗಳನ್ನು ಪಡೆಯಬೇಕು. ಪ್ರಮಾಣಪತ್ರಗಳನ್ನು ಇಲಾಖೆ ನೀಡಿರುವ ನಮೂನೆಯಲ್ಲೇ ಪಡೆದು ಇಟ್ಟುಕೊಳ್ಳಬೇಕು. ನೇಮಕಾತಿ ಹಂತದಲ್ಲಿ ಸಕ್ಷಮ ಪ್ರಾಧಿಕಾರ ಕೇಳಿದರೆ ಕೊಡಬೇಕು.

ದೇಹದಾರ್ಢ್ಯತೆ ಪರೀಕ್ಷೆ

ಎತ್ತರ 168 ಸೆಂ.ಮೀ, ಎದೆಯ ಸುತ್ತಳತೆ 86 ಸೆಂ.ಮೀ (ಬುಡಕಟ್ಟು ಅಭ್ಯರ್ಥಿಗಳಿಗೆ ಎತ್ತರದಲ್ಲಿ ಹಾಗೂ ಎದೆಯ ಸುತ್ತಳತೆಯಲ್ಲಿ ರಿಯಾಯಿತಿ ಇದೆ).

ಸಹಿಷ್ಣುತೆ ಪರೀಕ್ಷೆ

ಓಟ 1600 ಮೀಟರ್ (ಆರೂವರೆ ನಿಮಿಷದಲ್ಲಿ). ಎತ್ತರ ಜಿಗಿತ 1.20 ಮೀಟರ್‌ಗೆ ಕಡಿಮೆ ಇರದಂತೆ, ಉದ್ದ ಜಿಗಿತ 3.20 ಮೀಟರ್‌ಗೆ ಕಡಿಮೆ ಇಲ್ಲದಂತೆ (ಎರಡರಲ್ಲಿ ಒಂದು). ಗುಂಡು ಎಸೆತ 5.26 ಕೆ.ಜಿ.

ಮಾದರಿ ಪ್ರಶ್ನೋತ್ತರ

ದ್ವಾರಸಮುದ್ರದ ಹೊಯ್ಸಳರು

ಕೆಪಿಎಸ್‌ಸಿ, ಯುಪಿಎಸ್‌ಸಿ ಸೇರಿದಂತೆ ಮುಂದೆ ನಡೆಯಲಿರುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳು ಇಲ್ಲಿವೆ.

ಸಾಮಾನ್ಯ ಜ್ಞಾನ

1. ಈ ಕೆಳಗಿನ ಕನ್ನಡದ ಆರಂಭಿಕ ಕವಿಗಳಲ್ಲಿ ಅಭಿನವ ಪಂಪ ಎಂದು ಪ್ರಸಿದ್ಧನಾದವನು ಯಾರು ?

ಎ. ಪೊನ್ನ ಬಿ. ನಾಗಚಂದ್ರ
ಸಿ. ಹರಿಹರ ಡಿ. ಕುಮಾರವ್ಯಾಸ

ಉತ್ತರ. ಬಿ

2. ಹೊಯ್ಸಳರ ಕಾಲದ ಸಾಹಿತ್ಯಕ ಬೆಳವಣಿಗೆಗಳ ಬಗೆಗಿನ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ನಾಗಚಂದ್ರನು ಮಲ್ಲಿನಾಥಪುರಾಣ ಮತ್ತು ರಾಮಚಂದ್ರಚರಿತ ಪುರಾಣ ಎಂಬ ಕಾವ್ಯಗಳು ರಚಿಸಿದ್ದಾನೆ.

ಬಿ. ನೇಮಿಚಂದ್ರ ಕವಿಯು ಲೀಲಾವತಿ ಮತ್ತು ನೇಮಿನಾಥ ಎಂಬ ಗ್ರಂಥಗಳನ್ನು ರಚಿಸಿದ್ದಾನೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ. 4

3. ಹೊಯ್ಸಳರ ಕಾಲದ ಸಾಹಿತ್ಯಕ ಬೆಳವಣಿಗೆಗಳ ಬಗೆಗಿನ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ರಾಘವಾಂಕನು ಹರಿಶ್ಚಂದ್ರ ಕಾವ್ಯ, ಸೋಮನಾಥ ಚರಿತ್ರೆ, ವೀರೇಶ ಚರಿತೆ ಮುಂತಾದ ಕೃತಿಗಳನ್ನು ಬರೆದಿದ್ದಾನೆ.

ಬಿ. ಈತನು ರಗಳೆಗಳ ಕವಿ ಎಂದು ಹೆಸರಾದ ಹರಿಹರನ ಸೋದರಳಿಯನಾಗಿದ್ದನು.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ. 4

4. ಹೊಯ್ಸಳರ ಕಾಲದ ಸಾಹಿತ್ಯಕ ಬೆಳವಣಿಗೆಗಳ ಬಗೆಗಿನ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ಕೇಶಿರಾಜನು ಶಬ್ದಮಣಿದರ್ಪಣ ಕೃತಿಯನ್ನು ರಚಿಸಿದ್ದಾನೆ.

ಬಿ. ಮಲ್ಲಿಕಾರ್ಜುನನು ಸೂಕ್ತಿ ಸುಧಾರ್ಣವ ಎಂಬ ಕೃತಿಯನ್ನು ರಚಿಸಿದ್ದಾನೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ. 4

5. ತಮಿಳುನಾಡಿನಲ್ಲಿ ಚೋಳರಿಂದ ಪ್ರಾಣಾಪಾಯಕ್ಕೆ ಗುರಿಯಾದ ರಾಮಾನುಜಾಚಾರ್ಯರಿಗೆ ಆಶ್ರಯವನ್ನು ನೀಡಿದ ಕನ್ನಡದ ದೊರೆಗಳು ಯಾರು ?

ಎ. ದ್ವಾರಸಮುದ್ರದ ಹೊಯ್ಸಳರು
ಬಿ. ರಾಷ್ಟ್ರಕೂಟರು
ಸಿ. ಕಲ್ಯಾಣದ ಕಲಚೂರಿಗಳು
ಡಿ. ವಿಜಯನಗರದ ಅರಸರು

ಉತ್ತರ. ಎ

7. ಹೊಯ್ಸಳರ ಕಾಲದ ಬಗ್ಗೆಗಿನ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ರಾಣಿ ಶಾಂತಲೆ ನಾಟ್ಯಸರಸ್ವತಿ ಎಂದು ಹೆಸರುಪಡೆದಿದ್ದಳು.

ಬಿ. ರಾಣಿಯು ವೈಷ್ಣವಳಾಗಿದ್ದು ರಾಜವಿಷ್ಣುವರ್ಧನ ಜೈನನಾಗಿದ್ದ ವ್ಯವಸ್ಥೆಯು ಧಾರ್ಮಿಕ ಸಹಿಷ್ಣುತೆಯ ಪರಮೋಚ್ಛ ಉದಾಹರಣೆಯಾಗಿತ್ತು.

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ. 1

8. ಈ ಕೆಳಗಿನ ಯಾವುವು ಜೈನ ಧರ್ಮದ ಪಂಥಗಳಾಗಿವೆ ?

ಎ. ಶ್ವೇತಾಂಬರ, ದಿಗಂಬರ ಮತ್ತು ಯಾಪನೀಯ

ಬಿ. ಶ್ವೇತಾಂಬರ, ದಿಗಂಬರ ಮತ್ತು ಕಾಪಾಲಿಕ

ಉತ್ತರ. ಎ

9. ಹೊಯ್ಸಳರ ಕಾಲದಲ್ಲಿ ಈ ಕೆಳಗಿನ ಯಾವುದೆಲ್ಲಾ ಆತ್ಮ ಬಲಿಗಳ ಪ್ರಕಾರಗಳು ಶಾಸನಗಳಲ್ಲಿ ಉಲ್ಲೇಖವಾಗಿದೆ ?

ಎ.ಲೆಂಕರು ಬಿ. ಗರುಡರು
ಸಿ. ತುಳಿಲಾಲ್ ಡಿ. ವೇಳೆವಾಳಿ
ಇ. ಜೋಳವಾಳಿ

1. ಎ ಬಿ ಮತ್ತು ಸಿ. 2. ಬಿ ಡಿ ಮತ್ತು ಇ
3. ಡಿ ಮತ್ತು ಇ 4. ಮೇಲಿನ ಎಲ್ಲವೂ

ಉತ್ತರ. 4

10. ಹೊಯ್ಸಳರ ಕಾಲದ ಕೃಷಿ ವ್ಯವಸ್ಥೆಯ ಬಗ್ಗೆಗಿನ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ಹೊಯ್ಸಳರ ಕಾಲದ ಕೃಷಿ ಭೂಮಿಯನ್ನು ಸಾಮಾನ್ಯವಾಗಿ ದೇವ ಮಾತ್ರಕ ಮತ್ತು ನದಿ ಮಾತ್ರಕ ಎಂದು ಎರಡು ಭಾಗಗಳಾಗಿ ವಿಂಗಡಿಸಿದ್ದರು.

ಬಿ. ಮಳೆ ನೀರನ್ನು ಆಶ್ರಯಿಸಿ ಬೆಳೆಯುವ ಜಮೀನುಗಳನ್ನು ನದಿ ಮಾತ್ರಕ ಎಂದೂ ಕೆರೆಬಾವಿಗಳನ್ನು ಆಶ್ರಯಿಸಿದ ಭೂಮಿಯನ್ನು ದೇವಮಾತ್ರಕ ಎಂದು ಕರೆಯಲಾಗುತ್ತಿತ್ತು .

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ .1

6. ಹೊಯ್ಸಳರ ದೇವಾಲಯಗಳಿಗೆ ಸಂಬಂಧಪಟ್ಟಂತೆ ಈ ಕೆಳಗಿನ ಜೋಡಿಗಳನ್ನು ಹೊಂದಿಸಿ

1. ದ್ವಿಕೂಟಾಚಲ	ಎ. ಬೇಲೂರಿನ ಕಪ್ಪೆ ಚೆನ್ನಿಗರಾಯ ದೇವಾಲಯ
2. ತ್ರಿಕೂಟಾಚಲ	ಬಿ. ಸೋಮನಾಥಪುರದ ಸೌಮ್ಯಕೇಶವ ದೇವಾಲಯ
3. ಚತುಷ್ಕೂಟಾಲಯ	ಸಿ . ದೊಡ್ಡಗದ್ದವಳಿಯ ಲಕ್ಷ್ಮಿ ದೇವಾಲಯ
4. ಪಂಚಕೂಟಾಲಯ	ಡಿ. ಗೋವಿಂದನಹಳ್ಳಿಯ ದೇವಾಲಯ

ಎ) 1-ಸಿ, 2-ಎ, 3-ಡಿ, 4-ಬಿ ಬಿ) 1-ಬಿ, 2-ಸಿ, 3-ಡಿ, 4-ಎ
ಸಿ) 1-ಎ, 2-ಬಿ, 3-ಸಿ, 4-ಡಿ ಡಿ) 1-ಡಿ 2-ಸಿ, 3-ಬಿ, 4-ಎ

ಉತ್ತರ : (ಸಿ)

ಬ್ಯಾಂಕಿಂಗ್ ನೇಮಕಾತಿ

ಹೊಸ ನಿಯಮಗಳು

ಎಸ್ ಬಿಐ – ಜೂನಿಯರ್ ಅಸೋಸಿಯೇಟ್ ನೇಮಕಾತಿ ಪ್ರಕ್ರಿಯೆಯಲ್ಲಿ ಹೊಸ ನಿಯಮಗಳನ್ನು ಪರಿಚಯಿಸಲಾಗಿದೆ. ಆ ನಿಯಮಗಳು ಹಾಗೂ ಆಯ್ಕೆ ಪ್ರಕ್ರಿಯೆ ಕುರಿತ ವಿವರಣೆ ಇಲ್ಲಿದೆ.

ಆರ್.ಕೆ.ಬಾಲಚಂದ್ರ

ಭಾರತೀಯ ಸ್ಟೇಟ್ ಬ್ಯಾಂಕ್(ಎಸ್‌ಬಿಐ) 5,008 ಜೂನಿಯರ್ ಅಸೋಸಿಯೇಟ್ ಹುದ್ದೆಗಳ ನೇಮಕಕ್ಕೆ ಅಧಿಸೂಚನೆ ಹೊರಡಿಸಿದೆ. ರಾಜ್ಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ವೃತ್ತದಲ್ಲಿ 316 ಹುದ್ದೆಗಳಿದ್ದು, ಇದರ ಜೊತೆಗೆ ಹೆಚ್ಚುವರಿಯಾಗಿ127 ಬ್ಯಾಕ್‌ಲಾಗ್ ಖಾಲಿ ಹುದ್ದೆಗಳಿವೆ. ಅರ್ಜಿ ಸಲ್ಲಿಕೆ ಹಾಗೂ ಆಯ್ಕೆಗೆ ಸಂಬಂಧಿಸಿದ ಕೆಲವು ಮಾಹಿತಿಗಳನ್ನು ಕಳೆದ ಸಂಚಿಕೆಯಲ್ಲಿ ತಿಳಿಸಲಾಗಿತ್ತು.

ಆಯ್ಕೆ ಪ್ರಕ್ರಿಯೆ

ಜೂನಿಯರ್ ಅಸೋಸಿಯೇಟ್ಸ್‌ಗೆ(ಕಸ್ಟಮರ್ ಸಪೋರ್ಟ್ ಮತ್ತು ಸೇಲ್ಸ್) ಸಂಬಂಧಿಸಿದಂತೆ ಎರಡು ಹಂತದ ಪರೀಕ್ಷೆಗಳಿರುತ್ತವೆ. ಆದರೆ ಸಂದರ್ಶನ ಇರುವುದಿಲ್ಲ. ಈ ಕಾರಣದಿಂದಾಗಿಯೇ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ ಪ್ರಾಮುಖ್ಯ ಪಡೆದುಕೊಂಡಿದ್ದು, ಅತ್ಯಂತ ಗಂಭೀರವಾಗಿ ಪರೀಕ್ಷೆ ಎದುರಿಸಬೇಕು. ಪೂರ್ವಭಾವಿ ಪರೀಕ್ಷೆ ನಿಮ್ಮನ್ನು ಮುಂದಿನ ಹಂತಕ್ಕೆ ಕರೆದೊಯ್ಯುವ ಮೆಟ್ಟಿಲಾದರೆ, ಮುಖ್ಯ ಪರೀಕ್ಷೆ ಕೆಲಸವನ್ನು ಕೊಡಿಸಲು ಸಹಕಾರಿಯಾಗುತ್ತದೆ.

ಹೊಸ ನಿಯಮಗಳೇನು?

- ಈ ಹಿಂದೆ ಎಸ್‌ಬಿಐನಲ್ಲಿ ಗುಮಾಸ್ತರಾಗಿ ಸೇವೆ ಸಲ್ಲಿಸಿ ರಾಜೀನಾಮೆ ನೀಡಿರುವ ಅಭ್ಯರ್ಥಿಗಳು ಈಗ ಪರೀಕ್ಷೆ ಬರೆಯಲು ಅವಕಾಶವಿಲ್ಲ.
- ಬ್ಯಾಂಕ್‌ಗಳು ಅಥವಾ ಎನ್‌ಬಿಎಫ್‌ಸಿಗಳಲ್ಲಿ ಸಾಲ ಮರುಪಾವತಿ ಮಾಡದೇ ಡೀಫಾಲ್ಟ್ ಆದ ಅಭ್ಯರ್ಥಿಗಳು ಆಯ್ಕೆಯಾದ ಪಕ್ಷದಲ್ಲಿ ಬ್ಯಾಂಕ್‌ಗೆ ಸೇರುವ ದಿನಾಂಕದಂದು ಅಥವಾ ಮೊದಲು ಸಾಲಪಡೆದ ಬ್ಯಾಂಕ್‌ನಿಂದ ಎನ್‌ಒಸಿ(ನಿರಪೇಕ್ಷಣಾ ಪತ್ರ) ಸಲ್ಲಿಸಬೇಕು ಅಥವಾ ಸಿಬಿಲ್(CIBIL) ವರದಿಯನ್ನು ನವೀಕರಿಸಬೇಕು. ಈ ನಿಯಮ ಪಾಲಿಸದೆ ಇದ್ದಲ್ಲಿ ಆಯ್ಕೆ ಪತ್ರವನ್ನು ಹಿಂಪಡೆಯಲಾಗುತ್ತದೆ/ ರದ್ದುಮಾಡಲಾಗುತ್ತದೆ.
- ಆನ್‌ಲೈನ್ ಅರ್ಜಿಯನ್ನು ನೋಂದಾಯಿಸಿದ ನಂತರ ಯಾವುದೇ ಅಭ್ಯರ್ಥಿಗಳ ವರ್ಗದ (ಕೆಟಗರಿ ಕುರಿತಂತೆ)ಬದಲಾವಣೆಯನ್ನು ನಂತರ ಅನುಮತಿಸಲಾಗುವುದಿಲ್ಲ.

ಕನಿಷ್ಠ ಅಂಕ ನಿಗದಿಪಡಿಸಿಲ್ಲ

- ಪೂರ್ವಭಾವಿ ಪರೀಕ್ಷೆಯ ಮೂರು ಪ್ರಶ್ನೆ ಪತ್ರಿಕೆಗಳಿಗೆ ಕನಿಷ್ಠ ಅರ್ಹತಾ ಅಂಕಗಳನ್ನು ನಿಗದಿಪಡಿಸಿಲ್ಲ. ಹಾಗೆಯೇ, ಒಟ್ಟು ಪಡೆಯುವ ಅಂಕಗಳಿಗೂ ಕನಿಷ್ಠ ಇಷ್ಟೇ ಅಂಕ ಪಡೆಯಬೇಕೆಂದನ್ನೂ ನಿಗದಿಪಡಿಸಿಲ್ಲ. ವಿಭಾಗವಾರು ಅಂಕಗಳನ್ನು ನಿರ್ವಹಿಸಲಾಗುವುದಿಲ್ಲ ಎಂಬುದನ್ನು ನೆನಪಿಡಿ.
- ಅಭ್ಯರ್ಥಿಗಳು ಗಳಿಸಿದ ಒಟ್ಟು ಅಂಕಗಳನ್ನು ಅವರೋಹಣ ಕ್ರಮದಲ್ಲಿ ಜೋಡಿಸಿ ಮುಖ್ಯ ಪರೀಕ್ಷೆಗೆ ಶಾರ್ಟ್‌ಲಿಸ್ಟ್ ಮಾಡಲಾಗುತ್ತದೆ. (ಸರಿಸುಮಾರು 1:10ರ ಅನುಪಾತದಲ್ಲಿ)
- ಅಭ್ಯರ್ಥಿಯು 10 ಅಥವಾ 12ನೇ ತರಗತಿಯವರೆಗೆ ಸ್ಥಳೀಯ ಭಾಷೆಯಲ್ಲಿ ಓದಿದ್ದರೆ ಭಾಷಾ ಪರೀಕ್ಷೆ ಬರೆಯಬೇಕಾಗಿಲ್ಲ. ಯಾರು ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿಯವರೆಗೆ ಕನ್ನಡದಲ್ಲಿ ಅಭ್ಯಾಸ ಮಾಡಿರುವುದಿಲ್ಲವೋ ಅಥವಾ ಕನ್ನಡವನ್ನು ಒಂದು ಭಾಷೆಯಾಗಿ ಕಲಿತಿರುವುದಿಲ್ಲವೋ ಅವರು ಭಾಷಾ ಪರೀಕ್ಷೆ ಬರೆದು ಅರ್ಹತೆ ಪಡೆಯಬೇಕು. ಒಂದು ವೇಳೆ ಭಾಷಾ ಪರೀಕ್ಷೆಯಲ್ಲಿ ವಿಫಲರಾದಲ್ಲಿ ಅವರು ನೇಮಕಕ್ಕೆ ಅನರ್ಹಗೊಳ್ಳುತ್ತಾರೆ.
- ಮುಖ್ಯ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಒಟ್ಟಾರೆಯಾಗಿ ಕನಿಷ್ಠ ಶೇಕಡಾವಾರು ಅಂಕಗಳನ್ನು ಗಳಿಸುವ ಅಗತ್ಯವಿದೆ ಎಂಬುದನ್ನು ಮರೆಯಬೇಡಿ. (ಎಸ್‌ಸಿ/ ಎಸ್‌ಟಿ/ಒಬಿಸಿ/ಅಂಗವಿಕಲರು/ಇಎಸ್‌ಎಂ/ ಡಿಇಎಸ್‌ಎಂ ಅಭ್ಯರ್ಥಿಗಳಿಗೆ ಅಂಕಗಳಲ್ಲಿ ಶೇ 5 ರಿಯಾಯಿತಿ).
- ಒಟ್ಟಾರೆಯಾಗಿ ಕನಿಷ್ಠ ಅರ್ಹತಾ ಅಂಕಗಳನ್ನು ಬ್ಯಾಂಕ್ ನಿರ್ಧರಿಸುತ್ತದೆ. ಪ್ರತಿ ವಿಷಯದ ಪರೀಕ್ಷೆಗೆ ಸಂಬಂಧಿಸಿದಂತೆ ಕನಿಷ್ಠ ಅರ್ಹತಾ ಅಂಕ ನಿಗದಿಪಡಿಸಿಲ್ಲ. ಮೆರಿಟ್ ಪಟ್ಟಿಯನ್ನು ರಾಜ್ಯವಾರು, ವರ್ಗವಾರು ತಯಾರಿಸಲಾಗುವುದು. ಮುಖ್ಯ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳನ್ನು ಅವರು ಗಳಿಸಿದ ಒಟ್ಟು ಅಂಕಗಳ ಆಧಾರದ ಮೇಲೆ ಆಯಾ ರಾಜ್ಯ ಮತ್ತು ವರ್ಗಗಳ ಆಧಾರದಲ್ಲಿ ಅವರೋಹಣ ಕ್ರಮದಲ್ಲಿ ಪ್ರಕಟಿಸಲಾಗುತ್ತದೆ. ಇದು ಅರ್ಹತಾ ಪರೀಕ್ಷೆಯ ನಿಯಮಕ್ಕೆ ಭಿನ್ನವಾಗಿದೆ ಎಂಬುದನ್ನು ಮರೆಯಬೇಡಿ.
- ಪ್ರತಿ ಮೂರು ತಿಂಗಳಿಗೊಮ್ಮೆ ಕಾಯುವಿಕೆ ಪಟ್ಟಿ ಪ್ರಕಟವಾಗಲಿದೆ. ಅಂತಿಮ ಫಲಿತಾಂಶ ಪ್ರಕಟವಾದ ದಿನಾಂಕದಿಂದ ಒಂದು ವರ್ಷಗಳ ಕಾಲ ಈ ಕಾಯುವಿಕೆ ಪಟ್ಟಿಯು ಮಾನ್ಯತೆ ಹೊಂದಿರುತ್ತದೆ.
- ಒಟ್ಟು ಹುದ್ದೆಗಳಲ್ಲಿ (ರಾಜ್ಯ-ವರ್ಗವಾರು) ಶೇ 50 ರಷ್ಟು ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಕಾಯುವಿಕೆ ಪಟ್ಟಿಯಲ್ಲಿ ಇಡಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳು ಕೆಲಸಕ್ಕೆ ಬಾರದಿದ್ದಲ್ಲಿ ಅಥವಾ ಸೇರಿ ನಂತರ ರಾಜೀನಾಮೆ ನೀಡಿದಲ್ಲಿ, ಕಾಯುವಿಕೆಯ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗುತ್ತದೆ.



ಎಸ್‌ಬಿಐ; ಜೂನಿಯರ್ ಅಸೋಸಿಯೇಟ್ ನೇಮಕಾತಿ

ಇದನ್ನೂ ಮುಖ್ಯವಾಗಿ ಗಮನಿಸಿ

- ಜೂನಿಯರ್ ಅಸೋಸಿಯೇಟ್ ಹುದ್ದೆ ಆಯ್ಕೆಯಾದವರಿಗೆ ಕನಿಷ್ಠ 6 ತಿಂಗಳ ಪ್ರೊಬೆಷನರಿ ಅವಧಿ ಇರುತ್ತದೆ.
- ನೇಮಕವಾದ ಅಭ್ಯರ್ಥಿಗಳನ್ನು ಅಂತರ್ ವೃತ್ತ ವರ್ಗಾವಣೆ ಅಥವಾ ಅಂತರ್ ರಾಜ್ಯ ವರ್ಗಾವಣೆ ಮಾಡಲಾಗುವುದಿಲ್ಲ ಎಂಬುದಾಗಿ ಎಸ್‌ಬಿಐ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.
- ಹೊಸದಾಗಿ ನೇಮಕಗೊಂಡವರು ಮಾರ್ಕೆಟಿಂಗ್‌ನಲ್ಲಿ ಕೌಶಲ ಹೊಂದಿರಬೇಕು ಮತ್ತು ಗ್ರಾಹಕರಿಗೆ ಕರೆಗಳನ್ನು ಮಾಡಲು ಮತ್ತು ಬ್ಯಾಂಕಿಂಗ್ ಸೇವೆಗಳು, ಸಲಹಾ ಸೇವೆಗಳು ಮತ್ತು ಬ್ಯಾಂಕ್ ಆವರಣದೊಳಗೆ ಮತ್ತು ಹೊರಗೆ ಉತ್ಪನ್ನಗಳನ್ನು ಮಾರಾಟ ಇತ್ಯಾದಿಗಳನ್ನು ಒದಗಿಸಬೇಕು.
- ಕೆಲವೊಮ್ಮೆ ಹೊರಾಂಗಣ ಪ್ರಯಾಣವನ್ನು ಒಳಗೊಂಡಿರಬಹುದು. ಬ್ಯಾಂಕಿನ ಅವಶ್ಯಕತೆಗೆ ಅನುಗುಣವಾಗಿ, ಕೆಲಸದ ಸಮಯ ಮತ್ತು ಪಾಳಿಯಲ್ಲಿ ಕೆಲಸ ಮಾಡಬೇಕಾಗಬಹುದು.

ಪರೀಕ್ಷಾ ಪ್ರಕ್ರಿಯೆ

- ರಾಜ್ಯದಲ್ಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಕನ್ನಡದಲ್ಲಿ ಸ್ಪಷ್ಟವಾಗಿ ಮಾತನಾಡಲು ಮತ್ತು ಬರೆಯಲು ತಿಳಿದಿರಬೇಕು.
- ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಸೆಪ್ಟೆಂಬರ್ 27, 2022 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ವಿವರಗಳಿಗಾಗಿ ವೆಬ್ ಲಿಂಕ್: https://bank.sbi/careers, https://www.sbi.co.in/careers
- ಮೊದಲ ಹಂತ: ಆನ್‌ಲೈನ್ ಪೂರ್ವಭಾವಿ ಪರೀಕ್ಷೆ – ನವೆಂಬರ್, 2022
- ಎರಡನೇ ಹಂತ: ಆನ್‌ಲೈನ್ ಮುಖ್ಯ ಪರೀಕ್ಷೆ – ಡಿಸೆಂಬರ್ 2022 / ಜನವರಿ, 2023 .ಇಂಗ್ಲಿಷ್ ಭಾಷೆ ಒಂದನ್ನು ಹೊರತುಪಡಿಸಿ ಮತ್ತೆಲ್ಲಾ ಪ್ರಶ್ನೆಗಳು ಕನ್ನಡ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಇರುತ್ತದೆ. ತಪ್ಪು ಉತ್ತರ ಗುರುತಿಸಿದಲ್ಲಿ, ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ಆಯಾ ವಿಷಯಕ್ಕೆ ಪ್ರತಿ ಪ್ರಶ್ನೆಗೆ ನಿಗದಿ ಪಡಿಸಿದ ಅಂಕದ 0.25 ಅಂಕವನ್ನು ಋಣಾತ್ಮಕ ಮೌಲ್ಯಮಾಪನದ ನಿಯಮದಂತೆ ಗಳಿಸಿದ ಅಂಕದಿಂದ ಕಳೆಯಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ:022-22820427

(ಲೇಖಕರು: ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತು ದಾರರು, ಹಾಗೂ ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

ಉದ್ಯೋಗ ವಾರ್ತೆ

'ಎಸ್‌ಎಸ್‌ಸಿ'ಯಲ್ಲಿ 20 ಸಾವಿರ ಹುದ್ದೆಗಳು

ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗ (ಸ್ಟಾಫ್ ಸಲೆಕ್ಷನ್ ಕಮಿಷನ್- ಎಸ್‌ಎಸ್‌ಸಿ) ಸಚಿವಾಲಯಗಳು/ ಇಲಾಖೆಗಳು/ ಕೇಂದ್ರ ಸರ್ಕಾರ ಸಾಂವಿಧಾನಿಕ ಮಾನ್ಯತೆ ಇರುವ ಸಂಸ್ಥೆಗಳು/ಪ್ರಾಧಿಕಾರಗಳು ಇತ್ಯಾದಿ ವಿಭಾಗಗಳಲ್ಲಿ ಖಾಲಿ ಇರುವ ಸುಮಾರು 20 ಸಾವಿರ ಗ್ರೂಪ್ ಬಿ ಮತ್ತು ಸಿ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಸ್ಪರ್ಧಾತ್ಮಕ ಪರೀಕ್ಷೆ (ಕಂಬೈನ್ಡ್ ಗ್ರಾಜುಯೇಟ್ ಲೆವಲ್ ಎಕ್ಸಾಮಿನೇಷನ್-2022) ಮೂಲಕ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ನೇಮಕ ಮಾಡುವುದಾಗಿ ಎಸ್‌ಎಸ್‌ಸಿ ಸೆ.17ರಂದು ಬಿಡುಗಡೆ ಮಾಡಿರುವ ಅಧಿಸೂಚನೆಯಲ್ಲಿ ತಿಳಿಸಿದೆ.

ಐದು ಹಂತಗಳಲ್ಲಿರುವ 35 ವಿವಿಧ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ. ಇಲಾಖೆಯ ಅಧಿಕೃತ ಜಾಲತಾಣದ ಮೂಲಕವೇ (ಆನ್‌ಲೈನ್ ಮೂಲಕ) ಅರ್ಜಿ ಸಲ್ಲಿಸಬೇಕು. ಈಗಾಗಲೇ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ಅಕ್ಟೋಬರ್ 8, 2022 ಅರ್ಜಿ ಸಲ್ಲಿಸಲು ಕೊನೆ ದಿನವಾಗಿದೆ.

ವಿದ್ಯಾರ್ಹತೆ: ಅಭ್ಯರ್ಥಿಯು ಮಾನ್ಯತೆ ಪಡೆದ ವಿಶ್ವವಿದ್ಯಾಲಯ ದಿಂದ ಯಾವುದೇ ಪದವಿಯನ್ನು ಪೂರ್ಣಗೊಳಿಸಿರಬೇಕು.

ವಯಸ್ಸಿನ ಮಿತಿ: ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಕನಿಷ್ಠ 18 ವರ್ಷಗಳು ಗರಿಷ್ಠ 32 ವರ್ಷಗಳು. ಎಸ್.ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳು, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷಗಳು, ಅಂಗವಿಕಲರಿಗೆ 10 ವರ್ಷಗಳ ವಯೋಮಿತಿಯ ಸಡಿಲಿಕೆ ಮಾಡಲಾಗಿದೆ.

ಅರ್ಜಿ ಶುಲ್ಕ: ಸಾಮಾನ್ಯ ಅಭ್ಯರ್ಥಿಗಳಿಗೆ ₹100, ಮಹಿಳೆಯರು, ಎಸ್.ಸಿ, ಎಸ್.ಟಿ, ಇಎಸ್‌ಎಂ, ಮತ್ತು ಪಿಡಬ್ಲ್ಯುಬಿಎಸ್ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ. ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಬೇಕು.

ಪರೀಕ್ಷಾ ಕೇಂದ್ರಗಳು: ರಾಜ್ಯದಲ್ಲಿ ಬೆಳಗಾವಿ, ಬೆಂಗಳೂರು, ಹುಬ್ಬಳ್ಳಿ, ಕಲಬುರ್ಗಿ, ಮಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಉಡುಪಿಯಲ್ಲಿ ಪರೀಕ್ಷೆಗಳು ನಡೆಯಲಿವೆ. ಅಭ್ಯರ್ಥಿಗಳು ಮೂರು ಕೇಂದ್ರಗಳಲ್ಲಿ ಪರೀಕ್ಷೆ ಹಾಜರಾಗುವ ಆಯ್ಕೆಗಳನ್ನು ನೀಡಬಹುದು.

ನೇಮಕಾತಿ ಅಧಿಸೂಚನೆ, ಸ್ಪರ್ಧಾತ್ಮಕ ಪರೀಕ್ಷೆ ಪ್ರಕ್ರಿಯೆ, ವಿಷಯಗಳು ಹಾಗೂ ಇನ್ನಿತರ ಮಾಹಿತಿಗಾಗಿ ಇಲ್ಲಿಗೆ ಭೇಟಿ ನೀಡಿ; https://ssc.nic.in/SSCFileServer/PortalManagement/UploadedFiles/notice_CGLE_17092022.pdf

ನಬಾರ್ಡ್‌ನಲ್ಲಿ 177 ಹುದ್ದೆಗಳು

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಬ್ಯಾಂಕ್‌ನಲ್ಲಿ (ನಬಾರ್ಡ್) ಖಾಲಿ ಇರುವ 177 ಡೆವಲಪ್‌ಮೆಂಟ್ ಅಸಿಸ್ಟೆಂಟ್ ಗ್ರೇಡ್ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಹುದ್ದೆಗಳು: 177

ವಿದ್ಯಾರ್ಹತೆ: ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು. ಹೆಚ್ಚಿನ ಮಾಹಿತಿಗೆ ನೇಮಕಾತಿಯ ಅಧಿಸೂಚನೆ ನೋಡುವುದು.

ವಯೋಮಿತಿ: ಕನಿಷ್ಠ 21 ಗರಿಷ್ಠ 35 ವರ್ಷ
ಸಾಮಾನ್ಯ ಹಾಗೂ ಮೀಸಲಾತಿ ರಹಿತ ಅಭ್ಯರ್ಥಿಗಳಿಗೆ ಕನಿಷ್ಠ 21 ವರ್ಷ ಹಾಗೂ ಗರಿಷ್ಠ 30 ವರ್ಷ. ಅಂಗವಿಕಲರಿಗೆ 10 ವರ್ಷ, ಎಸ್‌ಸಿ/ ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ವಯೋಮಿತಿ ಸಡಿಲಿಕೆ ಇದೆ.

ಆಯ್ಕೆ ಪ್ರಕ್ರಿಯೆ: ನೇಮಕಾತಿಯು ಮೂರು ಹಂತಗಳಲ್ಲಿ ನಡೆಯಲಿದೆ. ಪ್ರಾಥಮಿಕ ಪರೀಕ್ಷೆ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಮೂಲಕ ಅಂತಿಮ ನೇಮಕಾತಿ ನಡೆಯಲಿದೆ.

ಅರ್ಜಿ ಶುಲ್ಕ: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ₹50. ಸಾಮಾನ್ಯ ಹಾಗೂ ಇತರೆ ವರ್ಗಗಳ ಅಭ್ಯರ್ಥಿಗಳಿಗೆ ₹450.

ಅರ್ಜಿ ಸಲ್ಲಿಸಲು ಕೊನೆಯ ದಿನ: 10, ಅಕ್ಟೋಬರ್ 2022.

ಹೆಚ್ಚಿನ ಮಾಹಿತಿಗೆ: www.nabard.org

ಕೃಷ್ಣಾ: ಪ್ರತ್ಯೇಕ ಪೀಠಕ್ಕೆ ರಾಜ್ಯ ಒತ್ತಡ

• ಮಂಜುನಾಥ ಹೆಬ್ಬಾರ್

ನವದೆಹಲಿ: 'ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2' ನೀಡಿರುವ ತೀರ್ಪನ್ನು ಕೇಂದ್ರ ಗೆಜೆಟ್‌ನಲ್ಲಿ ಪ್ರಕಟಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಗೆ ಪ್ರತ್ಯೇಕ ನ್ಯಾಯಪೀಠ ರಚನೆಗೆ ಒತ್ತಾಯಿಸಿ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಾರ್‌ಗೆ ಪತ್ರ ಬರೆದಿದೆ.

ಅಂತರರಾಜ್ಯ ಜಲ ವಿವಾದ ಕಾಯ್ದೆಯ ಸೆಕ್ಷನ್ 5(2)ರಲ್ಲಿ 2010ರ ಡಿಸೆಂಬರ್ 30ರಂದು ಹಾಗೂ ಸೆಕ್ಷನ್ 5 (3) ಅಡಿಯಲ್ಲಿ 2013ರ ನವೆಂಬರ್ 29ರಂದು ನ್ಯಾಯಾಧಿಕರಣವು ತೀರ್ಪು ನೀಡಿತ್ತು. ಈ ತೀರ್ಪು ಪ್ರಶ್ನಿಸಿ ಆಂಧ್ರ ಪ್ರದೇಶ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಪ್ರಜಾವಾಣಿ ವಿಶೇಷ

ಈ ವಿಷಯದ ವಿವರವಾದ ಪರಿಗಣನೆ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿರುವ ಸುಪ್ರೀಂ ಕೋರ್ಟ್, ಸೆಕ್ಷನ್ 5 (3) ರಡಿ ನೀಡಿರುವ ತೀರ್ಪನ್ನು ಕೇಂದ್ರ ಸರ್ಕಾರವು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸದಂತೆ ನಿರ್ದೇಶನ ನೀಡಿತ್ತು.

ಈ ತೀರ್ಪನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಲು ಅವಕಾಶ ನೀಡುವಂತೆ ಒತ್ತಾಯಿಸಿ ಮಹಾರಾಷ್ಟ್ರ ಸರ್ಕಾರವು 2014ರ ಆಗಸ್ಟ್‌ನಲ್ಲಿ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು. ಇದನ್ನು ಬೆಂಬಲಿಸಿ ಕರ್ನಾಟಕ ಸರ್ಕಾರವು 2014ರ ಸೆಪ್ಟೆಂಬರ್‌ನಲ್ಲಿ ಪ್ರಮಾಣಪತ್ರ ಸಲ್ಲಿಸಿತ್ತು.

ನೀರಿನ ಹಂಚಿಕೆ (ಟಿಎಂಸಿ ಅಡಿ)	
ರಾಜ್ಯ	ಪ್ರಮಾಣ
ಕರ್ನಾಟಕ	173
ಮಹಾರಾಷ್ಟ್ರ	81
ಆಂಧ್ರಪ್ರದೇಶ	194

ಸುಪ್ರೀಂ ಕೋರ್ಟ್‌ಗೆ 2019ರ ಫೆಬ್ರುವರಿ ತಿಂಗಳಲ್ಲಿ ಮಧ್ಯಕಾಲೀನ ಅರ್ಜಿ ಸಲ್ಲಿಸಿರುವ ಕರ್ನಾಟಕ ಸರ್ಕಾರವು, ನ್ಯಾಯಾಲಯದಲ್ಲಿ ಬಾಕಿ ಇರುವ ವಿಶೇಷ ಮನವಿ ಅರ್ಜಿಗಳ ನಿರ್ಣಯಕ್ಕೆ ಒಳಪಟ್ಟು ನ್ಯಾಯಾಧಿಕರಣ ನೀಡಿರುವ ಅಂತಿಮ ಆದೇಶವನ್ನು ಗೆಜೆಟ್‌ನಲ್ಲಿ ಪ್ರಕಟಿಸಲು ಕೇಂದ್ರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿತ್ತು.

ಅದಕ್ಕೆ ಪೂರಕವಾಗಿ 2021ರ ನವೆಂಬರ್‌ನಲ್ಲಿ ಮತ್ತೊಂದು ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿತ್ತು.

ಈ ಅರ್ಜಿಯ ವಿಚಾರಣೆ 2022ರ ಜನವರಿ 10ರಂದು ಬಂದಿತ್ತು. ಈ ವೇಳೆ, ನ್ಯಾಯಮೂರ್ತಿಗಳಿಬ್ಬರು ಪ್ರಕರಣದ ವಿಚಾರಣೆಯಿಂದ ಸರಿದಿದ್ದರು. ಅದರ ಬೆನ್ನಲ್ಲೇ, ಸುಪ್ರೀಂ ಕೋರ್ಟ್ ರಿಜಿಸ್ಟ್ರಾರ್‌ಗೆ ಜನವರಿ 24ರಂದು ಪತ್ರ ಬರೆದ ಕರ್ನಾಟಕದ ವಕೀಲರು, 'ಈ ಅರ್ಜಿಗಳು ತುರ್ತಾಗಿ ವಿಚಾರಣೆ ನಡೆಸಲು ಪ್ರತ್ಯೇಕ ನ್ಯಾಯಪೀಠ ರಚಿಸಬೇಕು ಹಾಗೂ ತ್ವರಿತವಾಗಿ ವಿಚಾರಣೆಗೆ ಪಟ್ಟಿ ಮಾಡಬೇಕು' ಎಂದು ಕೋರಿದರು.

ಸುಪ್ರೀಂ ಕೋರ್ಟ್‌ನಲ್ಲಿ ಫೆಬ್ರುವರಿ 18ರಂದು ವಾದ ಮಂಡಿಸಿದ ರಾಜ್ಯದ ಹಿರಿಯ ವಕೀಲರು, ಶೀಘ್ರದಲ್ಲೇ ಪ್ರತ್ಯೇಕ ನ್ಯಾಯಪೀಠ ರಚಿಸಲು ಮನವಿ ಮಾಡಿದರು. ಕಳೆದ ತಿಂಗಳು ರಿಜಿಸ್ಟ್ರಾರ್‌ಗೆ ಮತ್ತೊಂದು ಪತ್ರ ಬರೆದಿರುವ ಸರ್ಕಾರ, ಈ ಸಂಬಂಧ ಶೀಘ್ರ ನ್ಯಾಯಪೀಠ ರಚಿಸುವಂತೆ ವಿನಂತಿಸಿದೆ.

'ರಾಜ್ಯಕ್ಕೆ ಹಂಚಿಕೆಯಾಗಿರುವ ನೀರಿನ ಪ್ರಮಾಣದ ಬಳಕೆಗಾಗಿ ವಿವಿಧ ಯೋಜನೆಗಳನ್ನು ರೂಪಿಸಲಾಗಿದ್ದು, ಇವುಗಳು ಅನುಷ್ಠಾನದ ವಿವಿಧ ಹಂತದಲ್ಲಿವೆ. ಗೆಜೆಟ್ ಪ್ರಕಟಣೆಯಾದ ಬಳಿಕ ಈ ನೀರಿನ ಬಳಕೆ ಸಾಧ್ಯವಾಗುತ್ತದೆ. ನ್ಯಾಯಪೀಠ ಶೀಘ್ರ ರಚನೆಯಾಗುವ ವಿಶ್ವಾಸ ಇದೆ' ಎಂದು ಕರ್ನಾಟಕದ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

'ಗೆಜೆಟ್ ಪ್ರಕಟಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಜಲಶಕ್ತಿ ಸಚಿವರಿಗೆ ಹಲವು ಪತ್ರಗಳನ್ನು ಬರೆಯ ಲಾಗಿದೆ. ಕೇಂದ್ರ ಸಚಿವರನ್ನು ಭೇಟಿ ಮಾಡಿ ಒತ್ತಡ ಹೇರಲಾಗಿದೆ' ಎಂದರು.

'ವಿರಳ ಕಾಯಿಲೆ: ಚಿಕಿತ್ಸೆ ಮರು ಆರಂಭಿಸಿ'

ಬೆಂಗಳೂರು: ವಿರಳ ಕಾಯಿಲೆಯಿಂದ ಬಳಲುತ್ತಿರುವ ಕರ್ನಾಟಕದ40 ರೋಗಿಗಳಿಗೆ ನೀಡಲಾಗುತ್ತಿದ್ದ ಅತ್ಯವಶ್ಯಕ ಚಿಕಿತ್ಸೆಯನ್ನು ಮರು ಆರಂಭಿಸುವಂತೆ ರೇರ್ ಡಿಸೀಸಸ್ ಇಂಡಿಯಾ ಫೌಂಡೇಷನ್ (ಆರ್‌ಡಿಐಎಫ್) ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆ.
ಸಂಸ್ಥೆಯ ಮುಖ್ಯಸ್ಥ ಸೌರಭ್ ಸಿಂಗ್ ಅವರು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರಿಗೆ ಈ ಸಂಬಂಧ ಪತ್ರ ಬರೆದಿದ್ದಾರೆ. ರಾಜ್ಯ ಸರ್ಕಾರವು ಚಿಕಿತ್ಸೆಯನ್ನು ದಿಢೀರ್ ಸ್ಥಗಿತಗೊಳಿಸಿದ್ದರಿಂದ ಈ ಎಲ್ಲ ರೋಗಿಗಳ ಜೀವ ಅಪಾಯದಲ್ಲಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಪೊಂಪೆ, ಗೌಚರ್, ಎಂಪಿಎಸ್-1 ಮೊದಲಾದ ಲೈಸೋಸೋಮಲ್ ಸ್ಟೋರೇಜ್ ಡಿಸಾರ್ಡರ್ಸ್‌ನಂತಹ (ಎಲ್‌ಎಸ್‌ಡಿ) ಮಾರಣಾಂತಿಕ ವಿರಳ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ರಾಜ್ಯ ಸರ್ಕಾರ ಚಿಕಿತ್ಸೆ ಒದಗಿಸುತ್ತಿದೆ. ಸರ್ಕಾರದ ಈ ನಿರ್ಧಾರದಿಂದ ಹಲವು ರಾಜ್ಯಗಳೂ ಪ್ರೇರಣೆಗೊಂಡು, ಅಲ್ಲಿನ ರೋಗಿಗಳಿಗೆ ಚಿಕಿತ್ಸೆ ನೀಡಲು ಮುಂದಾಗಿದ್ದವು.

ವಿರಳ ಕಾಯಿಲೆಗಳ ಚಿಕಿತ್ಸೆಗೆ ಅಧಿಕ ಹಣದ ಅವಶ್ಯಕತೆ ಇದೆ. 2022ರ ಏಪ್ರಿಲ್‌ನಿಂದ 2023ರ ಮಾರ್ಚ್ ಅವಧಿಯಲ್ಲಿ ರಾಜ್ಯಗಳ ರೋಗಿಗಳ ಚಿಕಿತ್ಸೆಗಾಗಿ ಸರ್ಕಾರವು ₹10 ಕೋಟಿ ಅನುದಾನ ತೆಗೆದಿರಿಸಿದೆ. ಆದರೂ ಚಿಕಿತ್ಸೆ ನೀಡುವುದನ್ನು ಸ್ಥಗಿತಗೊಳಿಸಲಾಗಿದೆ. ಈ ವಿಚಾರದಲ್ಲಿ ತಕ್ಷಣವೇ ಮಧ್ಯಪ್ರವೇಶಿಸಿ, ಚಿಕಿತ್ಸೆ ನೀಡಿಕೆ ಮರು ಆರಂಭಿಸಲು ಸಂಬಂಧಪಟ್ಟವರಿಗೆ ಸೂಚನೆ ನೀಡಬೇಕು ಎಂದು ಸುಧಾಕರ್ ಅವರಿಗೆ ಮನವಿ ಮಾಡಲಾಗಿದೆ.

₹14,100 ಕೋಟಿ ಜಿಎಸ್‌ಟಿ ಬಾಕಿ

ನವದೆಹಲಿ: ಕರ್ನಾಟಕಕ್ಕೆ ಕೇಂದ್ರ ಸರ್ಕಾರದಿಂದ 2021-22ನೇ ವರ್ಷ ಹಾಗೂ 2022-23ನೇ ಸಾಲಿನ ಆಗಸ್ಟ್ ಅಂತ್ಯದ ವರೆಗೆ ಜಿಎಸ್‌ಟಿ ಬಾಕಿ ಮತ್ತು ಪರಿಹಾರ ರೂಪದಲ್ಲಿ ₹14,100 ಕೋಟಿ ಬರಬೇಕಿದೆ.


2020ರ ಡಿಸೆಂಬರ್ ಹಾಗೂ 2021ರ ಜನವರಿಯ ಬಾಕಿ ₹488 ಕೋಟಿ, ಫೆಬ್ರುವರಿ ಹಾಗೂ ಮಾರ್ಚ್ ಬಾಕಿ ₹3,312 ಕೋಟಿ, 2022ರ ಫೆಬ್ರುವರಿ ಹಾಗೂ ಮಾರ್ಚ್ ಬಾಕಿ ₹2,385 ಕೋಟಿ, ಏಪ್ರಿಲ್ ಹಾಗೂ ಮೇ ತಿಂಗಳಿನದ್ದು ₹5,686 ಕೋಟಿ, ಜೂನ್‌ನ ಬಾಕಿ ₹2,307 ಕೋಟಿ ಪಾವತಿ ಮಾಡಬೇಕಿದೆ.

2020-21 ಹಾಗೂ 2021-22ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಜಿಎಸ್‌ಟಿ ಪರಿಹಾರ ರೂಪದಲ್ಲಿ ₹22,765 ಕೋಟಿ ಹಾಗೂ ಪರಿಹಾರ ಸಾಲ ರೂಪದಲ್ಲಿ ₹30,515 ಕೋಟಿ ನೀಡಿದೆ.

ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ನೀಡುತ್ತಿದ್ದ ಜಿಎಸ್‌ಟಿ ಪರಿಹಾರವು ಈ ವರ್ಷದ ಜೂನ್‌ಗೆ ಅಂತ್ಯಗೊಂಡಿದೆ. ಜಿಎಸ್‌ಟಿ ಪರಿಹಾರವನ್ನು ಮುಂದಿನ 5 ವರ್ಷಗಳಿಗೆ ವಿಸ್ತರಿಸುವಂತೆ ಕರ್ನಾಟಕ ಸರ್ಕಾರವು ಕೇಂದ್ರಕ್ಕೆ ಮನವಿ ಮಾಡಿದೆ. ಜಿಎಸ್‌ಟಿ ವಿಸ್ತರಣೆ ಬಗ್ಗೆ ಕೇಂದ್ರ, ಜಿಎಸ್‌ಟಿ ಕೌನ್ಸಿಲ್ ಈವರೆಗೆ ತೀರ್ಮಾನ ತೆಗೆದುಕೊಂಡಿಲ್ಲ. ಆದರೆ, ಕೇಂದ್ರ ಹಣಕಾಸು ಸಚಿವಾಲಯವು, 'ಜಿಎಸ್‌ಟಿ ವ್ಯವಸ್ಥೆ ಜಾರಿಯಾದ ಬಳಿಕ 5 ವರ್ಷ ಅವಧಿಗಷ್ಟೇ ಪರಿಹಾರ ಕೊಡಲು ಜಿಎಸ್‌ಟಿ ಮಂಡಳಿ ಶಿಫಾರಸು ಮಾಡಿತ್ತು' ಎಂದು ಈಗಾಗಲೇ ಸ್ಪಷ್ಟಪಡಿಸಿದೆ.

'ಸಂವಿಧಾನ ಕಾಯ್ದೆ 2016 (101ನೇ ತಿದ್ದುಪಡಿ) ಸೆಕ್ಷನ್ 18, ಜಿಎಸ್‌ಟಿ ಮಂಡಳಿ ಶಿಫಾರಸಿನ ಪ್ರಕಾರ, ಕಾಯ್ದೆ ಜಾರಿಯಾದ ಬಳಿಕ 5 ವರ್ಷವಷ್ಟೇ ರಾಜ್ಯಗಳಿಗೆ ಪರಿಹಾರ ನೀಡಲು ಅವಕಾಶವಿದೆ ಎಂದು ತಿಳಿಸಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಪಡೆಯುವಷ್ಟನ್ನೇ ಪಡೆದರೆ ತೃಪ್ತಿ. ಅದಕ್ಕಿಂತಲೂ ಹೆಚ್ಚಿಗೆ ಪಡೆದರೆ ಬಹಳ ಹೊರೆ, ದುಃಖ.

–ರವೀಂದ್ರನಾಥ ಟ್ಯಾಗೋರ್

ಪರಿಶಿಷ್ಟ ಬಾಲಕನ ಮೇಲೆ ಹಲ್ಲೆ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಲಿ

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಉಳ್ಳೇರಹಳ್ಳಿಯಲ್ಲಿ ಪರಿಶಿಷ್ಟ ಜಾತಿಯ ಬಾಲಕನ ಮೇಲೆ ನಡೆದಿರುವ ಹಲ್ಲೆ ಮತ್ತು ಸಂತ್ರಸ್ತನ ಕುಟುಂಬಕ್ಕೆ ಒಡ್ಡಲಾಗಿರುವ ಸಾಮಾಜಿಕ ಬಹಿಷ್ಕಾರದ ಬೆದರಿಕೆಯು ನಾಗರಿಕ ಸಮಾಜ ತಲೆ ತಗ್ಗಿಸಬೇಕಾದ ವಿದ್ಯಮಾನ. ಗ್ರಾಮದೇವತೆ ಭೂತಮ್ಮನ ಮೆರವಣಿಗೆಯ ಸಂದರ್ಭದಲ್ಲಿ ದೇವತೆಯ ಗುಜ್ಜುಕೋಲನ್ನು ಚೇತನ್ ಎನ್ನುವ ಬಾಲಕ ಮುಟ್ಟಿರುವುದು ಊರಿನ ಪ್ರಬಲ ಸಮುದಾಯಕ್ಕೆ ಸೇರಿದ ಕೆಲವರ ಅಸಹನೆಗೆ ಕಾರಣವಾಗಿದೆ. ಪರಿಶಿಷ್ಟ ಜಾತಿಯವರ ಸ್ಪರ್ಶದಿಂದ ದೈವಕ್ಕೆ ಅಪಚಾರವಾಯಿತು ಎಂದು ಆಪಾದಿಸಿ, ಬಾಲಕನ ಮೇಲೆ ದೈಹಿಕ ಹಲ್ಲೆ ನಡೆಸಲಾಗಿದೆ. ದೇವರಿಗೆ ಮೈಲಿಗೆಯಾದ ಕಾರಣಕ್ಕೆ ದೇವಸ್ಥಾನಕ್ಕೆ ಬಣ್ಣ ಬಳಿಸಲು ₹ 60 ಸಾವಿರ ದಂಡ ತೆರುವಂತೆ ಬಾಲಕನ ಕುಟುಂಬವನ್ನು ಒತ್ತಾಯಿಸಲಾಗಿದೆ. ಮನೆಗೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಬಾಲಕನ ತಾಯಿ ದಂಡದ ಹಣ ಹೊಂದಿಸಲು ವಿಫಲರಾಗಿ, ಕೊನೆಗೆ ಪೊಲೀಸರ ಮೊರೆ ಹೋಗಿದ್ದಾರೆ. ದಂಡದ ಹಣ ಪಾವತಿಸದೆ ಹೋದರೆ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಹಾಕುವುದಾಗಿ ಬೆದರಿಸಲಾಗಿದ್ದು, ಪ್ರಕರಣದ ಕುರಿತು ಗ್ರಾಮದ ಹೊರಗೆ ತಿಳಿಸದಂತೆ ಜೀವ ಬೆದರಿಕೆ ಒಡ್ಡಲಾಗಿದೆ ಎಂದು ದೂರಿನಲ್ಲಿ ಹೇಳಲಾಗಿದೆ. ಸಮಾಜದಲ್ಲಿ ಹೆಪ್ಪುಗಟ್ಟಿರುವ ಜಾತೀಯ ಮನೋಭಾವ ಮತ್ತು ಅದರ ಪರಿಣಾಮವಾದ ಕ್ರೌರ್ಯದ ಅಭಿವ್ಯಕ್ತಿಯಂತಿರುವ ಈ ಪ್ರಕರಣವು ಸಮ ಸಮಾಜಕ್ಕಾಗಿ ಹಂಬಲಿಸುವವರನ್ನು ಕಳವಳಕ್ಕೆ ದೂಡುವಂತಹದ್ದು. ಮಕ್ಕಳನ್ನು ದೇವರ ರೂಪದಲ್ಲಿ ನೋಡುವ ಸಮಾಜದಲ್ಲಿ, ಬಾಲಕನೊಬ್ಬನ ಸ್ಪರ್ಶದಿಂದ ದೇವರಿಗೆ ಮೈಲಿಗೆಯಾಗುತ್ತದೆ ಎಂದು ಕಲ್ಪಿಸಿಕೊಳ್ಳುವುದೇ ಅಸಹನೀಯ. ಪ್ರೇಮ ಮತ್ತು ಮಾನವೀಯತೆಯ ಸಂವಹನಕ್ಕೆ ಕಾರಣವಾಗುವ ಸ್ಪರ್ಶದಲ್ಲಿ ರೋಗಗ್ರಸ್ತ ಮನಸ್ಸುಗಳಿಗಷ್ಟೇ ಮೈಲಿಗೆ ಕಾಣಿಸಲು ಸಾಧ್ಯ.



ಮಕ್ಕಳನ್ನು ದೇವರ ರೂಪದಲ್ಲಿ ನೋಡುವ ಸಮಾಜದಲ್ಲಿ, ಬಾಲಕನೊಬ್ಬನ ಸ್ಪರ್ಶದಿಂದ ದೇವರಿಗೆ ಮೈಲಿಗೆಯಾಗುತ್ತದೆ ಎಂದು ಕಲ್ಪಿಸಿಕೊಳ್ಳುವುದೇ ಅಸಹನೀಯ

ಉಳ್ಳೇರಹಳ್ಳಿಯಲ್ಲಿ ದೌರ್ಜನ್ಯಕ್ಕೆ ತುತ್ತಾದ ಬಾಲಕ ಹತ್ತನೇ ತರಗತಿಯ ವಿದ್ಯಾರ್ಥಿ. ಜಾತಿ ಕಾರಣದಿಂದಾಗಿ ಅವಮಾನಕ್ಕೆ ಗುರಿಯಾಗುವ ಘಟನೆಗಳು ಎಳೆಯ ಮಕ್ಕಳ ಮನಸ್ಸಿನ ಮೇಲೆ ಮಾಡಬಹುದಾದ ಗಾಯವನ್ನು ಊಹಿಸಿಕೊಳ್ಳುವುದೂ ಕಷ್ಟ. ಮಕ್ಕಳ ಮನಸ್ಸಿನಲ್ಲಿ ಪ್ರೇಮ ಮತ್ತು ಸಹಬಾಳ್ವೆಗೆ ಅವಕಾಶವಿರುವ ಸಮಾಜದ ಚಿತ್ರಣವನ್ನು ಮೂಡಿಸಬೇಕೇ ಹೊರತು, ಒಡಕಿನ ಬಿಂಬಗಳನ್ನಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಎಂಟು ಮಂದಿಯ ವಿರುದ್ಧ ದೌರ್ಜನ್ಯ ಪ್ರಕರಣ ದಾಖಲಿಸಿದ್ದಾರೆ. ಜಾತೀಯತೆಯನ್ನು ಆಚರಿಸುವ ಮೂಲಕ ಸಾಮಾಜಿಕ ಸೌಹಾರ್ದವನ್ನು ಕದಡುವವರ ಮೇಲೆ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಿ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಾಜಕ್ಕೆ ಅನಿಷ್ಟವಾದ ಆಚರಣೆಗಳಿಗೆ ಅವಕಾಶವಿಲ್ಲ. ಇಂತಹ ಶಕ್ತಿಗಳ ವಿರುದ್ಧ ಕಾನೂನು ಪ್ರಹಾರದ ಜೊತೆಗೆ, ಸಮಾಜವನ್ನು ಮಾನವೀಯಗೊಳಿಸುವ ಪ್ರಯತ್ನಗಳೂ ವ್ಯಾಪಕವಾಗಿ ನಡೆಯಬೇಕು. ಜಾತಿ ಶ್ರೇಷ್ಠತೆಯ ವ್ಯಸನಕ್ಕೊಳಗಾದವರು ಕಾನೂನನ್ನು ಕೈಗೆ ತೆಗೆದುಕೊಂಡು ದುರ್ಬಲ ವರ್ಗದವರ ಮೇಲೆ ದೌರ್ಜನ್ಯ ನಡೆಸುತ್ತಾರೆ. ಸಾಮಾಜಿಕ ಬಹಿಷ್ಕಾರ ಹಾಕುವ ಹಾಗೂ ದಂಡ ವಿಧಿಸುವ ಸರ್ವಾಧಿಕಾರ ಮನಸ್ಥಿತಿ ಸಾಂವಿಧಾನಿಕ ವ್ಯವಸ್ಥೆಗೆ ವಿರುದ್ಧವಾದುದು. ಇಂಥ ನಡವಳಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು.

ದೇಶದ ವಿವಿಧ ಭಾಗಗಳಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ನಿರಂತರವಾಗಿ ನಡೆಯುತ್ತಿವೆ. ಕನಿಷ್ಠ ಲಜ್ಜೆಯೂ ಇಲ್ಲದೆ ನಡೆಯುವ ಈ ಘಟನೆಗಳು ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿರುವ ಜಾತೀಯತೆಯನ್ನು ಮತ್ತೆ ಮತ್ತೆ ನೆನಪು ಮಾಡುವಂತಿವೆ. ಕುಡಿಯುವ ನೀರು, ಆಹಾರ, ಮದುವೆ, ವೃತ್ತಿ ಸೇರಿದಂತೆ ಬೇರೆ ಬೇರೆ ಸಂದರ್ಭಗಳಲ್ಲಿ ಜಾತಿಯನ್ನು ಹೆಸರಿಸಿ ಸಾರ್ವಜನಿಕವಾಗಿ ಅವಮಾನಿಸುವ ಘಟನೆಗಳು ಪುನರಾವರ್ತನೆಗೊಳ್ಳುತ್ತಿವೆ. ಮಕ್ಕಳಿಗೆ ಸಮಾನತೆಯನ್ನು ಕಲಿಸಬೇಕಾದ ಶಾಲೆಗಳು ಕೂಡ ಜಾತಿಯ ತರತಮಗಳಿಂದ ಮುಕ್ತವಾಗಿಲ್ಲ. ಕುಡಿಯುವ ನೀರಿನ ಮಡಕೆ ಮುಟ್ಟಿದ ಕಾರಣಕ್ಕೆ ವಿದ್ಯಾರ್ಥಿಯ ಮೇಲೆ, ಸಮವಸ್ತ್ರ ಧರಿಸಿದ ಕಾರಣಕ್ಕೆ ವಿದ್ಯಾರ್ಥಿನಿಯ ಮೇಲೆ ಹಲ್ಲೆ ನಡೆದ ಘಟನೆಗಳು ಇತ್ತೀಚೆಗೆ ವರದಿಯಾಗಿವೆ. ಈ ಘಟನೆಗಳು ಭಾರತದ ಸಂವಿಧಾನ ಪ್ರತಿಪಾದಿಸುವ ಜಾತ್ಯತೀತ ಸ್ವರೂಪವನ್ನು ಅಣಕ ಮಾಡುವಂತಿವೆ. ಜಾತೀಯತೆಯನ್ನು ತೊಡೆದುಹಾಕುವುದು ಸ್ವಾತಂತ್ರ್ಯಾನಂತರದ ಎಪ್ಪತ್ತೈದು ವರ್ಷಗಳ ನಂತರವೂ ಸಾಧ್ಯವಾಗದಿರುವುದು ದುರದೃಷ್ಟಕರ. ಜಾತೀರೋಗದಿಂದ ನರಳುವ ಮನಸ್ಸುಗಳು ಸಮಾಜವನ್ನು ಮತ್ತೆ ಮತ್ತೆ ಗಾಯಗೊಳಿಸುತ್ತಿವೆ. ಇಂಥ ಪ್ರಯತ್ನಗಳು ಸಾಮಾಜಿಕ ಆರೋಗ್ಯಕ್ಕೆ ಧಕ್ಕೆ ತರುವುದು ಮಾತ್ರವಲ್ಲ, ದೇಶದ ಅಭಿವೃದ್ಧಿಗೂ ಮಾರಕ. ಜಾತೀಯತೆಯನ್ನು ಹೋಗಲಾಡಿಸುವ ಜಾಗೃತಿ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು. ಶಾಲೆಗಳು ಮಕ್ಕಳ ಮನಸ್ಸುಗಳನ್ನು ಬೆಸೆಯುವ ಕೆಲಸ ಮಾಡಬೇಕು. ಚಿವುಟಿದಷ್ಟೂ ಚಿಗುರುವ ವಿಷವೃಕ್ಷವನ್ನು ಬೇರುಸಮೇತ ನಿರ್ಮೂಲಗೊಳಿಸುವ ಹಾಗೂ ಮಾನವೀಯ ನೆಲೆಗಟ್ಟಿನಲ್ಲಿ ಮನಸ್ಸುಗಳನ್ನು ಬೆಸೆಯುವ ಆಂದೋಲನದಲ್ಲಿ ಇಡೀ ಸಮಾಜವೇ ಶಾಲೆಯ ಸ್ವರೂಪ ಪಡೆದುಕೊಳ್ಳುವುದು ಅಗತ್ಯ.

ದಿನದ ಟ್ವೀಟ್

ಕಠಿಣ ಶಿಕ್ಷೆಯಾಗಲಿ



ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ? ಎಷ್ಟು ಆಧುನಿಕತೆ, ಟೆಕ್ನಾಲಜಿ ಬಂದರೂ ಮನುಷ್ಯ ಮನುಷ್ಯನಲ್ಲಿ ಭೇದ ಎಣಿಸುವ ಈ ಮನಃಸ್ಥಿತಿ ಎಲ್ಲೂ ಹೋಗಿಲ್ಲವಲ್ಲ... ಇದಕ್ಕೇ ಅಂಬೇಡ್ಕರ್ ಮುಖ್ಯವಾಗೋದು.

(ಮಾಲೂರು ತಾಲ್ಲೂಕಿನ ಉಳ್ಳೇರಹಳ್ಳಿಯ ಪ್ರಕರಣಕ್ಕೆ ಪ್ರತಿಕ್ರಿಯೆ)

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ



ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಗುಣಮಟ್ಟವೂ ಇಲ್ಲ, ಮೂಲಸೌಕರ್ಯವೂ ಇಲ್ಲ. ಹೀಗಾಗಿ, ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಕೆನಡಾದಂತಹ ದೇಶಗಳಿಗೆ ಹೋಗುತ್ತಿದ್ದಾರೆ. ನಮ್ಮಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಆದ್ಯತೆಯೇ ಇಲ್ಲ. ಪಿಎಚ್‌.ಡಿ ವಿದ್ಯಾರ್ಥಿಗಳಿಗೆ ಇನ್ನಿಲ್ಲದ ಹಿಂಸೆ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಆತಂಕವಾಗುತ್ತಿದೆ.

ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಸಭಾಧ್ಯಕ್ಷ

25 ವರ್ಷಗಳ ಹಿಂದೆ

ಸೋಮವಾರ, 22-9-1997

• ಉ.ಪ್ರ: ಕಲ್ಯಾಣ್ ಸಿಂಗ್ ಅಧಿಕಾರಕ್ಕೆ

ಲಖನೌ, ಸೆಪ್ಟೆಂಬರ್ 21 (ಯುಎನ್‌ಐ, ಪಿಟಿಐ)– ಭಾರತೀಯ ಜನತಾ ಪಕ್ಷದ ಹಿರಿಯ ಮುಖಂಡ ಕಲ್ಯಾಣ್ ಸಿಂಗ್ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿ ಇಂದು ಪ್ರಮಾಣವಚನ ಸ್ವೀಕರಿಸಿದರು.

ಕೆ.ಡಿ. ಸಿಂಗ್ ಬಾಬು ಕ್ರೀಡಾಂಗಣದಲ್ಲಿ ಮಧ್ಯಾಹ್ನ ನಡೆದ ವರ್ಣರಂಜಿತ ಸಮಾರಂಭದಲ್ಲಿ ಕಲ್ಯಾಣ್ ಸಿಂಗ್ ಅವರಿಗೆ ರಾಜ್ಯಪಾಲ ರೋಮೇಶ್ ಭಂಡಾರಿ ಪ್ರಮಾಣವಚನ ಬೋಧಿಸಿದರು.

• ವಿದೇಶಿ ಟಿ.ವಿ. ಚಾನೆಲ್ ನಿಯಂತ್ರಣಕ್ಕೆ ಪ್ರಾಧಿಕಾರ

ಬೆಂಗಳೂರು, ಸೆಪ್ಟೆಂಬರ್ 21– ಖಾಸಗಿ ಮತ್ತು ವಿದೇಶಿ ಟಿ.ವಿ. ಚಾನೆಲ್‌ಗಳ ನಿಯಂತ್ರಣಕ್ಕಾಗಿ ಸಮರ್ಥವಾದ ಪ್ರಸಾರ ಪ್ರಾಧಿಕಾರ ರಚಿಸುವುದು ತಮ್ಮ ಆದ್ಯ ಕೆಲಸವಾಗಿದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಎಸ್. ಜೈಪಾಲ್ ರೆಡ್ಡಿ ಅವರು ಇಂದು ಇಲ್ಲಿ ನುಡಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮತ್ತು ಚಲನಚಿತ್ರ ನಿರ್ಮಾಪಕರ ಸಂಘ ಏರ್ಪಡಿಸಿದ್ದ ಸಮಾರಂಭದಲ್ಲಿ ಭಾಗವಹಿಸಿದ್ದ ಅವರು, ಪ್ರಸಾರ ಭಾರತಿ ಕಾಯ್ದೆ ರೂಪಿಸಿದ ನಂತರ ಪ್ರಾಧಿಕಾರ ರಚಿಸುವುದು ನನ್ನ ಎರಡನೆಯ ಪ್ರಮುಖ ಕೆಲಸವಾಗಿದೆ ಎಂದರು. ಕೆಲವು ವರ್ಷಗಳಿಂದ ಕಾಯ್ದೆಯ ಅನುಪಸ್ಥಿತಿಯಲ್ಲಿ ಟಿ.ವಿ. ಚಾನೆಲ್‌ಗಳ ಮೇಲೆ ನಿಯಂತ್ರಣವಿಲ್ಲದಂತಾಗಿದೆ ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಶುಕ್ರವಾರ, 22-9-1972

• ಗಡಿ ವಿವಾದದ ಬಗ್ಗೆ ಅರಸು, ನಾಯಕ್ ಚರ್ಚೆ

ಮುಂಬೈ, ಸೆಪ್ಟೆಂಬರ್ 21– ಮಹಾರಾಷ್ಟ್ರ ಮತ್ತು ಮೈಸೂರು ರಾಜ್ಯಗಳ ಮುಖ್ಯಮಂತ್ರಿಗಳಾದ ವಿ.ಪಿ. ನಾಯಕ್ ಮತ್ತು ದೇವರಾಜ ಅರಸು ಅವರು ಇಂದು ಗಡಿ ವಿವಾದದ ಬಗ್ಗೆ ಚರ್ಚಿಸಿದರು. ನಾಯಕ್ ಅವರು ಮಲಬಾರ್ ಹಿಲ್‌ನಲ್ಲಿರುವ ತಮ್ಮ ಅಧಿಕೃತ ನಿವಾಸದಲ್ಲಿ ನೀಡಿದ ಭೋಜನಕೂಟ ಸಂದರ್ಭದಲ್ಲಿ ಎರಡು ಗಂಟೆ ಕಾಲ ಈ ಚರ್ಚೆ ನಡೆಯಿತು. ಮಾತುಕತೆಯ ನಂತರ ಇಬ್ಬರೂ ಸುದ್ದಿಗಾರರ ಪ್ರಶ್ನೆಗಳಿಗೆ ಮೌನವಾಗಿದ್ದರು.

• ಮೈಸೂರಿನ ನೆಲ ಬೇಡ: ನಾಯಕ್ ಹೇಳಿಕೆಗೆ ಅರಸು ಸ್ವಾಗತ

ಬೆಳಗಾವಿ, ಸೆಪ್ಟೆಂಬರ್ 21– ಮೈಸೂರಿನ ಯಾವ ಪ್ರದೇಶವನ್ನೂ ಮಹಾರಾಷ್ಟ್ರ ಬಯಸುವುದಿಲ್ಲ ಎಂಬ ಮಹಾರಾಷ್ಟ್ರ ಮುಖ್ಯಮಂತ್ರಿ ವಿ.ಪಿ. ನಾಯಕ್ ಅವರ ವರದಿಯಾಗಿರುವ ಹೇಳಿಕೆ 'ಬಹಳ ಒಳ್ಳೆಯದು' ಎಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಇಲ್ಲಿ ಹೇಳಿದರು.

ಸಾಹಿತಿಯನ್ನು ಹಣಿಯಬೇಕೆಂಬ ಹವಣಿಕೆಯೇ ಓದುವ ವ್ಯವಸಾಯದ ಉದ್ದೇಶವಾದರೆ...

ಬದಲಾದ ಕಾಲದಲ್ಲಿ ಓದುಗ–ಸಾಹಿತ್ಯ



ವಿಶ್ಲೇಷಣೆ

• ಡಾ. ಟಿ.ಎನ್. ವಾಸುದೇವಮೂರ್ತಿ

ಇಂದು ನಾವು ಬಳಸುತ್ತಿರುವ ಭಾಷೆಯನ್ನು ಸಮಾಜಶಾಸ್ತ್ರ, ರಾಜಕೀಯಶಾಸ್ತ್ರ, ಸ್ತ್ರೀವಾದ ಮುಂತಾದ ಪ್ರಸ್ಥಾನಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ಭಾಷೆಯ ಹಲವು ಲೋಪಗಳು ಹೊಸದಾಗಿ ಗೋಚರಿಸತೊಡಗುತ್ತವೆ. ಭಾಷೆಯಲ್ಲಿ ಆಮೂಲಾಗ್ರ ಬದಲಾವಣೆ ತರಬೇಕಾದ ಅಗತ್ಯವಿದೆ ಎಂದೆನಿಸುತ್ತದೆ. ನಾವು ಸುಮ್ಮನೆ 'ಮನುಷ್ಯನಾದವನು...' ಎಂಬ ಪದಗುಚ್ಛವನ್ನು ಪ್ರಯೋಗಿಸಿದರೂ ಅದು ದಿಕ್ಕು ತಪ್ಪಿಸುವ ಪ್ರಯೋಗವೆಂದು ಸಾಬೀತಾಗುತ್ತದೆ. ಏಕೆಂದರೆ ಆ ಪದಗುಚ್ಛ ಪುಲ್ಲಿಂಗವಾಚಿಯಾಗಿದೆ. 'ಹಾಗಿದ್ದರೆ ಮನುಷ್ಯಳಾದವಳು ಹೆಣ್ಣನ್ನು ಒಳಗೊಳ್ಳುವುದಿಲ್ಲವೇ' ಎಂಬ ಪ್ರಶ್ನೆ ಹುಟ್ಟಿಸುತ್ತದೆ.

ಒಂದು ಕುತೂಹಲಕರ ನಿದರ್ಶನ ನೀಡುವುದಾದರೆ, ಪಿ. ಲಂಕೇಶರ 'ಗಿಳಿಯು ಪಂಜರದೊಳಿಲ್ಲ' ಎಂಬ ನಾಟಕದ ಮೊದಲ ಆವೃತ್ತಿಯು 1970ರ ದಶಕದಲ್ಲಿ ಪ್ರಕಟಗೊಂಡಿತ್ತು. ಆ ನಾಟಕದಲ್ಲಿ ಒಬ್ಬ ಕ್ಷೌರಿಕನ ಪಾತ್ರ ಬರುತ್ತದೆ. ನಾಯಕ ಪಾತ್ರಕ್ಕೆ ಆ ಕ್ಷೌರಿಕನ ಹೆಸರು ಗೊತ್ತಿರುವುದಿಲ್ಲ. ಆದಕಾರಣ ಕ್ಷೌರಿಕ ವೃತ್ತಿಯವನಿಗೆ ಅಚ್ಚಗನ್ನಡದಲ್ಲಿ ಬಳಸುವ ಪದದಿಂದಲೇ ನಾಟಕದುದ್ದಕ್ಕೂ ಅವನನ್ನು ನಾಯಕ ಪಾತ್ರ ಸಂಬೋಧಿಸುತ್ತಿರುತ್ತದೆ. ಆದರೆ ಇಂದು ಲಭ್ಯವಿರುವ ಆ ನಾಟಕದ ಪರಿಷ್ಕೃತ ಆವೃತ್ತಿಯಲ್ಲಿ ಆ ಹಳೆಯ ಅಚ್ಚಗನ್ನಡ ಪದವನ್ನು ಪೂರ್ತಿಯಾಗಿ ತೆಗೆದುಹಾಕಲಾಗಿದೆ. ಅದರ ಬದಲಿಗೆ (ಅದು ಸಾಮಾಜಿಕವಾಗಿ ನಿಂದನೀಯವಾದ ಪದವೆಂಬ ಕಾರಣಕ್ಕೆ) 'ಕ್ಷೌರಿಕ'ನೆಂಬ ಸಂಸ್ಕೃತ ಪದವನ್ನು ಹೊಸದಾಗಿ ಬಳಸಲಾಗಿದೆ.

ಒಂದು ಜೀವಂತ ಭಾಷೆಯಲ್ಲಿ ಕಾಲಕಾಲಕ್ಕೆ ಪದಗಳಲ್ಲಿ ಅರ್ಥವ್ಯತ್ಯಾಸವಾಗುವುದು ಸಾಮಾನ್ಯ. ಕೆಲವು ಪದಗಳು ಉತ್ತಮಾರ್ಥ ಪಡೆದುಕೊಳ್ಳುತ್ತವೆ. ಉದಾಹರಣೆಗೆ ಇಂಗ್ಲಿಷಿನ 'Fame' ಎಂಬ ಪದಕ್ಕೆ ಹಿಂದಿನ ಕಾಲದಲ್ಲಿ 'ವದಂತಿ' 'ಜನವಾರ್ತೆ' ಮುಂತಾದ ಅರ್ಥಗಳಿದ್ದವು. ಇಂದು ಅದೇ ಪದಕ್ಕೆ 'ಕೀರ್ತಿ' 'ಪ್ರಸಿದ್ಧಿ' ಎಂಬಿತ್ಯಾದಿ ಅರ್ಥಗಳು ಹೆಚ್ಚು ಪ್ರಚಲಿತಕ್ಕೆ ಬಂದಿವೆ. ಅದೇ ರೀತಿ, 'Knight' ಎಂದರೆ ಸೇವಕನೆಂಬ ಅರ್ಥವಿತ್ತು. ಮುಂದೆ 'Knighthood' ಎಂಬುದು ಒಂದು ಪ್ರಶಸ್ತಿಯ ಹೆಸರಾಯಿತು. ಕಾಲಾಂತರದಲ್ಲಿ ಪದಗಳು ನೀಚಾರ್ಥವನ್ನು ಹೊಂದುವುದೂ ಉಂಟು.


ಅಲ್ಲದೆ ಕಾಲಕಾಲಕ್ಕೆ ಓದುಗ ವರ್ಗದ ನಿಲುವು, ಧೋರಣೆ, ತಿಳಿವಳಿಕೆಗಳೂ ಬದಲಾಗುತ್ತಿರುತ್ತವೆ. ಭಾಷಾ ವಿಜ್ಞಾನದ ದೃಷ್ಟಿಯಿಂದ ನೋಡಿದಾಗ 'ಗಿಳಿಯು ಪಂಜರದೊಳಿಲ್ಲ' ನಾಟಕದಲ್ಲಿ ಮಾಡಿರುವ ಪರಿಷ್ಕರಣೆ ಸ್ವಾಗತಾರ್ಹವೇ ಸರಿ. ಆದರೆ ಸಂಸ್ಕೃತದ ಬಳಕೆಯ ಮಾತ್ರದಿಂದ ಒಂದು ಪದ ಮತ್ತು ಅದು ಸೂಚಿಸುವ ಅರ್ಥ ತನಗೆ ಅಂಟಿದ ನೀಚಾರ್ಥದಿಂದ ಹೇಗೆ ಬಿಡುಗಡೆ ಹೊಂದುತ್ತದೆ ಎಂಬುದು ಅರ್ಥವಾಗದ ವಿಷಯವಾಗಿದೆ. ಇರಲಿ, ಆ ಚರ್ಚೆ ಭಾಷಾವಿಜ್ಞಾನಿಗಳಿಗೆ ಬಿಟ್ಟದ್ದು.

ಒಟ್ಟಿನಲ್ಲಿ ಇಂದಿನ ಸಾಮಾಜಿಕ ವರ್ಗ ಅಥವಾ ಓದುಗ ವರ್ಗವು ಸಾಮಾಜಿಕ ಸೂಕ್ಷ್ಮತೆ ಬೆಳೆಸಿಕೊಂಡಿದೆ, ಭಾಷಾ ಬಳಕೆಯ ಹಿಂದಿನ ಸಾಂಸ್ಕೃತಿಕ ಪರಿವೇಷವನ್ನು, ಜಾತಿರಾಜಕಾರಣವನ್ನು ಅರ್ಥ ಮಾಡಿಕೊಳ್ಳಬಲ್ಲ ವರ್ಗವಾಗಿದೆ. ಓದುಗ ವರ್ಗದ ಈ ಸ್ಥಿತ್ಯಂತರವನ್ನು ಆಧರಿಸಿ ಪಶ್ಚಿಮದಲ್ಲಿ 'ರೀಡರ್ ರೆಸ್ಪಾನ್ಸ್ ಥಿಯರಿ' ಎಂಬ ಓದುಗ ಕೇಂದ್ರಿತವಾದ ಒಂದು ಹೊಸ ಸಾಹಿತ್ಯ ಸಿದ್ಧಾಂತವೇ ಹುಟ್ಟಿಕೊಂಡಿದೆ. ಫ್ರೆಂಚ್ ಸಾಹಿತ್ಯ ಚಿಂತಕ ರೋಲಂಡ್ ಬಾರ್ತ್ ತನ್ನ 'ದಿ ಡೆತ್ ಆಫ್ ದಿ ಆಥರ್' ಎಂಬ ಪ್ರಬಂಧದಲ್ಲಿ ಈ ಕುರಿತು ವಿಶದವಾಗಿ ಚರ್ಚಿಸಿದ್ದಾರೆ.

ಹೊಸ ಸಾಹಿತ್ಯ, ರಾಜಕೀಯ ಮತ್ತು ಸಾಮಾಜಿಕ ಸಿದ್ಧಾಂತಗಳು ಸಾಹಿತ್ಯ ವಿಮರ್ಶೆ, ಸಾಮಾಜಿಕ ವಿಶ್ಲೇಷಣೆಗಳ ದಿಕ್ಕನ್ನು ಬದಲಾಯಿಸುವುದರ ಜೊತೆಗೆ ಸಾಹಿತ್ಯ ಮತ್ತು ಸಮಾಜದಲ್ಲಿನ ವಿಕೃತಿಗಳನ್ನೂ ಹೊಸದಾಗಿ ಅನಾವರಣ ಮಾಡುತ್ತಿವೆ. ಅದೇ ರೀತಿ ಹೊಸ 'ಓದುಗ ಸ್ಪಂದನ ಸಿದ್ಧಾಂತ'ವು ಸಾಹಿತ್ಯದ ಪೊಳ್ಳುತನ, ಪೂರ್ವಗ್ರಹಗಳನ್ನು ಬಯಲು ಮಾಡುತ್ತಿದೆ.

ಈ ಬದಲಾದ ಕಾಲಮಾನದಲ್ಲಿ 'ಅಭಿವ್ಯಕ್ತಿ ಸ್ವಾತಂತ್ರ್ಯ' ಅತಿಹೆಚ್ಚು ಚರ್ಚೆಗೆ ಗ್ರಾಸವಾಗಿರುವ ವಿಷಯವಾಗಿದೆ. ಹಿಂದೆ ತೀರ್ಥಂಕರರು ಸಮವಸರಣ ಮಂಟಪದಲ್ಲಿ ವಿರಾಜಮಾನರಾಗಿಯೋ, ಗೋರಕ್ಷ, ಆದಿಶಂಕರ, ರಾಮಾನುಜಾದಿಗಳು ದೇಶದುದ್ದಗಲಕ್ಕೂ ಸಂಚರಿಸುತ್ತಲೋ, ಬಸವಾದಿ ಶರಣರು ಅನುಭವ ಮಂಟಪದಲ್ಲಿ ಆಸೀನರಾಗಿಯೋ ತಮ್ಮ ಅಂತರಂಗದ ಅರಿವನ್ನು ಅಭಿವ್ಯಕ್ತಿಸುತ್ತಿದ್ದರು, ಮುಮುಕ್ಷುಗಳೊಂದಿಗೆ ಸಂವಾದಿಸುತ್ತಿದ್ದರು. ಇಂತಹ ಸನ್ನಿವೇಶಗಳಲ್ಲಿ ಯಾರೊಬ್ಬರೂ ಅವರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹಾನಿ ಮಾಡುತ್ತಿರಲಿಲ್ಲ. ಏನು ನುಡಿಯಬೇಕು ಮತ್ತು ಏನು ನುಡಿಯಬಾರದು ಎಂದು ಅವರನ್ನು ನಿರ್ಬಂಧಿಸುತ್ತಿರಲಿಲ್ಲ. ಆದರೆ ಇಂದು ಪರಿಸ್ಥಿತಿ ಹಾಗಿಲ್ಲ.

ಸಾಹಿತಿಯ ಅಭಿವ್ಯಕ್ತಿಯ ಆಶಯವು ತನ್ನಂತೆಯೇ ಯೋಚಿಸುವ, ತನ್ನಂತೆಯೇ ಭಾವಿಸುವ ಅಸಂಖ್ಯ ಓದುಗರೊಂದಿಗೆ ಸಂವಹಿಸಬೇಕೆಂಬುದಾಗಿರುತ್ತದೆ. ಓದುಗರ ಆಶಯವೂ ತನ್ನ ಬುದ್ಧಿ-ಭಾವಗಳು ಸಾಹಿತ್ಯ ಕೃತಿಯ ಮೂಲಕ ಪೂರ್ಣಾಭಿವ್ಯಕ್ತಿ ಪಡೆದುಕೊಳ್ಳಬೇಕು ಎಂಬುದಾಗಿರುತ್ತದೆ. ಆದರೆ ಬದಲಾದ ಕಾಲಮಾನದಲ್ಲಿ ಸಾಹಿತಿ-ಓದುಗರ ನಡುವಿನ ಸಂಬಂಧದ ಆಶಯ ಇಷ್ಟು ಸರಳವಾದುದಾಗಿರುವುದಿಲ್ಲ.



ಒಬ್ಬ ಸಾಹಿತಿಯನ್ನು ಹಣಿಯಬೇಕೆಂಬ ಹವಣಿಕೆಯೇ ಓದುವ ವ್ಯವಸಾಯದ ಉದ್ದೇಶವಾಗಿಬಿಟ್ಟಾಗ ಅಂತಹ ಸನ್ನಿವೇಶದಲ್ಲಿ ಚರ್ಚೆ ಸಾಧ್ಯವಾಗುವುದಿಲ್ಲ. ಅಂತಹ ಸಾಹಿತ್ಯ ಚರ್ಚೆ ಕೆಸರೆರಚಾಟವಾಗುತ್ತದೆ. ಈ ಬದಲಾದ ಕಾಲಮಾನದಲ್ಲಿ ಸಾಹಿತಿಗಳು ಜಾತಿ, ಧರ್ಮ, ಸಿದ್ಧಾಂತಗಳ ಹೆಸರಿನಲ್ಲಿ ಗುಂಪುಗಳಾಗಿ ಚದುರಿ ಹೋಗಿದ್ದಾರೆ. ಪ್ರತಿಯೊಂದು ಗುಂಪೂ ತನ್ನನ್ನು ಬೇರೆಯ ಗುಂಪಿನವರು ಸಹಾನುಭೂತಿಯಿಂದ ನೋಡಲಿ ಎಂದು ನಿರೀಕ್ಷಿಸುತ್ತಿದೆ. ಈ ನಿರೀಕ್ಷೆ ತಪ್ಪಲ್ಲ (ಜಗತ್ತಿನ ಯಾವುದೇ ಯಶಸ್ವೀ ಕ್ರಾಂತಿ ಅನ್ಯರ ಸಹಾಯ, ಸಹಾನುಭೂತಿಗಳಿಂದ ಸಾರ್ಥಕಗೊಂಡ ಉದಾಹರಣೆ ಇಲ್ಲವೆಂಬುದು ಇವರಿಗೆ ಅನ್ವಯಿಸದ ಮಾತು).

ಆದರೆ ನಿರೀಕ್ಷೆ ಕೈಗೂಡದೇ ಹೋದಾಗ ಉಂಟಾಗುವ ಹತಾಶೆ ಇದೆಯಲ್ಲ, ಅದು ತನಗೆ ಸಹಾನುಭೂತಿ ತೋರಿಸದ ಆ ಮತ್ತೊಂದು ಗುಂಪನ್ನು ನಿಕೃಷ್ಟವಾಗಿ ಬಿಂಬಿಸತೊಡಗುತ್ತದೆ, ವ್ಯಕ್ತಿನಿಂದನೆ, ಜಾತಿ ನಿಂದನೆಯ ಮಟ್ಟಕ್ಕೆ ವ್ಯಕ್ತಿಯನ್ನು ಇಳಿಸುತ್ತದೆ. ಸಾಹಿತ್ಯ ವಲಯದ ಈ ಹತಾಶೆಯು ಕ್ರಮೇಣ ಸಾಹಿತಿಯ– ಓದುಗನ ಸೂಕ್ಷ್ಮತೆಯನ್ನು ಸರ್ವನಾಶ ಮಾಡುತ್ತದೆ. ಆ ಸೂಕ್ಷ್ಮತೆಯನ್ನು ಕಳೆದುಕೊಂಡವರು ಒಬ್ಬ ಸಾಹಿತಿಯು ಒಂದು ಪಂಥ ಅಥವಾ ಸಿದ್ಧಾಂತದ ಅಮೂಲ್ಯ ಸಂಗತಿಗಳನ್ನು ಶ್ಲಾಘಿಸಿದ ಮಾತ್ರಕ್ಕೆ ಅವನನ್ನು ಖಳನಂತೆ ಕಾಣತೊಡಗುವರು.

ತನ್ನೊಂದಿಗೆ ಸಮಾಜದಲ್ಲಿ ಸಹಬಾಳ್ವೆ ಮಾಡುತ್ತಿರುವವರನ್ನೆಲ್ಲ ಖಳರಂತೆ ಕಾಣತೊಡಗಿದಾಗ, ಖಳರಂತೆ ಹೊರಜಗತ್ತಿಗೆ ಬಿಂಬಿಸತೊಡಗಿದಾಗ ಸಂವಾದ ಹಾಗಿರಲಿ, ಬದುಕಲಾದರೂ ಹೇಗೆ ಸಾಧ್ಯವಾಗುತ್ತದೆ? ವೃಥಾ ಖಳರಂತೆ ಏಕೆ ಬಿಂಬಿತರಾಗಬೇಕೆಂದು ಇಂದು ಅದೆಷ್ಟೋ ಹಿರಿಯ ಸಾಹಿತಿಗಳು ಮೌನದ ಗೂಡಿನಲ್ಲಿ ಅವಿತುಬಿಟ್ಟಿದ್ದಾರೆ. ತಮ್ಮಿಷ್ಟದ ಹೊಸ ತಲೆಮಾರಿನ ಸಾಹಿತಿಗಳನ್ನು ಖಾಸಗಿಯಾಗಿ ಪ್ರಶಂಸಿಸುತ್ತ, ಬಹಿರಂಗದಲ್ಲಿ ಅವರ ಬಗ್ಗೆ ಮಗುಮ್ಮಾಗಿ ಇದ್ದುಬಿಡುವ ನಾಜೂಕುತನ ಬೆಳೆಸಿಕೊಂಡಿದ್ದಾರೆ. ನಮ್ಮೊಳಗಿನ ಅಸಹನೆ, ಅಸೂಕ್ಷ್ಮತೆಗಳು ನಮ್ಮನ್ನು ಕೆಡಿಸುವುದರ ಜೊತೆಗೆ ಅನ್ಯರನ್ನೂ ವಿಷಮ ರೀತಿಯಲ್ಲಿ ಪ್ರಭಾವಿಸುವುದು, ಅನ್ಯರು ಮುಖವಾಡ ತೊಡುವಂತೆ ಮಾಡುವುದು ಯಾವುದೇ ಸಾಂಸ್ಕೃತಿಕ ಲೋಕಕ್ಕೆ ಶ್ರೇಯಸ್ಕರವಲ್ಲ.

ಸಾಹಿತಿ ಕೇಂದ್ರಿತವಾದ 'ಅಭಿವ್ಯಕ್ತಿ ಸ್ವಾತಂತ್ರ್ಯ' ಎಂಬ ಪರಿಕಲ್ಪನೆ ಇಂದು 'ಸ್ವತಂತ್ರವಾಗಿ ಅಭಿವ್ಯಕ್ತಿಸುವ ಸಾಹಿತಿಯ ಮಾತುಗಳಿಗೆ ಓದುಗರಾದ ನಾವು ಕಿವಿಗೊಡಲೇಬೇಕೇ?' ಎಂಬ ಓದುಗನ ಹಕ್ಕಿನ ಪ್ರಶ್ನೆಗೂ ಜನ್ಮ ನೀಡುತ್ತದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲ್ಯವನ್ನು ನಿರ್ಧರಿಸುವವರು ಓದುಗರು. ಓದುಗರಾದವರು ತಮಗೆ ಪಥ್ಯವೆನಿಸದ ಸಾಹಿತಿಗಳಿಗೆ ಕಿವಿಗೊಡದೆ ಹೋದರೆ, ಅವರ ಬಗ್ಗೆ ನಿರ್ಲಕ್ಷ್ಯಭಾವ ತಳೆದರೆ ಅಷ್ಟು ಸಾಲದೇ? ಪಥ್ಯವಾದುದನ್ನು ಸ್ವೀಕರಿಸುವುದರಿಂದ, ಅಪಥ್ಯವಾದುದನ್ನು ಸ್ವೀಕರಿಸದೇ ಗೌರವಿಸಿ ಸುಮ್ಮನಾಗುವುದರಿಂದ ಸಾಹಿತ್ಯ ವಲಯ ಆರೋಗ್ಯಪೂರ್ಣವಾಗುತ್ತದೆ. ಎಲ್ಲರಿಗೂ ಗೊತ್ತೇ ಇರುವ ಕಶ್ಮಲವನ್ನು ಪುನಃ ಕಶ್ಮಲವೆಂದು ವಿಶ್ಲೇಷಿಸಿ ವಿವರಿಸುವುದು ಸದಭಿರುಚಿಯ ವಿಮರ್ಶೆಯಲ್ಲ.

ಚುರುಮುರಿ



ವಾಪಸ್ ಭಾಗ್ಯ

• ಆನಂದ

'ಹೀಗೂ ಉಂಟೆ?' ಎಂದು ಹೆಂಡತಿ ಉದ್ಗಾರವೆತ್ತಿದಾಗ ನಾನು 'ಹೇಗುಂಟು?' ಎಂದು ಕೇಳಿದೆ.

'ಅದೇರಿ, ಸಿನಿಮಾ ಫ್ಲಾಪ್ ಆದರೆ ಹೀರೊ ದುಡ್ಡು ವಾಪಸ್ ಮಾಡೋದು ಅಥವಾ ಸಂಭಾವನೇನೆ ಕೇಳದೇ ಇರೋದು'.

'ಹೌದೆ? ಯಾರು ಅದು ಈ ನ್ಯೂ ಹೀರೊ?'

'ಅಮೀರ್ ಖಾನ್. ಅವರ ಇತ್ತೀಚಿನ ಚಿತ್ರ ಗಲ್ಲಾಪೆಟ್ಟಿಗೇಲಿ ಸೋತಿದ್ದಕ್ಕೆ ಖಾನ್ ಸಾಹೇಬ್ರು ಸಂಭಾವನೆ ಒಲ್ಲೆ ಎಂದಿದ್ದಾರೆ'.

'ಅವರ ಹೆಸರೇ ಅಮೀರ್. ಪ್ರೊಡ್ಯೂಸರ್ ಗರೀಬ್ ಆಗದೇ ಇರಲಿ ಅಂತ ಸಂಭಾವನೆ ರೈಟ್ ಆಫ್ ಮಾಡಿದ್ದಾರೆ' ಎಂದು ವಿವರಿಸಿದೆ.

'ಎಷ್ಟು ಜನಕ್ಕೆ ಈ ಉದಾರ ಬುದ್ಧಿ ಇರುತ್ತೆ? ಚಿತ್ರ ಗೆಲ್ಲಲಿ ಬಿಡಲಿ ನಮಗೆ ಕೊಡೋದು ಕೊಟ್ಬಿಡಿ ಅಂತ ಹೇಳೋರೇ ಜಾಸ್ತಿ ಅಲ್ಲವೆ?'

'ಇದೇ ಟ್ರೆಂಡ್ ಎಲ್ಲ ಕಡೆ ವ್ಯಾಪಿಸಿದರೆ ಚೆನ್ನಾಗಿರುತ್ತೆ ನೋಡು'.

'ಅಂದರೆ?'

'ಆಪರೇಷನ್ ಸಕ್ಸಸ್ ಆಗದಿದ್ರೆ ಆಸ್ಪತ್ರೆ ಬಿಲ್ ರೈಟ್ ಆಫ್. ವಿದ್ಯಾರ್ಥಿ ಫೇಲ್ ಆದರೆ ಕಟ್ಟಿದ್ದ ಫೀಸ್ ವಾಪಸ್...'

'ಹೋಟೆಲಿನಲ್ಲಿ ಮಸಾಲೆ ದೋಸೆ ಚೆನ್ನಾಗಿಲ್ಲ ಅಂದರೆ ಬಿಲ್ ಮಾಫಿ. ಸಿನಿಮಾ ಚೆನ್ನಾಗಿಲ್ಲ ಅಂದರೆ ಟಿಕೆಟ್ ದುಡ್ಡು ವಾಪಸ್ ಮಾಡಬಹುದೆ?'

'ಮೊನ್ನೆ ಕ್ರಿಕೆಟ್ ಮ್ಯಾಚ್ ರದ್ದಾದಾಗ ಟಿಕೆಟ್ ಹಣ ಪಾಪಸ್ ಮಾಡಿದ್ದು ನೆನಪಿದೆಯೆ?'

'ಮ್ಯಾಚ್ ಚೆನ್ನಾಗಿರಲಿಲ್ಲ ಅಂದರೂ ದುಡ್ಡು ವಾಪಸ್ ಮಾಡಬೇಕು ಅನ್ನೋ ಪರಿಸ್ಥಿತಿ ಬರಬೇಕು ನೋಡು' ಎಂದೆ.

'ಅದಿರಲೀರಿ. ಜ್ಯೋತಿಷಿ ಒಬ್ಬರು ಪರಿಹಾರ ಸಿಗದಿದ್ದರೆ ಗಿರಾಕಿಗೆ ಹಣ ಪಾಪಸ್ ಅಂತ ಜಾಹೀರಾತು ಹಾಕ್ತಾ ಇದಾರೆ ಟೀವೀಲಿ'.

'ಹೌದೆ? ಅಂದರೆ ಆ ಜ್ಯೋತಿಷೀಗೇ ಗೊತ್ತಿಲ್ಲ ತನ್ನ ಸಾಮರ್ಥ್ಯ ಎಷ್ಟು ಅಂತ...'

'ನಾಳೆ ಶಾಸಕರೊಬ್ಬರು ನಾನು ಕ್ಷೇತ್ರದಲ್ಲಿ ಒಳ್ಳೆ ಕೆಲಸ ಮಾಡಿದ್ದೇನೆ. ಚುನಾವಣೆ ಸಮಯದಲ್ಲಿ ನನಗೆ ವೋಟು ಹಾಕಿ ಅಂತ ನಿಮಗೆಲ್ಲ ಎರಡೆರಡು ಸಾವಿರ ಕೊಟ್ಟಿದ್ದೆನಲ್ಲಾ ಅದೆಲ್ಲಾ ವಾಪಸ್ ಮಾಡಿ ಎಂದು ಕೇಳಿದರೆ?'

'ಆ ಪರಿಸ್ಥಿತಿ ಖಂಡಿತ ಬರೊಲ್ಲ'.

ಸಂಗತ

ಪಡೆವ– ಕೊಡುವ ಕೈಗಳ ಕಾರುಣ್ಯ

ನಮ್ಮ ನಡುವಿನ ಇಂದಿನ ಎಲ್ಲಾ ತಾಕಲಾಟಗಳಿಗೆ 'ಕೊಡುವ' ಕಾರುಣ್ಯವೂ ಒಂದು ಔಷಧಿಯಾಗಬಹುದು

• ಸದಾಶಿವ್ ಸೊರಟೂರು

ಇಂದು ಜಗತ್ತಿನಲ್ಲಿ ನಮ್ಮ ನಡುವೆ ಬದುಕಿನ ಚೆಂದವೊಂದು ಬಾಡದೇ ಉಳಿದಿದೆ ಎಂದರೆ ಅದು ಎರಡು ಕಾರಣಕ್ಕೆ. ಒಂದು, ಸದ್ದಿಲ್ಲದೆ ಕೊಡುವ ಕೈಗಳಿಂದ. ಮತ್ತೊಂದು, ಪಡೆದ ಕೈಗಳು ಅದರ ದುಪ್ಪಟ್ಟಿನಷ್ಟು ಮತ್ತೊಬ್ಬರಿಗೆ ಕೊಡುವುದರಿಂದ. ನಮ್ಮೊಳಗೊಂದು ಹೀಗೆ ಪಡೆಯುವ ಮತ್ತು ಕೊಡುವ ಕಾರುಣ್ಯವು ಗುಪ್ತಗಾಮಿನಿಯಂತೆ ಹರಿಯುತ್ತಿರುವುದರಿಂದಲೇ ಜಗತ್ತಿನ ಹಲವು ಜನರ ಪಾಲಿಗೆ ಬದುಕು ಇಂದಿಗೂ ಬಾಳಲು ಸಹ್ಯ ಅನಿಸಿದೆ.

ಆದರೆ ಈಗೀಗ ಕೊಡುವುದು ಕೆಲವರಿಗೆ ಒಂದು ಪ್ರಚಾರ ತಂತ್ರವಾಗುತ್ತಿದೆ. ಪಡೆದ ಕೆಲವು ಮಂದಿ ಕೂಡ ಕೃತಘ್ನರಂತೆ ಉಳಿದು ಹೋಗುತ್ತಿರುವುದು ವಿಷಾದಕರ. 'ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ, ಏಡಿಸಿ ಕಾಡಿತ್ತು ಶಿವನ ಡಂಗುರ' ಎಂದ ಬಸವಣ್ಣನವರ ಮಾತು ನೆನಪಾಗುತ್ತದೆ. 'ಕೊಟ್ಟಿದ್ದು ಹೃದಯ ತುಂಬಬೇಕೇ ವಿನಾ ನೋಡುವವರ ಕಣ್ಣುಗಳನ್ನಲ್ಲ' ಅನ್ನುತ್ತಾರೆ ಗಾಂಧೀಜಿ.

ಕೋವಿಡ್ ಸಮಯದಲ್ಲಿ ಹಿಡಿ ಅನ್ನ ಕೊಟ್ಟು ಫೋಟೊ ತೆಗೆಸಿಕೊಂಡವರನ್ನು ನೆನೆದರೆ ಬೇಸರವಾಗುತ್ತದೆ. ಅನ್ನ ಹಿಡಿದವರ ಮುಖದಲ್ಲಿ ಕಾಣುತ್ತಿದ್ದ ಮುಜುಗರ ಕಂಡಾಗ ಸಂಕಟವಾಗುತ್ತಿತ್ತು. 'ನಾನು ಕೊಡ್ತಾ ಇದೀನಿ' ಅನ್ನುವ ಭಾವವೇ ಮನುಷ್ಯನಲ್ಲಿ ಅಹಂ ಅನ್ನು ತುಂಬುತ್ತದೆ. 'ನಾನೇನೋ ಮಾಡಿದೆ' ಅನ್ನುವ ಬದಲು 'ನಾನು ಅವರಿಗೆ ಏನಾದ್ರೂ ಮಾಡಬೇಕಲ್ಲ' ಅನ್ನುವ ಭಾವ ಆತನನ್ನು ವಿನೀತನನ್ನಾಗಿ ಮಾಡುತ್ತದೆ.

ಪ್ರತಿಯೊಬ್ಬ ಮನುಷ್ಯನೂ ನೂರಾರು ಋಣಗಳಲ್ಲಿ ಬದುಕುತ್ತಿದ್ದಾನೆ. ಆ ಋಣಗಳನ್ನು ತೀರಿಸುವೆ ಅನ್ನುವುದು ನಿಜಕ್ಕೂ ಹುಚ್ಚುತನ. ಅದಕ್ಕೆ ಕೃತಜ್ಞನಾಗಿರುವ ಮತ್ತು ಇಲ್ಲಿ ಪಡೆದದ್ದನ್ನು ಇಲ್ಲಿಯೇ ಹಂಚುವ ಪ್ರಯತ್ನವಾದರೂ ಆಗಬೇಕು. ರಕ್ತ ಕೊಟ್ಟು ಜೀವ ಉಳಿಸಿದವನ ಋಣವು ನಮ್ಮ ರಕ್ತವನ್ನು ಪೂರ್ತಿ ಬಸಿದು ದಾನ ಮಾಡಿದರೂ ತೀರುವಂಥದ್ದಲ್ಲ. ನಾವು ಅದಕ್ಕೆ ಕೃತಜ್ಞರಾಗಿ, ಆಮೇಲೆ ದಾನಕ್ಕೆ ನಿಂತರೆ ಅದು ನೂರಾರು ಜೀವಗಳನ್ನು ಉಳಿಸೀತು.

ತನ್ನಂತೆ ಇನ್ನೊಬ್ಬರು ಕೂಡ ಅನ್ನುವ ಭಾವವಿದೆಯಲ್ಲ ಅದು ಕಾರುಣ್ಯ ಸಮತೆ. ತನಗೆ ಯಾರೋ ಕೈಚಾಚಿದರು, ತಾನು ಕೂಡ ಯಾರಿಗೋ ಕೈಚಾಚಬೇಕು ಅನ್ನುವ ಯೋಚನೆ ಬಂದರೆ ಕೊಟ್ಟ ಕೈಗೆ ಒಂದು ಸಾರ್ಥಕತೆ. ಅದನ್ನು ಬುದ್ಧಕಾರುಣ್ಯವೆಂದು ಕರೆಯುತ್ತಾರೆ. ಕೊಟ್ಟಿದ್ದನ್ನು ಆ ಕ್ಷಣಕ್ಕೆ ಮರೆತುಬಿಡಬೇಕು. ಪಡೆದದ್ದನ್ನು ಅಷ್ಟೇ ಪ್ರೀತಿಯಿಂದ ಮತ್ತೊಬ್ಬರಿಗೆ ತಲುಪಿಸುವುದು ಶ್ರೇಷ್ಠವಾದದ್ದು ಎನ್ನುವ ಚಿಂತನೆ ಉದಾತ್ತವಾದುದು.

ಒಮ್ಮೆ ಪರಿಚಯವೇ ಇಲ್ಲದವರು ನಮ್ಮ ಶಾಲೆಗೆ ಬಂದು, ಎಲ್ಲಾ ಮಕ್ಕಳಿಗೂ ಅವರ ಕಲಿಕೆಗೆ ಬೇಕಾದ ವಸ್ತುಗಳನ್ನೆಲ್ಲಾ ಕೊಟ್ಟು, ಕನಿಷ್ಠ ಒಂದು ಫೋಟೊವನ್ನೂ ತೆಗೆಸಿಕೊಳ್ಳದೆ ಹೊರಟರು. 'ಕೊಡುವುದು ನಮಗೆ ಮತ್ತು ಪಡೆದವರಿಗೆ ಮಾತ್ರ ಗೊತ್ತಿದ್ರೆ ಸಾಕಲ್ವ ಸರ್' ಎಂದು ಹೇಳಿ 'ನಾವೇನೂ ಕೊಡ್ತಿಲ್ಲ ಸರ್, ನಾವು ಬಾಲ್ಯದಲ್ಲಿ ಯಾರದೋ ಸಹಾಯದಲ್ಲಿ ಓದಿದ್ವಿ, ಈಗ ಅದನ್ನು ಈಗಿನ ಮಕ್ಕಳಿಗೆ ತಲುಪಿಸ್ತಾ ಇದೀವಿ' ಎಂದು ಹೇಳಿ ಹೋದ ಆ ಯುವಕರ ಮಾತು, ಕೊಡುವುದೇ ಪ್ರಚಾರಕ್ಕಾಗಿ ಎಂದುಕೊಂಡಿರುವವರ ಕಣ್ಣು ತೆರೆಸುವಂತಿತ್ತು.

ಪ್ರತಿಯೊಬ್ಬರೂ ಒಂದೊಂದು ದ್ವೀಪವಾಗಿರುವ ಈ ಹೊತ್ತಿನಲ್ಲಿ ಮನುಷ್ಯ ಮನುಷ್ಯರನ್ನು ಬೆಸೆಯುವ ಕೆಲಸವಾಗಬೇಕು. ನಮ್ಮ ನಡುವಿನ ಇಂದಿನ ಈ ಎಲ್ಲಾ ತಾಕಲಾಟಗಳಿಗೆ 'ಕೊಡುವ' ಕಾರುಣ್ಯವೂ ಒಂದು ಔಷಧಿಯಾಗಬಹುದು. ತಾನು ಯಾವುದೋ ಋಣದಲ್ಲಿದ್ದೇನೆ ಎನ್ನುವ ಭಾವವೇ ವ್ಯಕ್ತಿಯನ್ನು ನಮ್ರಗೊಳಿಸುತ್ತದೆ. ಅದನ್ನು ಕಳೆದುಕೊಳ್ಳುವ ನೆವದಲ್ಲಾದರೂ ಅವನು ಇನ್ನೊಬ್ಬರಿಗೆ ಕೊಟ್ಟಾಗ ಪಡೆದವನಿಗೂ ಸಾರ್ಥಕತೆ, ಕೊಟ್ಟವನಿಗೂ ನೆಮ್ಮದಿ.



ಕಳೆದ ವಾರ ಕುಪ್ಪಳಿಗೆ ಹೊರಟಿದ್ದೆ. ಬೆಳಗಿನ ಬಸ್ಸು. ಕಂಡಕ್ಟರ್ ಬಳಿ ಚಿಲ್ಲರೆ ಇರಲಿಲ್ಲ. ನನ್ನ ಬಳಿಯೂ ಇರಲಿಲ್ಲ. ನನಗೆ ಎಂಟು ರೂಪಾಯಿ ಚಿಲ್ಲರೆಯ ಅವಶ್ಯಕತೆ ಇತ್ತು. ಪಕ್ಕದಲ್ಲಿ ಕೂತಿದ್ದ ತರುಣನ ಕಡೆ ನೋಡಿದೆ. ಅವನು ನನ್ನ ನೋಟದ ಸೂಕ್ಷ್ಮತೆ ಅರಿತವನಂತೆ 'ನನ್ನ ಬಳಿ ಇದೆ ಕೊಡ್ತೀನಿ ಸರ್' ಅಂದು ಎಂಟು ರೂಪಾಯಿ ತೆಗೆದುಕೊಟ್ಟ. ನಾನು ನಂತರ ಆ ಹಣವನ್ನು ಕಳುಹಿಸಲು ಅವನ ಬಳಿ ಮೊಬೈಲ್ ನಂಬರ್ ಕೇಳಿದೆ. 'ಪರವಾಗಿಲ್ಲ ಸರ್, ನೀವು ಆ ಹಣಾನ ಇನ್ಯಾರಿಗೊ ಅವಶ್ಯಕತೆ ಇದ್ದವರಿಗೆ ತಲುಪಿಸಿ' ಅಂದ. ಅವನಿಗೆ ಎಂಟು ರೂಪಾಯಿ ಮರಳಿಸಿಯೂ ನನ್ನ ಬಳಿ ಆ ಎಂಟು ರೂಪಾಯಿ ಬದಲಿಗೆ ನಾನು ಇನ್ನೊಬ್ಬರಿಗೆ ತೀರಿಸಬೇಕಾದ ಋಣ ಉಳಿಯಿತು.

ನಾನು ಎಂಟು ರೂಪಾಯಿಯನ್ನು ಮತ್ತೊಬ್ಬನಿಗೆ ಕೊಟ್ಟಾಗ, ಅವನು ಇನ್ನೊಬ್ಬನಿಗೆ ಕೊಟ್ಟಾಗ, ಆ ಇನ್ನೊಬ್ಬನು ಮಗದೊಬ್ಬನಿಗೆ ಕೊಟ್ಟಾಗ ಬರೀ ಈ ಎಂಟು ರೂಪಾಯಿ ಎಷ್ಟು ಜನರನ್ನು ಬೆಸೆಯಬಹುದು, ನೋಟ್ ಪುಸ್ತಕ ಪಡೆದ ಮಕ್ಕಳು ನಾಳೆ ಮತ್ತೊಬ್ಬರಿಗೆ ಕೊಟ್ಟಾಗ, ಅವರು ಇನ್ನೊಬ್ಬರಿಗೆ ಕೊಟ್ಟಾಗ ಹೇಗಿರಬಹುದು ಎಂಬ ಯೋಚನೆ ಕಾಡಿತು. ಹೀಗೆ ಪಡೆದು, ಕೊಡುವ ಈ ಕಾರುಣ್ಯದ ನದಿಯ ಹರಿವು ನಮ್ಮ ಹೃದಯಗಳಲ್ಲಿ ಹೆಚ್ಚಾಗಲಿ. ಪಡೆಯುವ ಕೈಗಳ ಕಾರುಣ್ಯ ನಮ್ಮನ್ನು ಪೊರೆಯಲಿ. ನಮ್ಮ ಬದುಕು ಎಂಬುದು ಬಾಳಲು ಮತ್ತಷ್ಟು ಸಹ್ಯವಾಗಲಿ.

ಲೇಖಕ: ಶಿಕ್ಷಕ, ಹೊನ್ನಾಳಿ

ವಾಚಕರ ವಾಣಿ

ಸಾಮರಸ್ಯ ಕದಡಲು ಕುಮ್ಮಕ್ಕು ನೀಡುವುದು ಬೇಡ

ದ್ವೇಷ ಭಾಷಣ ಮಾಡಿದ ಕೆಲವು ಹಿಂದೂ ಸಂಘಟನೆಗಳ ಪ್ರಮುಖರ ವಿರುದ್ಧ ದಾಖಲಾಗಿದ್ದ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ವರದಿಯಾಗಿದೆ. ಇದು, ದುರದೃಷ್ಟಕರ. ದ್ವೇಷ ಬಿತ್ತುವ ಭಾಷಣ ಮಾಡುವವರಿಗೆ ಇತ್ತೀಚಿನ ದಿನಗಳಲ್ಲಿ ಯಾವ ಭಯವೂ ಇಲ್ಲದಂತಾಗಿದೆ. ನಾಲಗೆ ಮೇಲೆ ನಿಯಂತ್ರಣವಿಲ್ಲದ ಭಾಷಣಕಾರರಿಗೆ ಸರ್ಕಾರದ ಈ ನಿರ್ಧಾರದಿಂದ ಮತ್ತಷ್ಟು ಉತ್ತೇಜನ ಸಿಕ್ಕಂತಾಗುತ್ತದೆ. ಹಾಗಾಗಿ ತನ್ನ ನಿರ್ಧಾರವನ್ನು ಸರ್ಕಾರ ಪುನರ್‌ಪರಿಶೀಲಿಸಬೇಕು.

ಇವರಷ್ಟೇ ಅಲ್ಲ, ವಿವಿಧ ಧರ್ಮಗಳ ಮುಖಂಡರು ಮತ್ತು ರಾಜಕಾರಣಿಗಳು ಕೂಡ ಇಂತಹದ್ದೇ ಭಾಷಣಗಳನ್ನು ಮಾಡಲಾರಂಭಿಸಿದ್ದಾರೆ. ದ್ವೇಷಪೂರಿತ ಹೇಳಿಕೆಗಳಿಂದಲೇ ಕೋಮು ಗಲಭೆಗಳು ನಡೆದು ಜನರ ಆಸ್ತಿ ಪಾಸ್ತಿ ನಷ್ಟವಾಗಿದ್ದಲ್ಲದೆ, ಕೊಲೆಗಳೂ ನಡೆದುಹೋಗಿವೆ. ಸಮಾಜದ ಶಾಂತಿ, ಸಾಮರಸ್ಯವನ್ನು ಕದಡುವ ಇಂತಹ ಭಾಷಣಕಾರರಿಗೆ ತಕ್ಕ ಶಿಕ್ಷೆ ಆಗದಿದ್ದರೆ ಸಮಾಜಕ್ಕೆ ಅಪಾಯ ಖಂಡಿತ. ಅದಕ್ಕೆ ಅವಕಾಶ ಕೊಡಬಾರದು.

ಅತ್ತಿಹಳ್ಳಿ ದೇವರಾಜ, ಹಾಸನ

ಮಂತ್ರಿಯಾದರೂ ಮುಟ್ಟಿಸಿಕೊಳ್ಳುವುದಿಲ್ಲ!

ನಮ್ಮ ಶಾಸಕ ಅಥವಾ ಮಂತ್ರಿಯೊಬ್ಬರಿಗೆ ಟೀ ಕುಡಿಯಲು ಕೊಡುವ ಸ್ಟೀಲ್‌ಲೋಟ ಎಷ್ಟೋ ಸಂದರ್ಭಗಳಲ್ಲಿ ಮತ್ತೆ ಮನೆ ಸೇರುವುದಿಲ್ಲ. ಶಾಸಕ ಅಥವಾ ಮಂತ್ರಿ ಹೊರಟ ನಂತರ, ಲೋಟವನ್ನು ಹೊರಕ್ಕೆ ಬಿಸಾಡಲಾಗುತ್ತದೆ. ಪೇಪರ್ ಲೋಟ ಕೊಡುವ ಪದ್ಧತಿಯೂ ಇದೆ. ಆದರೆ ಶಾಸಕರಿಗೆ ಮರ್ಯಾದೆ ತೋರಿಸಲೋಸುಗ ಸ್ಟೀಲ್‌ಗ್ಲಾಸ್‌ನಲ್ಲಿ ನೀಡಲಾಗುತ್ತದೆ. ಮೀಸಲು ಕ್ಷೇತ್ರಗಳ ಅನೇಕ ಶಾಸಕರನ್ನು ನಮ್ಮ ಜನ ನಡೆಸಿಕೊಳ್ಳುವುದೇ ಹೀಗೆ. ಕಡಿದಾಕಿದರೆ ವಾಸಿಯಾಗುವ ಕ್ಯಾನ್ಸರ್‌ಗಿಂತ ಜಾತಿಯ ಒಲವು ನಮ್ಮನ್ನು ಹಿಂಸಿಸುತ್ತಿಲ್ಲವೇ?

ದಲಿತನೊಬ್ಬ ಮಂತ್ರಿಗಿರಿಗೇರಿದರೂ ಅಸ್ಪೃಶ್ಯನಾಗೇ ಉಳಿದುಕೊಳ್ಳುತ್ತಾನೆ. ಈ ಸತ್ಯ ತಿಳಿದು ದಲಿತ ಜನಪ್ರತಿನಿಧಿಯು ಪ್ರಬಲ ಜಾತಿಯವರ ಮನೆಯ ಒಳಗೆ ಹೋಗುವುದಿಲ್ಲ. ಬದಲಾಗಿ, 'ಇಲ್ಲೇ ಗಾಳಿ ಚೆನ್ನಾಗಿದೆ' ಎಂದು ಜಗುಲಿಯಲ್ಲಿ ಕುಳಿತುಕೊಳ್ಳುತ್ತಾನೆ. ಹಾಗೊಮ್ಮೆ ಒಳಹೋದರೆ, ಅವ ಅಹಂಕಾರಿ ಎಂದು ಬಿಂಬಿತನಾಗುತ್ತಾನೆ. ತಮಿಳುನಾಡಿನ ಒಬ್ಬ ಬಾಲಕನಿಗೆ ಮಿಠಾಯಿ ನೀಡಲು ಅಂಗಡಿಯಾತ ನಿರಾಕರಿಸುವುದು ನಮ್ಮ ಮನಕಲಕುವುದಾದರೆ, ನಮ್ಮ ಜನಪ್ರತಿನಿಧಿಗಳನ್ನು ಜಾತಿಯ ಕಾರಣಕ್ಕೆ ನಾವು ಅವಮಾನಿಸುವ ರೀತಿಗೆ ತಲೆತಗ್ಗಿಸಿದರಷ್ಟೇ ಸಾಕೆ?

ಶಾಂತರಾಜು ಎಸ್., ಮಳವಳ್ಳಿ

ಬಹಿಷ್ಕಾರ ಹಾಕಲಿ, ಗಡಿಪಾರು ಮಾಡಲಿ

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಉಳ್ಳೇರಹಳ್ಳಿಯ ಗ್ರಾಮ ದೇವತೆಯ ಮೆರವಣಿಗೆಯ ಸಂದರ್ಭದಲ್ಲಿ ದೇವತೆಯ ಗುಜ್ಜುಕೋಲು ಮುಟ್ಟಿದನೆಂಬ ಕಾರಣಕ್ಕೆ, ಪರಿಶಿಷ್ಟ ಸಮುದಾಯಕ್ಕೆ ಸೇರಿದ ಒಬ್ಬ ಬಾಲಕನನ್ನು ಆ ಊರಿನ ಪ್ರಬಲ ಸಮುದಾಯಕ್ಕೆ ಸೇರಿದ ಕೆಲವರು ಹೊಡೆದಿರುವುದು ಮತ್ತು ಆತನ ಕುಟುಂಬಕ್ಕೆ ₹ 60 ಸಾವಿರ ದಂಡ ವಿಧಿಸಿ, ಬಹಿಷ್ಕಾರದ ಬೆದರಿಕೆ ಹಾಕಿರುವುದು ಖಂಡನೀಯ ಮತ್ತು ಅಮಾನವೀಯ. ಇದು ಆ ಪ್ರದೇಶದಲ್ಲಿ ಇನ್ನೂ ಜೀವಂತವಾಗಿರುವ ಊಳಿಗಮಾನ್ಯ ವ್ಯವಸ್ಥೆಯ ಪ್ರತೀಕ. ಇಂತಹ ಹೇಯ ಕೃತ್ಯಕ್ಕೆ ಕಾರಣರಾದವರೆಲ್ಲರಿಗೆ ತಲಾ ₹ 60 ಸಾವಿರ ದಂಡ ಮತ್ತು ಆ ಊರಿನಿಂದ ಕನಿಷ್ಠ 6 ವರ್ಷಗಳ ಕಾಲ ಗಡಿಪಾರು ಮಾಡಬೇಕು.

ಇಂಥ ನೀಚ ಕೃತ್ಯಗಳು ನಡೆಯದಂತೆ ಎಚ್ಚರ ವಹಿಸಬೇಕು. ಈ ನಾಡಿನ, ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವೈಚಾರಿಕ ಚಳವಳಿಯ ಅಗತ್ಯ ಇದೆ ಎಂಬುದನ್ನು ಈ ಘಟನೆ ಪರೋಕ್ಷವಾಗಿ ಬಿಂಬಿಸುತ್ತದೆ. ಬಸವಣ್ಣ, ಕನಕದಾಸ, ಕುವೆಂಪು ಅವರಂಥ ದಾರ್ಶನಿಕ ವ್ಯಕ್ತಿತ್ವವುಳ್ಳವರು ಹುಟ್ಟಿರುವ ನಮ್ಮ ಕನ್ನಡ ನಾಡಿನಲ್ಲಿ ಇಂಥ ಬಾಲಿಶ ಹಾಗೂ ಅಸಹನೀಯ ಘಟನೆಗಳು ಸಂಭವಿಸದಂತೆ ಕಾರ್ಯಕ್ರಮಗಳನ್ನು ರೂಪಿಸುವುದು ನಾಡಿನ ಎಲ್ಲ ವೈಜ್ಞಾನಿಕ, ವೈಚಾರಿಕ ಮನೋಭಾವವುಳ್ಳವರ ಆದ್ಯ ಕರ್ತವ್ಯವಾಗಿದೆ.

ಹೊರೆಯಾಲ ದೊರೆಸ್ವಾಮಿ, ಮೈಸೂರು

ಪಡಿತರ ಅಕ್ಕಿ ಹೀಗೆಲ್ಲಾ ದುರುಪಯೋಗವಾಗುತ್ತಿದೆ!

ಬಡವರು ಆಹಾರದ ಕೊರತೆಯಿಂದ ಬಳಲಬಾರದು ಎಂಬ ಸದುದ್ದೇಶದಿಂದ ಜಾರಿಗೆ ತಂದ ಪಡಿತರ ಧಾನ್ಯ ವಿತರಣಾ ವ್ಯವಸ್ಥೆಯು ಅವ್ಯವಸ್ಥೆಯ ಆಗರವಾಗಿದೆ. ಇಲ್ಲಿ ಲಂಚಗುಳಿತನ, ಭ್ರಷ್ಟಾಚಾರ ಹಾಸುಹೊಕ್ಕಿದೆ. ಪಡಿತರ ವಿತರಕನಿಂದ ಹಿಡಿದು ಆಹಾರ ಇಲಾಖೆಯ ಬಹುತೇಕ ನೌಕರರು ತಮ್ಮ ಶಕ್ತಿ ಅನುಸಾರ ಭ್ರಷ್ಟಾಚಾರದಲ್ಲಿ ಮುಳುಗಿರುವವರೇ. ಕನಿಷ್ಠ ಏಳು ಕೆ.ಜಿಯಿಂದ, ಕ್ವಿಂಟಲ್‌ಗಿಂತಲೂ ಹೆಚ್ಚಿನ ಪ್ರಮಾಣದ ಅಕ್ಕಿಯನ್ನು ಪ್ರತೀ ತಿಂಗಳು ಪಡೆಯುವ ಬಿಪಿಎಲ್ ಕಾರ್ಡ್‌ದಾರ ಕುಟುಂಬಗಳು ನಮ್ಮಲ್ಲಿ ಇವೆ. ಅಷ್ಟು ಅಕ್ಕಿಯನ್ನು ಉಪಯೋಗಿಸಲಾಗದೆ ಬೇರೆಯವರಿಗೆ ಮಾರುವುದನ್ನು ನಾವು ಕಾಣುತ್ತೇವೆ.


ಅಷ್ಟೇ ಏಕೆ, ಇತ್ತೀಚೆಗೆ ಒಂದು ಹೊಸ ವ್ಯವಸ್ಥೆಯನ್ನು ಪಡಿತರ ವಿತರಕರೇ ಜಾರಿಗೆ ತಂದಿದ್ದಾರೆ ಎಂಬ ಮಾತು ಜನಜನಿತವಾಗಿದೆ. ಪಡಿತರ ಬೇಡವೆಂದ ಕಾರ್ಡುದಾರರಿಗೆ ಪ್ರತೀ ಕೆ.ಜಿ ಅಕ್ಕಿಗೆ ₹ 11ರಂತೆ ಹಣ ಸಂದಾಯ ಮಾಡಲಾಗುತ್ತದೆ. ಅಂದರೆ ಒಂದು ಕುಟುಂಬ ನೂರು ಕೆ.ಜಿ ಅಕ್ಕಿ ಪಡೆಯುತ್ತಿದ್ದರೆ, ಅಕ್ಕಿಯ ಬದಲಾಗಿ ₹ 1,100 ಪಡೆಯುತ್ತದೆ. ಪಡಿತರ ವಿತರಕ ಆ ಅಕ್ಕಿಯನ್ನು ಮಧ್ಯವರ್ತಿಗಳಿಗೆ ಕೆ.ಜಿಗೆ ₹ 13ರಂತೆ ಮಾರಿಕೊಳ್ಳುತ್ತಾನೆ.

ಅಲ್ಲದೆ, ಅಕ್ಕಿಯು ಮಧ್ಯವರ್ತಿಗಳ ಮುಖಾಂತರ ಹೊರ ರಾಜ್ಯಗಳಿಗೂ ರವಾನೆಯಾಗುತ್ತದೆ. ಸಾಮಾನ್ಯವಾಗಿ ಓಣಿಗಳಿಗೆ ತರಕಾರಿ, ಹಣ್ಣು ಹಂಪಲು, ದವಸ ಧಾನ್ಯಗಳನ್ನು ಹೊತ್ತು ತಂದು ಮಾರಾಟ ಮಾಡುವವರನ್ನು ಕಾಣುತ್ತೇವೆ. ಆದರೆ ಇತ್ತೀಚೆಗೆ ಮನೆಮನೆಗೆ ಬಂದು ಪಡಿತರ ಅಕ್ಕಿಯನ್ನು ಕೆ.ಜಿಗೆ ₹ 12 ಅಥವಾ ₹ 13ರಂತೆ ಖರೀದಿಸುವುದನ್ನು ಕಾಣುತ್ತೇವೆ. ಸರ್ಕಾರ ಲೇವಿ ಮುಖಾಂತರ ರೈತರಿಂದ ಸಂಗ್ರಹಿಸಿದ ಅಕ್ಕಿ ಈ ರೀತಿ ದುರುಪಯೋಗ ಆಗುತ್ತಿರುವುದು ದುರದೃಷ್ಟಕರ.

ಎಸ್.ಎ.ತಾಂಬೇ, ವಿಜಯಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅದಾನಿ ಸಂಪತ್ತು 15 ಪಟ್ಟು ಏರಿಕೆ



ಪ್ರಜಾವಾಣಿ ವಾರ್ತೆ

ಉದ್ಯಮಿ ಗೌತಮ್ ಅದಾನಿ ಅವರ ಸಂಪತ್ತು ಐದು ವರ್ಷಗಳಲ್ಲಿ 15 ಪಟ್ಟು ಹೆಚ್ಚಾಗಿದೆ ಎನ್ನುತ್ತದೆ 'ಐಐಎಫ್‌ಎಲ್ ವೆಲ್ತ್ ಹುರೂನ್ ಇಂಡಿಯಾ ರಿಚ್ ಲಿಸ್ಟ್ 2022' ವರದಿ. 2018ರಲ್ಲಿ ₹71,000 ಕೋಟಿಯಷ್ಟಿದ್ದ ಅದಾನಿಯ ಸಂಪತ್ತು 2022ರಲ್ಲಿ ₹10.94 ಲಕ್ಷಕ್ಕೆ ಏರಿಕೆಯಾಗಿದೆ. ಈ ಅವಧಿಯಲ್ಲಿ ದೇಶದ ಯಾವ ಉದ್ಯಮಿಯ ಸಂಪತ್ತೂ ಈ ಮಟ್ಟದಲ್ಲಿ ಏರಿಕೆಯಾಗಿಲ್ಲ. ಕೋವಿಡ್ ಅವಧಿಯಲ್ಲಿ ದೇಶದ ಬಹುತೇಕ ಉದ್ಯಮಿಗಳ ಸಂಪತ್ತು ನಿರೀಕ್ಷಿತ ಮಟ್ಟದಲ್ಲಿ ಏರಿಕೆಯಾಗಿಲ್ಲ. ಆದರೆ, ಅದಾನಿ ಅವರ ಸಂಪತ್ತು ಮಾತ್ರ ಭಾರಿ ಪ್ರಮಾಣದಲ್ಲಿ ಏರಿಕೆ ಕಂಡಿದೆ.

ಕೇಂದ್ರ ಸರ್ಕಾರವು ಅದಾನಿ ಸಮೂಹಕ್ಕೆ ಅನುಕೂಲವಾಗುವಂತೆ ನೀತಿಗಳನ್ನು ರಚಿಸುತ್ತಿದೆ ಎಂದು ವಿರೋಧ ಪಕ್ಷಗಳು ಪದೇ-ಪದೇ ಆರೋಪ ಮಾಡಿವೆ. ಈಗ ರದ್ದಾಗಿರುವ, ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದ ಕೃಷಿ ಕಾಯ್ದೆಗಳನ್ನು ಅದಾನಿಗೆ ಅನುಕೂಲವಾಗಲಿ ಎಂದೇ ರೂಪಿಸಲಾಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು. ಈ ಬಗ್ಗೆ ಅದಾನಿ ಸಮೂಹವೂ ಸ್ಪಷ್ಟನೆ ನೀಡಿದ್ದು, ಈ ಆರೋಪಗಳನ್ನು ನಿರಾಕರಿಸಿದೆ.

20ಕ್ಕೂ ಹೆಚ್ಚು ಸ್ವರೂಪದ ಉದ್ದಿಮೆಗಳನ್ನು ಅದಾನಿ ಸಮೂಹವು ನಡೆಸುತ್ತಿದೆ. ಆದರೆ, ಇವುಗಳಲ್ಲಿ ಬಹುತೇಕ ಉದ್ದಿಮೆಗಳು ಕೇಂದ್ರ ಸರ್ಕಾರದ ನೂತನ ನೀತಿಗಳಿಗೆ ಪೂರಕವಾಗಿ ಆರಂಭವಾಗಿವೆ ಅಥವಾ ಉದ್ದಿಮೆಯನ್ನು ವಿಸ್ತರಿಸಿವೆ. ಸೌರ ವಿದ್ಯುತ್ ಮತ್ತು ಪವನ ವಿದ್ಯುತ್ ಉತ್ಪಾದನೆಗೆ ಕೇಂದ್ರ ಸರ್ಕಾರವು ಈಚಿನ ವರ್ಷಗಳಲ್ಲಿ ಆದ್ಯತೆ ನೀಡಿದೆ.

₹1.88 ಲಕ್ಷ ಕೋಟಿ ಸಾಲ

2022ರ ಮಾರ್ಚ್ ವೇಳೆಗೆ ಅದಾನಿ ಸಮೂಹದ ಒಟ್ಟು ಸಾಲವು ₹ 1.88 ಲಕ್ಷ ಕೋಟಿ ಆಗಿತ್ತು, ನಿವ್ವಳ ಸಾಲವು ₹ 1.61 ಲಕ್ಷ ಕೋಟಿ ಎಂದು ಸಮೂಹವೇ ಹೇಳಿಕೊಂಡಿದೆ.

ಇದರ ಭಾಗವಾಗಿ ಪಾವಗಡ ಸೌರವಿದ್ಯುತ್ ಪಾರ್ಕ್ ಅನ್ನು ಸ್ಥಾಪಿಸಲಾಯಿತು. ಅದನ್ನು ಅದಾನಿ ಸಮೂಹವು ಸ್ಥಾಪಿಸಿದೆ. ದೇಶದ 12 ರಾಜ್ಯಗಳಲ್ಲಿ ಇಂತಹ ಪಾರ್ಕ್ ಮತ್ತು ಸೌರವಿದ್ಯುತ್ ಉತ್ಪಾದನಾ ಘಟಕಗಳನ್ನು ಅದಾನಿ ಸಮೂಹ ಹೊಂದಿದೆ. ದೇಶದ ಅತ್ಯಂತ ದೊಡ್ಡ ಸೌರವಿದ್ಯುತ್ ಉತ್ಪಾದನಾ ಕಂಪನಿ ಎನಿಸಿದೆ.

ಅದಾನಿ ಅವರ ಅಣ್ಣ ವಿನೋದ್ ಶಾಂತಿಲಾಲ್ ಅದಾನಿ ಅವರು ಟೆಕ್ಸ್‌ಟೈಲ್ಸ್ ಮೂಲಕ ಉದ್ಯಮ ಆರಂಭಿಸಿದ್ದರು. ಅನಿವಾಸಿ ಭಾರತೀಯ (ಎನ್‌ಆರ್‌ಐ) ಶ್ರೀಮಂತರ ಪೈಕಿ ಈಗ ಅವರು ಅಗ್ರ ಸ್ಥಾನದಲ್ಲಿದ್ದಾರೆ. 2018ರಲ್ಲಿ ಇವರ ಸಂಪತ್ತು ₹17,800 ಕೋಟಿಯಿತ್ತು. ಈಗ ಅದು ₹1.69 ಲಕ್ಷ ಕೋಟಿಗೆ ತಲುಪಿದ್ದು, ಸರಿಸುಮಾರು 10 ಪಟ್ಟು ಜಿಗಿದಿದೆ.

ಇಂಧನದಿಂದ ಬಂದರಿನವರೆಗೆ ಅದಾನಿ

ಅದಾನಿ ಸಮೂಹದ ಉದ್ದಿಮೆಗಳ ಕುರಿತು ಮಾತನಾಡುವಾಗ 'ಇಂಧನದಿಂದ ಬಂದರಿನವರೆಗೆ' ಎಂದು ಹೇಳಲಾಗುತ್ತದೆ. ಅದಾನಿ ಸಮೂಹದ ಉದ್ಯಮಗಳ ವ್ಯಾಪ್ತಿಯನ್ನು ಈ ಮಾತು ಸೂಚಿಸುತ್ತದೆ. ದೇಶದ ಆರ್ಥಿಕತೆಯಲ್ಲಿ ಅದಾನಿ ಸಮೂಹದ ಕಂಪನಿಗಳು ಪ್ರಮುಖವಾಗಿ ಆರು ವಲಯಗಳಲ್ಲಿ ವಹಿವಾಟು ನಡೆಸುತ್ತಿವೆ. ಈ ಆರೂ ವಲಯಗಳಲ್ಲಿ ಅದಾನಿ ಅವರ ಕಂಪನಿಗಳು ಒಟ್ಟು 20 ಸ್ವರೂಪದ ಉದ್ಯಮಗಳನ್ನು ನಡೆಸುತ್ತಿವೆ. ಕೆಲವು ಸ್ವರೂಪದ ಉದ್ಯಮಗಳಲ್ಲಿ ದೇಶದ ಬೇರೆ ಸಮೂಹಗಳು ಮತ್ತು ಸರ್ಕಾರಿ ಸಂಸ್ಥೆಗಳಿಗಿಂತ ಅದಾನಿ ಸಮೂಹವು ಹೆಚ್ಚು ಮಾರುಕಟ್ಟೆ ಪಾಲು ಹೊಂದಿದೆ. ಇನ್ನು ಕೆಲವು ಸ್ವರೂಪದ ಉದ್ದಿಮೆಗಳಲ್ಲಿ ಅದಾನಿ ಸಮೂಹವು ಏಕಸ್ವಾಮ್ಯ ಸಾಧಿಸಿದೆ

1. ಇಂಧನ

- **ನವೀಕರಿಸಬಹುದಾದ ಇಂಧನ:** ಅದಾನಿ ಸಮೂಹವು ದೇಶದ ಹಲವೆಡೆ ಸೌರಪಾರ್ಕ್‌ಗಳನ್ನು ಹೊಂದಿದೆ. ಅದಾನಿ ಸಮೂಹದ ಒಡೆತನದ ಸೌರಪಾರ್ಕ್‌ಗಳು ಮತ್ತು ಪವನ ವಿದ್ಯುತ್ ಘಟಕಗಳು ದೇಶದ 12 ರಾಜ್ಯಗಳಲ್ಲಿ ಹರಡಿವೆ
- ಅದಾನಿ ಸಮೂಹವು ಸೌರಶಕ್ತಿ ಫಲಕಗಳ ತಯಾರಿಕಾ ಘಟಕಗಳನ್ನೂ ಹೊಂದಿದೆ. ಈ ಘಟಕಗಳಲ್ಲಿ ತಯಾರಾಗುವ ಸೌರ-ಫಲಕಗಳನ್ನು ತನ್ನದೇ ಸೌರಪಾರ್ಕ್‌ಗಳಿಗೆ ಅದಾನಿ ಸಮೂಹದ ಕಂಪನಿ ಪೂರೈಸುತ್ತದೆ. ಸ್ವಲ್ಪ ಪ್ರಮಾಣದ ಸೌರಫಲಕಗಳನ್ನು ರಫ್ತು ಮಾಡಲಾಗುತ್ತದೆ. ದೇಶೀಯವಾಗಿ ತಯಾರಿಸಲಾಗುವ ಸೌರಫಲಕಗಳಿಗೆ ಉತ್ತೇಜನ ನೀಡುವ ಸಲುವಾಗಿ ಕೇಂದ್ರ ಸರ್ಕಾರವು ಆಮದು ಸೌರ ಫಲಕಗಳ ಮೇಲಿನ ಆಮದು ಸುಂಕವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಿತ್ತು

114 ಗಿಗಾವಾಟ್
ದೇಶದ ನವೀಕರಿಸಬಹುದಾದ ಇಂಧನ ಉತ್ಪಾದನೆ ಸಾಮರ್ಥ್ಯ

20 ಗಿಗಾವಾಟ್
ಅದಾನಿ ಸಮೂಹದ ನವೀಕರಿಸಬಹುದಾದ ಇಂಧನ ಉತ್ಪಾದನೆ ಸಾಮರ್ಥ್ಯ

- **ವಿದ್ಯುತ್ ಸರಬರಾಜು:** ಗ್ರಿಡ್‌ನಿಂದ ಗ್ರಿಡ್ ವಿದ್ಯುತ್ ಸರಬರಾಜು ಕ್ಷೇತ್ರದಲ್ಲೂ ಅದಾನಿ ಸಮೂಹದ ಪಾಲು ದೊಡ್ಡದಿದೆ. ಭಾರತದ ನೆರೆಯ ದೇಶಗಳಿಗೂ ಭಾರತದಿಂದ ವಿದ್ಯುತ್ ಪೂರೈಸುವ ಗ್ರಿಡ್ ಜಾಲವನ್ನು ಅದಾನಿ ಸಮೂಹವು ಹೊಂದಿದೆ. 2021ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬ್ರಿಟನ್‌ನ ಸಹಭಾಗಿತ್ವದಲ್ಲಿ ಅಂತರರಾಷ್ಟ್ರೀಯ ಸೌರವಿದ್ಯುತ್ ಗ್ರಿಡ್ ಜಾಲ ಯೋಜನೆಗೆ ಚಾಲನೆ ನೀಡಿದ್ದರು
- **ಎಲ್‌ಪಿಜಿ ವಿತರಣೆ:** ಟೋಟಲ್ ಗ್ಯಾಸ್ ಲಿಮಿಟೆಡ್ ಅದಾನಿ ಸಮೂಹದ ದೊಡ್ಡ ಕಂಪನಿಗಳಲ್ಲಿ ಒಂದು. ದೇಶದ ಗೃಹ ಬಳಕೆ ಎಲ್‌ಪಿಜಿ, ವಾಣಿಜ್ಯ ಬಳಕೆ ಮತ್ತು ಆಟೊ ಎಲ್‌ಪಿಜಿ ಕ್ಷೇತ್ರದಲ್ಲಿ ಈ ಕಂಪನಿಯು ದೊಡ್ಡ ಪಾಲು ಹೊಂದಿದೆ
- **ಉಷ್ಣ ವಿದ್ಯುತ್ ಸ್ಥಾವರ:** ಕಲ್ಲಿದ್ದಲು ಆಧರಿತ ಉಷ್ಣ ವಿದ್ಯುತ್ ಉತ್ಪಾದನಾ ಘಟಕಗಳನ್ನೂ ಅದಾನಿ ಸಮೂಹ ಹೊಂದಿದೆ. ಇಂತಹ ಏಳು ಘಟಕಗಳನ್ನು ಅದಾನಿ ಸಮೂಹ ಹೊಂದಿದ್ದು, ಇವು ಒಟ್ಟು 12,500 ಮೆಗಾವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿವೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸುವ ದೇಶದ ಏಕೈಕ ಕಂಪನಿ ಇದಾಗಿದೆ
- **ಗಣಿ:** ಕಲ್ಲಿದ್ದಲು ಗಣಿಗಳನ್ನೂ ಅದಾನಿ ಸಮೂಹ ಹೊಂದಿದೆ. ದೇಶದಲ್ಲಿ ಉತ್ಪಾದನೆಯಾಗುವ ಒಟ್ಟು ಕಲ್ಲಿದ್ದಲಿನಲ್ಲಿ ಅದಾನಿ ಸಮೂಹದ ಉತ್ಪಾದನೆಯ ಪಾಲು ಶೇ 12ಕ್ಕಿಂತಲೂ ಹೆಚ್ಚು

2. ಸಾರಿಗೆ ಮತ್ತು ಗೋದಾಮು

- **ಬಂದರುಗಳು:** ಅದಾನಿ ಸಮೂಹದ ಅದಾನಿ ಲಾಜಿಸ್ಟಿಕ್ಸ್ ಕಂಪನಿಯು ದೇಶದಾದ್ಯಂತ ಒಟ್ಟು 11 ಬಂದರುಗಳನ್ನು ನಿರ್ವಹಿಸುತ್ತಿದೆ. ದೇಶದಲ್ಲಿ 13 ದೊಡ್ಡ ಬಂದರುಗಳು ಮತ್ತು 187 ಕಿರು ಬಂದರುಗಳು ಇವೆ. 13 ದೊಡ್ಡ ಬಂದರುಗಳಲ್ಲಿ ಅದಾನಿ ಸಮೂಹದ ಮುಂದ್ರಾ ಬಂದರು ಸಹ ಒಂದು
- **ರಸ್ತೆ ಸಾರಿಗೆ:** ಬಂದರು ಮತ್ತು ಕೈಗಾರಿಕಾ ಪ್ರದೇಶಗಳ ಮಧ್ಯೆ ಸರಕುಸಾಗಣೆಗಾಗಿ ಅದಾನಿ ಸಮೂಹವು ಟ್ರಕ್‌ಗಳ ಅತ್ಯಂತ ದೊಡ್ಡ ಜಾಲವನ್ನು ಹೊಂದಿದೆ
- **ರೈಲು ಸಾರಿಗೆ:** ಬಂದರಿನಿಂದ ಕೈಗಾರಿಕಾ ಪ್ರದೇಶಗಳು ಮತ್ತು ವಿಶೇಷ ಆರ್ಥಿಕ ವಲಯಗಳಿಗೆ ರೈಲು ಸಂಪರ್ಕ ಕಲ್ಪಿಸುವ ಉದ್ಯಮವನ್ನೂ ಅದಾನಿಸ್ ಲಾಜಿಸ್ಟಿಕ್ಸ್ ಮಾಡುತ್ತಿದೆ. ಈ ಕಂಪನಿಯು 300 ಕಿ.ಮೀ. ಉದ್ದದ ಖಾಸಗಿ ರೈಲುಮಾರ್ಗವನ್ನು ಹೊಂದಿದೆ
- **ವಿಶೇಷ ಆರ್ಥಿಕ ವಲಯ:** ಗುಜರಾತ್‌ನಲ್ಲಿ ಅದಾನಿ ಸಮೂಹವು ವಿಶೇಷ ಆರ್ಥಿಕ ವಲಯವನ್ನು ಹೊಂದಿದೆ. 15,000 ಹೆಕ್ಟೇರ್ ವಿಸ್ತೀರ್ಣದಷ್ಟಿದೆ
- **ಕೃಷಿ ಉತ್ಪನ್ನ ಗೋದಾಮುಗಳು:** ಉಕ್ಕಿನ ಸಿಲೊ (ಸಂಗ್ರಹಾಗಾರ) ಇರುವ ಗೋದಾಮುಗಳನ್ನು ಅದಾನಿ ಲಾಜಿಸ್ಟಿಕ್ಸ್ ಸಮೂಹವು ನಿರ್ವಹಿಸುತ್ತಿದೆ. ದೇಶದಲ್ಲಿ ಇಂತಹ ಗೋದಾಮುಗಳು ಇರಲಿಲ್ಲ. ಕೇಂದ್ರ ಸರ್ಕಾರವು ಈಚೆಗಷ್ಟೇ ಇಂತಹ ಗೋದಾಮುಗಳನ್ನು ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸುವ ಯೋಜನೆಯನ್ನು ಆರಂಭಿಸಿತು. ಈ ಯೋಜನೆ ಅಡಿ ಈಗ ಸ್ಥಾಪಿಸಲಾಗಿರುವ ಎಲ್ಲ ಗೋದಾಮುಗಳೂ ಅದಾನಿ ಸಮೂಹಕ್ಕೆ ಸೇರಿದ್ದಾಗಿವೆ.

5.5 ಲಕ್ಷ ಟನ್
ದೇಶದಲ್ಲಿರುವ ಉಕ್ಕಿನ ಸಿಲೊ ಗೋದಾಮುಗಳ ಸಂಗ್ರಹ ಸಾಮರ್ಥ್ಯ. ಅಷ್ಟೂ ಗೋದಾಮುಗಳನ್ನು ಅದಾನಿ ಸಮೂಹ ಸ್ಥಾಪಿಸಿದೆ

3. ಮೂಲಸೌಕರ್ಯ ಮತ್ತು ತಂತ್ರಜ್ಞಾನ

- **ರಕ್ಷಣೆ ಮತ್ತು ವಿಮಾನಯಾನ:** ಡ್ರೋನ್, ವಿಮಾನ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲೂ ಅದಾನಿ ಸಮೂಹವು ನೇರವಾಗಿ ಹೂಡಿಕೆ ಮಾಡಿದೆ
- **ವಿಮಾನ ನಿಲ್ದಾಣಗಳು:** ದೇಶದ ಆರು ಪ್ರಮುಖ ವಿಮಾನ ನಿಲ್ದಾಣಗಳ ನಿರ್ವಹಣೆಯ ಹೊಣೆಯನ್ನು ಅದಾನಿ ಸಮೂಹ ಹೊತ್ತಿದೆ. ವಿಮಾನ ನಿಲ್ದಾಣಗಳನ್ನು ಖಾಸಗಿ ನಿರ್ವಹಣೆಗೆ ನೀಡುವ ನೀತಿಯನ್ನು ಕೇಂದ್ರ ಸರ್ಕಾರವು ರೂಪಿಸಿದ್ದು ಇದೇ ಮೊದಲ ಬಾರಿ. ಹೀಗೆ ಖಾಸಗಿ ಕಂಪನಿಗೆ ಬಿಟ್ಟುಕೊಡಲಾದ ಎಲ್ಲಾ ವಿಮಾನ ನಿಲ್ದಾಣಗಳೂ ಈಗ ಅದಾನಿ ಸಮೂಹದ ತೆಕ್ಕೆಯಲ್ಲಿವೆ
- **ನೀರು ಶುದ್ಧೀಕರಣ:** ನದಿಗಳ ದಂಡೆಯಲ್ಲಿರುವ ನಗರಗಳ ಕೊಳಚೆ ನೀರನ್ನು ಸಂಸ್ಕರಿಸಿ, ಶುದ್ಧನೀರನ್ನು ನದಿಗೆ ಬಿಡುವ ಹಲವು ಘಟಕಗಳನ್ನು ಅದಾನಿ ಸಮೂಹ ನಡೆಸುತ್ತಿದೆ. ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲೂ ಅದಾನಿ ಸಮೂಹವು ಇಂತಹ ಹಲವು ಘಟಕಗಳನ್ನು ನಿರ್ವಹಿಸುತ್ತಿದೆ
- **ಹೆದ್ದಾರಿ-ಮೆಟ್ರೊ ನಿರ್ಮಾಣ:** ಹೆದ್ದಾರಿ ಮತ್ತು ಮೆಟ್ರೊ ರೈಲು ಮಾರ್ಗಗಳ ನಿರ್ಮಾಣದಲ್ಲೂ ಅದಾನಿ ಸಮೂಹವು ತೊಡಗಿಕೊಂಡಿದೆ
- **ಡೇಟಾ ಸೆಂಟರ್‌ಗಳು:** ಅದಾನಿ ಸಮೂಹದ 'ಅದಾನಿ ಕನೆಕ್ಸ್' ಕಂಪನಿಯು ದೇಶದ ಹಲವೆಡೆ ದತ್ತಾಂಶ ಕೇಂದ್ರಗಳನ್ನು ನಡೆಸುತ್ತಿದೆ
- **ರಿಯಲ್ ಎಸ್ಟೇಟ್:** ರಿಯಲ್ ಎಸ್ಟೇಟ್ ಕ್ಷೇತ್ರದಲ್ಲೂ ಅದಾನಿ ಸಮೂಹ ಹೂಡಿಕೆ ಮಾಡಿದೆ

4. ಸಿಮೆಂಟ್: ಸಿಮೆಂಟ್ ತಯಾರಿಕೆ ಕ್ಷೇತ್ರದಲ್ಲೂ ಅದಾನಿ ಸಮೂಹ ಹೂಡಿಕೆ ಮಾಡಿದೆ. ಅಂಬುಜಾ ಸಿಮೆಂಟ್ ಮತ್ತು ಅಸೋಸಿಯೇಟೆಡ್ ಸಿಮೆಂಟ್ ಕಂಪನಿಗಳಲ್ಲಿ (ಎಸಿಸಿ) ಅದಾನಿ ಸಮೂಹವು ಗರಿಷ್ಠ ಪ್ರಮಾಣದ ಷೇರುಗಳನ್ನು ಹೊಂದಿದೆ


5. ಖಾದ್ಯತೈಲ: ಅದಾನಿ ವಿಲ್ಮಾರ್ ಕಂಪನಿಯು ದೇಶದ ಅತ್ಯಂತ ದೊಡ್ಡ ಖಾದ್ಯತೈಲ ಕಂಪನಿಗಳಲ್ಲಿ ಒಂದು. ಫಾರ್ಚೂನ್ ಬ್ರ್ಯಾಂಡ್‌ನ ವಿವಿಧ ಅಡುಗೆ ಎಣ್ಣೆಗಳನ್ನು ಈ ಕಂಪನಿ ಉತ್ಪಾದಿಸುತ್ತದೆ. ಹಲವು ವರ್ಷಗಳ ಅವಧಿಯಲ್ಲಿ ದೇಶದ ಸಣ್ಣ–ಪುಟ್ಟ ಬ್ರ್ಯಾಂಡ್‌ಗಳನ್ನು ಅದಾನಿ ವಿಲ್ಮಾರ್ ಖರೀದಿಸಿದೆ. ದೇಶದ ಅಡುಗೆ ಎಣ್ಣೆ ಮಾರುಕಟ್ಟೆಯಲ್ಲಿ ಅದಾನಿ ವಿಲ್ಮಾರ್ ಕಂಪನಿಯ ಪಾಲು ಶೇ 18.8ರಷ್ಟಿದೆ.

6. ಫೈನಾನ್ಸ್: ಅದಾನಿ ಸಮೂಹದ 'ಅದಾನಿ ಕ್ಯಾಪಿಟಲ್' ಕಂಪನಿಯು ಬ್ಯಾಂಕೇತರ ಹಣಕಾಸು ಸಂಸ್ಥೆಯಾಗಿದೆ. ಈ ಕಂಪನಿಯು ದೊಡ್ಡ ಉದ್ದಿಮೆಗಳು, ಎಂಎಸ್‌ಎಂಇಗಳಿಗೆ ಸಾಲ ಕೊಡುವ ಸೇವೆಯನ್ನು ನೀಡುತ್ತದೆ. ಅದಾನಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಗೃಹ ಸಾಲ ಸೇವೆಯನ್ನು ನೀಡುತ್ತದೆ

ಶ್ರೀಮಂತರ ಸಂಪತ್ತು ಏರಿಕೆ

ಎರಡನೇ ಶ್ರೀಮಂತ ಮುಕೇಶ್ ಅಂಬಾನಿ ಐದು ವರ್ಷಗಳ ಹಿಂದೆ ₹3.71 ಲಕ್ಷ ಕೋಟಿ ಆಸ್ತಿಯ ಮಾಲೀಕರಾಗಿದ್ದರು. ಈಗ ಅವರ ಸಂಪತ್ತಿನ ಮೌಲ್ಯ ದ್ವಿಗುಣಗೊಂಡಿದೆ. ಕೋವಿಡ್ ತಡೆ ಲಸಿಕೆಗಳನ್ನು ಪೂರೈಸಿದ್ದ ಸೀರಂ ಇನ್‌ಸ್ಟಿಟ್ಯೂಟ್‌ನ ಸೈರಸ್ ಪೂನಾವಾಲಾ ಅವರ ಕುಟುಂಬದ ಆಸ್ತಿಯು ಐದು ವರ್ಷಗಳಲ್ಲಿ 3 ಪಟ್ಟು ಹೆಚ್ಚಿದೆ. ಸಾಫ್ಟ್‌ವೇರ್ ಉದ್ಯಮಿ ಶಿವ ನಾಡಾರ್ ಆಸ್ತಿ 5 ಪಟ್ಟು ಏರಿದ್ದು, ಅವರು ಈಗ ₹1.85 ಲಕ್ಷ ಕೋಟಿ ಸಂಪತ್ತಿನ ಒಡೆಯ. ಡಿಮಾರ್ಟ್ ಮಳಿಗೆ ಸಂಸ್ಥಾಪಕ ರಾಧಾಕೃಷ್ಣ ದಮಾನಿ ಸಂಪತ್ತು ಸರಿಸುಮಾರು 4 ಪಟ್ಟು ಏರಿದೆ. ಉದ್ಯಮಿಗಳಾದ ಲಕ್ಷ್ಮಿ ಮಿತ್ತಲ್, ದಿಲೀಪ್ ಸಂಘವಿ, ಉದಯ್ ಕೋಟಕ್ ಅವರ ಆಸ್ತಿ ಮೌಲ್ಯ ಐದು ವರ್ಷಗಳಲ್ಲಿ ಸರಿಸುಮಾರು ₹40 ಸಾವಿರ ಕೋಟಿಯಷ್ಟು ಏರಿದೆ. ಆದರೆ, ಶ್ರೀಮಂತರ ಪೈಕಿ ಅತಿಕಡಿಮೆ ಏರಿಕೆ (₹7 ಸಾವಿರ ಕೋಟಿ) ದಾಖಲಿಸಿರುವುದು ಎಸ್.ಪಿ ಹಿಂದೂಜಾ ಕುಟುಂಬ ಮಾತ್ರ.


ಅಗ್ರ ಹತ್ತು ಶ್ರೀಮಂತರಲ್ಲಿ ಅದಾನಿಯದ್ದೇ ಸಿಂಹಪಾಲು



- ಹುರೂನ್ ಇಂಡಿಯಾ ಪ್ರಕಟಿಸಿರುವ ಶ್ರೀಮಂತರ ಪಟ್ಟಿಯಲ್ಲಿ ಗೌತಮ್ ಅದಾನಿ ಹಾಗೂ ಮುಕೇಶ್ ಅಂಬಾನಿ ಅವರು ಮೊದಲ ಎರಡು ಸ್ಥಾನಗಳನ್ನು ಪಡೆದಿದ್ದಾರೆ. ಹತ್ತು ಸಿರಿವಂತರ ಒಟ್ಟಾರೆ ಸಂಪತ್ತಿನ ಪೈಕಿ ಶೇ 60ರಷ್ಟು ಸಂಪತ್ತು ಈ ಇಬ್ಬರು ಶ್ರೀಮಂತರಲ್ಲೇ ಕ್ರೋಡೀಕೃತವಾಗಿದೆ

ಆಧಾರ: ಐಐಎಫ್‌ಎಲ್ ವೆಲ್ತ್ ಹುರೂನ್ ಇಂಡಿಯಾ ರಿಚ್ ಲಿಸ್ಟ್ 2022 ವರದಿ, ಅದಾನಿ ಸಮೂಹ ಸಂಸ್ಥೆಗಳ ಜಾಲತಾಣ, ಪಿಟಿಐ, ರಾಯಿಟರ್ಸ್, ಕೇಂದ್ರ ಇಂಧನ ಸಚಿವಾಲಯ ಮತ್ತು ಕೇಂದ್ರ ಕೃಷಿ ಸಚಿವಾಲಯದ ಪ್ರಕಟಣೆಗಳು

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು



ರಾಜ್ಯ ಸರ್ಕಾರದ ಭ್ರಷ್ಟಾಚಾರ ಕುರಿತು ಜಾಗೃತಿಗೆ ಕಾಂಗ್ರೆಸ್ ಪಕ್ಷ ಕೈಗೊಂಡಿರುವ ಪೇಸಿಎಂ ಮತ್ತು ಕ್ಯೂ ಆರ್ ಕೋಡ್ ಅಭಿಯಾನ 2023ರಲ್ಲಿ ಬಿಜೆಪಿ ಗೆಲುವಿಗೆ ತೊಡಕಾಗಲಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 231

ಅಭಯ ನೀಡಿದ ಶಿವ

'ಓ ಪರಮಾತ್ಮ, ರತೀದೇವಿಗೆ ನೀನು ಕೊಟ್ಟ ವರವು ನೆರವೇರುವ ಕಾಲ ಈಗ ಬಂದಿದೆ. ರತಿಗೆ ಕೊಟ್ಟ ನಿನ್ನ ಪ್ರತಿಜ್ಞೆಯನ್ನು ಸಫಲವನ್ನಾಗಿ ಮಾಡಲು, ನೀನು ಯಾವಾಗ ಪಾರ್ವತಿಯನ್ನು ಮದುವೆ ಆಗುತ್ತೀಯಾ ತಿಳಿಸು' ಎಂದು ಹೇಳಿದ ದೇವತೆಗಳು, ಶಿವನಿಗೆ ನಮಿಸಿ ನಮ್ರರಾಗಿ ನಿಂತರು. ಶಂಕರ ಹೇಳಿದ: 'ದೇವತೆಗಳೇ, ನಾನು ವಿವೇಕದ ಮಾತನ್ನು ಹೇಳುವೆನು. ಕೇಳಿರಿ. ಮನುಷ್ಯ ವಿವಾಹವಾಗುವುದು ಒಳ್ಳೆಯದಲ್ಲ. ವಿವಾಹವು ಮನುಷ್ಯನ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಹುದು. ಅದು ದುಃಖದಾಯಕವಾದ ಬಲವಾದ ಬಂಧನ ಸರಪಣಿ. ಸ್ತ್ರೀ ಎಂಬ ಸರಪಣಿಯಿಂದ ಬಿಡಿಸಿಕೊಳ್ಳಲು ಸಾಧ್ಯವೇ ಇಲ್ಲ.

'ಸ್ತ್ರೀ ಸಂಬಂಧದಿಂದ ಸಂಸಾರ ಬಂಧನ ಉಂಟು ಮಾಡುವ ಶಬ್ದ, ಸ್ಪರ್ಶ ಮೊದಲಾದ ವಿಷಯಗಳಲ್ಲಿ ಅಭಿಲಾಷೆಯು ಹೆಚ್ಚಾಗುವುದು. ಆ ರೀತಿಯ ವಿಷಯಸುಖಗಳಲ್ಲೇ ನಿರತರಾದವರಿಗೆ ಸ್ವಪ್ನದಲ್ಲಿಯೂ ಮೋಕ್ಷ ಸಿಗಲಾರದು. ಸುಖ ಬೇಕೆಂದಿದ್ದರೆ ಹಂತ ಹಂತವಾಗಿ ವಿಷಯ ಸುಖಗಳನ್ನು ಬಿಟ್ಟುಬಿಡಬೇಕು. ವಿಷಯಗಳು ವಿಷದಂತೆ – ಎಂದು ತಿಳಿದವರು ಹೇಳುವರು. ಅಂತಹ ವಿಷಯಗಳನ್ನು ಸೇವಿಸುವವನು ವಿಷ ಕುಡಿದವನಂತೆ ಅಧೋಗತಿಗೆ ಇಳಿಯುವನು. ಕಾಮುಕನಾದ ಮನುಷ್ಯನೊಂದಿಗೆ ಮಾತನಾಡಿದವರೂ ಹಾಳಾಗುವರು. ವಿಷಯ ಸುಖಗಳು ಸಕ್ಕರೆಯನ್ನು ಸೇರಿಸಿದ ಸಿಹಿ ಮದ್ಯದಂತೆ ಎಂದು ತಿಳಿದವರು ಹೇಳುವರು. ಇದೆಲ್ಲವನ್ನೂ ನಾನು ಚೆನ್ನಾಗಿ ತಿಳಿದಿರುವೆನು.

'ಎಲೈ ದೇವತೆಗಳೇ, ಆದರೂ ನಿಮ್ಮೆಲ್ಲರ ಕಷ್ಟ ನಿವಾರಣೆಗಾಗಿ ನಿಮ್ಮ ಕೋರಿಕೆ ಸಫಲವಾಗುವಂತೆ ಮಾಡುವೆ. ನಾನು ಭಕ್ತರಿಗೆ ಅಧೀನನಾದ ಕಾರಣ, ಭಕ್ತರಿಗಾಗಿ ನನಗಿಷ್ಟವಾಗದಂತಹ ಹಲವು ಕಾರ್ಯಗಳನ್ನು ಮಾಡಿದ್ದೇನೆ. ಅವೆಲ್ಲ ಜಗತ್ತಿನಲ್ಲಿ ಪ್ರಸಿದ್ಧವಾಗಿವೆ. ಕಾಮರೂಪದೇಶದ ರಾಜನಾದ ಸುದಕ್ಷಿಣ ಭೂಪತಿಯು ನರಕಾಸುರನ ಸೆರೆಗೆ ಸಿಕ್ಕಿದ್ದ. ಅವನು ನನ್ನ ಭಕ್ತನಾದ ಕಾರಣ ಸೆರೆಯಿಂದ ಬಿಡಿಸಿದೆ. ಗೌತಮಮುನಿಯ ದುಃಖವನ್ನು ಹೋಗಲಾಡಿಸಿ ಸುಖವನ್ನುಉಂಟುಮಾಡಿದ್ದೆ. ಅವನಿಗೆ ಕಷ್ಟಕೊಟ್ಟ ದುಷ್ಟರಿಗೆ ಶಾಪ ಕೊಟ್ಟು ಶಿಕ್ಷಿಸಿದ್ದೆ.


'ಭಕ್ತವತ್ಸಲನಾದ ನಾನು ದೇವತೆಗಳಿಗಾಗಿ ಸಮುದ್ರಮಥನದ ಕಾಲದಲ್ಲಿ ವಿಷವನ್ನು ಕುಡಿದೆ. ಮಿಕ್ಕ ಕಾಲಗಳಲ್ಲಿ ದೇವತೆಗಳಿಗೆ ಬಂದಂತಹ ಕಷ್ಟಗಳನ್ನೆಲ್ಲಾ ಹೋಗಲಾಡಿಸಿರುವೆ. ಭಕ್ತರಿಗಾಗಿ ಅನೇಕ ಬಾರಿ ನನಗಾದ ದುಃಖವನ್ನು ಸಹಿಸಿದ್ದೇನೆ. ಗೃಹಸ್ಥನಾಗಿ ವಿಶ್ವಾನರ ಎಂಬ ಮುನಿಯ ಕಷ್ಟವನ್ನು ಹೋಗಲಾಡಿಸಿದ್ದೇನೆ. ಹೀಗೆ ಹಲವು ಘಟನೆಗಳಿವೆ. ಅವುಗಳನ್ನೆಲ್ಲ ಈಗ ಹೇಳಿ ಏನು ಪ್ರಯೋಜನ?

'ಒಟ್ಟಿನಲ್ಲಿ ನಿಮ್ಮ ದುಃಖವನ್ನು ಹೋಗಲಾಡಿಸಲು ಪ್ರತಿಜ್ಞೆ ಮಾಡಿರುವೆ. ಆ ಬಗ್ಗೆ ನಿಮಗೆ ಯಾವ ಸಂಶಯವೂ ಬೇಡ. ನನ್ನ ಭಕ್ತರಿಗೆ ವಿಪತ್ತುಗಳು ಯಾವಾಗ ಬಂದರೂ ಆ ಕೂಡಲೇ ನಾನು ವಿಪತ್ತುಗಳ ವಿರುದ್ಧ ಹೋರಾಡುವೆ. ನಿಮ್ಮೆಲ್ಲರಿಗೂ ತಾರಕಾಸುರನಿಂದ ದುಃಖವು ಬಂದಿರುವುದೆಂಬುದು ನನಗೆ ತಿಳಿದಿದೆ. ಆ ನಿಮ್ಮ ದುಃಖವನ್ನು ಹೋಗಲಾಡಿಸುವೆನು.

'ನನಗೆ ಮದುವೆ ಮಾಡಿಕೊಳ್ಳಲು ಇಷ್ಟವೇ ಇಲ್ಲ. ಆದರೂ ನಿಮ್ಮ ಕಷ್ಟ ಪರಿಹಾರಕ್ಕಾಗಿ ಗಿರಿಜೆಯನ್ನು ಮದುವೆಯಾಗುವೆ. ನಿಮ್ಮ ಕಾರ್ಯವನ್ನು ಸಾಧಿಸುವೆ. ಇನ್ನು ಚಿಂತೆಯನ್ನು ಮಾಡಬೇಡಿರಿ.'

ಹೀಗೆಂದು ಮತ್ತೆ ಧ್ಯಾನದಲ್ಲಿ ಕುಳಿತ. ಶಿವನ ಮಾತಿನಿಂದ ಸಮಾಧಾನಿತರಾದ ದೇವತೆಗಳೆಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಇಲ್ಲಿಗೆ ಶ್ರೀಶಿವಮಹಾಪುರಾಣದ ಪಾರ್ವತೀಖಂಡದಲ್ಲಿ ಇಪ್ಪತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಹೊಸತನವೆ ಬಾಳು

ಹೊಸತನವೆ ಬಾಳು; ಹಳಸಿಕೆಯೆಲ್ಲ ಸಾವು ಬಿಡು |
ರಸವು ನವನವತೆಯಿಂದನು ದಿನವು ಹೊಮ್ಮಿ ||
ಹಸನೊಂದು ನುಡಿಯಲ್ಲಿ ನಡೆಯಲ್ಲಿ ನೋಟದಲಿ |
ಪಸರುತಿರೆ ಬಾಳ್ ಚೆಲುವು – ಮಂಕುತಿಮ್ಮ || 720 ||

ಪದ-ಅರ್ಥ: ಹಳಸಿಕೆಯೆಲ್ಲ ಹಳಸಿಕೆ(ಹಿಂದಾದದ್ದು) + ಎಲ್ಲ, ನವನವತೆಯಿಂದನುದಿನವು = ನವನವತೆಯಿಂದ + ಅನುದಿನವು(ಪ್ರತಿದಿನ), ಹಸನೊಂದು = ಸ್ವಚ್ಛತೆಯೊಂದು, ಪಸರುತಿರೆ = ಹರಡುತ್ತಿದ್ದರೆ.

ವಾಚ್ಯಾರ್ಥ: ಹೊಸದಾಗಿರುವುದೆ ಬಾಳು, ಹಳೆಯದ್ದೆಲ್ಲ ಸತ್ತು ಹೋಗಿದೆ ಬಿಡು. ನಮ್ಮ ನುಡಿಯಲ್ಲಿ, ನಡೆಯಲ್ಲಿ, ನೋಟದಲ್ಲಿ ಹೊಸತನ ದಿನದಿನವೂ ಹೊಮ್ಮಿದರೆ ಆನಂದದ ರಸ ಹೊಮ್ಮಿ ಹರಡಿ, ಬಾಳು ಚೆಲುವಾಗುತ್ತದೆ.

ವಿವರಣೆ: ಚಂದೂ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ. ಅವನು ಕಿವಿಗೆ ಒಂದು ಪುಟ್ಟ ಯಂತ್ರವನ್ನು ಹಾಕಿಕೊಂಡು ಮೊಬೈಲ್‌ನಲ್ಲಿದ್ದ ಹಾಡನ್ನೋ, ಉಪನ್ಯಾಸವನ್ನೋ ಕೇಳುತ್ತ ಸಂತೋಷವಾಗಿ ಕುಳಿತಿದ್ದ. ಅವನನ್ನು ನೋಡಿದರೆ ಅವನಷ್ಟು ಸುಖಪುರುಷ ಪ್ರಪಂಚದಲ್ಲೇ ಯಾರೂ ಇಲ್ಲ ಎನ್ನಿಸುತ್ತಿತ್ತು. ಸ್ವಲ್ಪ ಹೊತ್ತಿನ ನಂತರ ಸುತ್ತಮುತ್ತ ಕುಳಿತವರೊಡನೆ ಮಾತುಕತೆ ಪ್ರಾರಂಭವಾಯಿತು. ಎಲ್ಲದರಲ್ಲೂ ಚಂದೂವಿನ ನಗೆ, ಸಂತೋಷ ಹರಡುತ್ತಿತ್ತು. ಅಜ್ಜಿಯೊಬ್ಬರು ಹೇಳಿದರು,

"ನೀನು ಪುಣ್ಯವಂತನಪ್ಪಾ, ಒಬ್ಬನೇ ಹಾಯಾಗಿದ್ದೀಯಾ. ನಾವೆಲ್ಲ ಸಂಸಾರ ಕಟ್ಟಿಕೊಂಡು ಒದ್ದಾಡತಾ ಇದ್ದೇವೆ. ನಮ್ಮ ಕಷ್ಟಗಳು ಮುಗಿಯುವುದೇ ಇಲ್ಲ". ಉಳಿದವರೂ ಅದೇ ಮಾತನ್ನು ಧ್ವನಿಸಿದರು. ಆಗ ಚಂದೂ ಹೇಳಿದ, "ಸ್ವಾಮಿ, ಸಂತೋಷ, ಸುಖಗಳನ್ನು ಯಾರೂ ತಟ್ಟೆಯಲ್ಲಿಟ್ಟು ಕೊಡುವುದಿಲ್ಲ. ನಮಗೆ ಬಂದದ್ದರಲ್ಲಿ ಅದನ್ನು ಕಂಡುಕೊಳ್ಳಬೇಕು". ಉಳಿದ ಪ್ರಯಾಣಿಕರು, "ಅಯ್ಯಾ, ನಿನಗೆ ಯಾವ ತೊಂದರೆ ಇಲ್ಲದೆ ಚೆನ್ನಾಗಿದ್ದೀಯಾ ಎಂದು ಹೀಗೆ ಹೇಳುತ್ತೀ. ನಮ್ಮ ಕಷ್ಟ ನಮಗೇ ಗೊತ್ತು" ಎಂದಾಗ ಚಂದೂ ನಕ್ಕು, ಕಿವಿಯಲ್ಲಿಯ ಯಂತ್ರವನ್ನು ತೆಗೆದಿಟ್ಟು, ನಿಧಾನವಾಗಿ ಬಗ್ಗಿ ತನ್ನ ಪ್ಯಾಂಟನ್ನು ಮೇಲಕ್ಕೇರಿಸಿದ. ಅವನ ಎರಡೂ ಕಾಲುಗಳು ಕೃತ್ರಿಮ, ಮರದ ಕಾಲುಗಳು! ಎಲ್ಲರೂ ಬೆಚ್ಚಿದರು. ಚಂದೂ ಹೇಳಿದ, "ಸ್ನೇಹಿತರೇ ನಾನು ಕಾಶ್ಮೀರದ ಬಾರಾಮುಲ್ಲಾ ಪ್ರದೇಶದಲ್ಲಿ ಕೆಲಸ ಮಾಡುವಾಗ ಉಗ್ರಗಾಮಿಗಳು ದಾಳಿ ಮಾಡಿದರು. ನಾನು ಭಾರತೀಯ ಸೈನಿಕರಿಗೆ ಸಹಾಯ ಮಾಡಲೆಂದು ಮನೆಯ ಹಿಂಭಾಗಕ್ಕೆ ಬಂದಾಗ ಉಗ್ರಗಾಮಿಗಳು ಎಸೆದ ಬಾಂಬು ನನ್ನ ಕಾಲಡಿಯಲ್ಲಿ ಸ್ಫೋಟಗೊಂಡವು. ಆಗ ನನ್ನೆರಡೂ ಕಾಲುಗಳು ಕತ್ತರಿಸಿ ಹೋಗುವುದರೊಂದಿಗೆ ನನ್ನ ಜೊತೆಗಿದ್ದ ಪ್ರಿಯ ಪತ್ನಿ ಮತ್ತು ಮಕ್ಕಳಿಬ್ಬರೂ ಸತ್ತು ಹೋದರು. ನಾನೀಗ ಏಕಾಂಗಿ. ಆದರೆ ಹಿಂದಾಗಿ ಹೋದದ್ದಕ್ಕೆ ಕೊರಗಿದರೆ ಅವರು ಮರಳಿ ಬರುತ್ತಾರೆಯೆ? ಅದಕ್ಕೆ ನಾನು ಭಗವಂತ ನೀಡಿದ್ದೇ ಸರಿಯಾಗಿದೆ ಎಂದು ಹಿಂದಿನದನ್ನು ಮರೆಯಲು ಪ್ರಯತ್ನಿಸುತ್ತ ನಾಳಿನ ದಿನವನ್ನು ಸಂತೋಷದಿಂದ ಎದುರು ನೋಡುತ್ತಿದ್ದೇನೆ". ಎಲ್ಲರೂ ತಣ್ಣಗಾದರು. ಅವನ ಕಷ್ಟಗಳ ಮುಂದೆ ತಮ್ಮದು ಏನೂ ಅಲ್ಲ. ಇದೇ ಸುಂದರ ಬದುಕಿನ ಗುಟ್ಟು. ಅದನ್ನೇ ಕಗ್ಗ ಹೇಳುತ್ತದೆ ಪ್ರತಿಕ್ಷಣವೂ ಹೊಸತಾಗುವುದೆ ಬಾಳು. ಹಿಂದಾಗಿ ಹೋದದ್ದೆಲ್ಲ ಬರೀ ಸಾವು. ಅದು ಮತ್ತೆಂದೂ ಮರಳಿ ಬರಲಾರದು. ಆದ್ದರಿಂದ ನಮ್ಮ ನಡೆಯಲ್ಲಿ, ನುಡಿಯಲ್ಲಿ, ನೋಟದಲ್ಲಿ ಸ್ವಚ್ಛತೆ ಇದ್ದು, ಸದಾ ಹೊಸದನ್ನು, ಸುಂದರವಾದದ್ದನ್ನು ಕಾಣಲು ಪ್ರಯತ್ನಿಸಿದರೆ ನವನವತೆಯ ರಸ ಪ್ರತಿದಿನ ಹೊಮ್ಮಿ ಬದುಕನ್ನು ಸಹ್ಯವಾಗಿ, ಸುಂದರವಾಗಿ ಮಾಡುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಸೆಪ್ಟೆಂಬರ್ 22, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ದ್ವಾದಶಿ ಗಂ. 25-18 ನಕ್ಷತ್ರ: ಆಶ್ಲೇಷ ಗಂ. 26-03 ಯೋಗ: ಶಿವ ಗಂ. 09-44, ಕರಣ: ಕೌಲವ ಗಂ. 12-30, ಕನ್ಯಾ ಮಾಸದ 05 ನೇ ದಿನ.
ರಾಹುಕಾಲ : ಮಧ್ಯಾಹ್ನ 01:30 – 03:00 ಸೂರ್ಯೋದಯ : 06-23 ಸೂರ್ಯಾಸ್ತ : 06-23 ಮುಸ್ಲಿಂ ದಿನಾಂಕ : 25 ಸಫರ್
ದಿನ ವಿಶೇಷ : ಯತಿಮಹಾಲಯ
ಅದೃಷ್ಟ ಸಂಖ್ಯೆ: 5, 12

ಮೇಷ: ಜೀವನದ ಯಾವುದೇ ರಂಗದಲ್ಲಾದರೂ ನಿಮ್ಮ ಬಯಕೆಗೆ ತಕ್ಕಂತೆ ದೂರ ಕ್ರಮಿಸುವ ಸಾಮರ್ಥ್ಯ ನಿಮ್ಮಲ್ಲಿರುವುದು ಮತ್ತು ಈ ದಿನ ಮಾರ್ಗ ಗೋಚರವಾಗುವುದು. ರಾಜಕೀಯಕ್ಕೆ ಪ್ರವೇಶಿಸಲು ಆಹ್ವಾನ ಸಿಗಲಿದೆ.

ವೃಷಭ: ಹಳೆಯ ಘಟನೆಗಳ ಮೂಲಕ ಪಾಠ ಕಲಿಯುವುದು, ನೆನಪಿನಲ್ಲಿ ಇಟ್ಟುಕೊಳ್ಳುವುದು ಬುದ್ಧಿವಂತರ ಲಕ್ಷಣ. ಅಕ್ಕಪಕ್ಕದವರ ಟೀಕೆಯನ್ನೂ ಶಾಂತ ಮನಸ್ಸಿನಿಂದ ಸ್ವೀಕರಿಸಿ ಯಾವುದೇ ಪ್ರತಿಕ್ರಿಯೆ ನೀಡಬೇಡಿ.

ಮಿಥುನ: ಭಾವನೆಗಳ ಬದಲು ವಾಸ್ತವದತ್ತ ಗಮನ ಹರಿಸಬೇಕಾಗುತ್ತದೆ. ಸಾಲ ತೀರಿಸುವ ಬಗ್ಗೆ ಚಿಂತೆ ಕಾಡುವುದು. ಹೆಂಡತಿಯ ಆರೋಗ್ಯದ ವಿಚಾರವಾಗಿ ವೈದ್ಯರಲ್ಲಿ ಸಮಾಲೋಚನೆ ನಡೆಸಬೇಕಾಗಬಹುದು.

ಕರ್ಕಾಟಕ: ಆಲಸ್ಯದಿಂದಾಗಿ ವಿದ್ಯಾಭ್ಯಾಸದಲ್ಲಿ, ಕಲಿಕೆಯಲ್ಲಿ ಹಿನ್ನಡೆ ಉಂಟಾಗುವುದು. ಮಾನಸಿಕವಾಗಿ ಅಸಮತೋಲನದ ಅನುಭವ ಆಗುವುದು. ನಿಮ್ಮ ಮೂರ್ಖತನದಿಂದಾಗಿ ಬಂಧು- ಬಾಂಧವರು ದೂರವಾಗುವ ಸಂಭವವಿದೆ.

ಸಿಂಹ: ಜಗತ್ತಿನ ಬೆಳವಣಿಗೆಯ, ಚಲನೆಯ ವೇಗಕ್ಕೆ ನಿಮ್ಮ ರೀತಿನೀತಿಗಳು, ಚಲನವಲನಗಳು ಕಡಿಮೆಯಾಗಿರುವ ಅನುಭವ ಕಾಡಲಿದೆ. ಮಾನಸಿಕ ಧೈರ್ಯ, ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಧ್ಯಾನ ಮಾರ್ಗದಲ್ಲಿ ಸಂಚರಿಸಿ.

ಕನ್ಯಾ: ಉದ್ಯೋಗದಲ್ಲಿ ನಷ್ಟದಂತಹ ಸಮಸ್ಯೆ ಎದುರಾದರೇ, ಧೃತಿಗೆಡುವ ಅಗತ್ಯವಿಲ್ಲ. ತಂದೆಯಿಂದ ನಿಮ್ಮ ವೃತ್ತಿಗೆ ಸಹಾಯ ದೊರಕುತ್ತದೆ. ವ್ಯವಸ್ಥಿತವಾದ ಹಾಗೂ ತಂತ್ರಗಾರಿಕೆ ಹೊಂದಿರುವ ಯೋಜನೆಗಳಿಂದ ಆರ್ಥಿಕ ಲಾಭ.

ತುಲಾ: ಚಾಂಚಲ್ಯ ಮನಸ್ಸಿನಿಂದ ಕೆಟ್ಟ ಯೋಚನೆಗಳು ಬರಲಿದೆ. ಮಾನಸಿಕ ದೌರ್ಬಲ್ಯ ಕಾಡೀತು. ಕೌಟುಂಬಿಕವಾದ ವಿಚಾರದಲ್ಲಿ ಇನ್ನೊಬ್ಬರ ಮಾತನ್ನು ಕೇಳಿ ಪರಾಮರ್ಶಿಸದೇ ವಿವೇಚನೆಯನ್ನು ಕಳೆದುಕೊಳ್ಳಬೇಡಿ.

ವೃಶ್ಚಿಕ: ವಿದೇಶದಲ್ಲಿನ ಹುದ್ದೆಗಾಗಿ ಅರ್ಜಿ ಸಲ್ಲಿಸಬಹುದು. ಹಿರಿಯರ ಆಸೆಯಂತೆ ಹೊಸ ಆಸ್ತಿಯನ್ನು ಕೊಳ್ಳುವ ಅವಕಾಶ ಸಿಗಲಿದೆ. ಅಲಂಕಾರಿಕ ವಸ್ತುಗಳ ರಫ್ತು ಮಾರಾಟಗಾರರು ಹೆಚ್ಚಿನ ಅನುಕೂಲವನ್ನು ಪಡೆಯುವರು.

ಧನು: ಪ್ರಾಣಮಿತ್ರರ ಸಹಕಾರದಿಂದ ಜೀವನ ಮಟ್ಟದಲ್ಲಿ ಉನ್ನತ ಸ್ಥಾನವನ್ನು ಮುಟ್ಟುವುದಕ್ಕೆ ಸಹಾಯವಾಗುವುದು. ತಂದೆ ಮಕ್ಕಳ ಸಂಬಂಧ ಗಾಢವಾಗಿರುವುದು. ದಾಂಪತ್ಯ ಜೀವನದಲ್ಲಿ ಮಧುರ ಬಾಂಧವ್ಯ ವೃದ್ಧಿ.

ಮಕರ: ವಾಣಿಜ್ಯ ರಂಗದಲ್ಲಿ ಹೊಸ ತಿರುವು ಮೂಡಲಿದೆ. ಕೋರ್ಟು ಕಚೇರಿಯ ಕೆಲಸ ಕಾರ್ಯಗಳು ಅನುಕೂಲಕ್ಕೆ ತಕ್ಕಂತೆ ನಡೆಯುತ್ತದೆ. ಸಂತಾನ ಅಪೇಕ್ಷಿಗಳಿಗೆ ಶುಭ ಸುದ್ದಿ ಪ್ರಾಪ್ತಿಯಾಗುವುದು.

ಕುಂಭ: ಈ ದಿನ ಕಚೇರಿ ಕೆಲಸಗಳಲ್ಲಿ ನಿರ್ದಿಷ್ಟವಾದ ಕಾರ್ಯಸೂಚಿಯನ್ನು ಹಾಕಿಕೊಳ್ಳಿ ಮತ್ತು ಅಧಿಕ ಸಮಯ ನೀಡಿ. ಇದರಿಂದ ನಿಮ್ಮ ಗುರಿಯನ್ನು ತಲುಪಲು ನೆರವಾಗುವುದು

ಮೀನ: ವಿದ್ಯಾರ್ಥಿಗಳಿಗೆ ಪಠ್ಯದ ವಿಚಾರಕ್ಕಿಂತ ಪಠ್ಯೇತರ ವಿಚಾರದಲ್ಲಿ ಆಸಕ್ತಿ ಮೂಡಲಿದೆ. ಉಪಹಾರ ಗೃಹಗಳಿಂದ ಅಧಿಕವಾದ ಲಾಭವನ್ನು ಪಡೆಯುವಿರಿ. ಅಪರೂಪದ ಸ್ನೇಹಿತನ ಭೇಟಿ ಸಂತೋಷ ಮೂಡಿಸುತ್ತದೆ.

ಪದಬಂಧ 5087


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅತ್ಯಂತ ಸರಾಗವಾದ ಹಂಚಿಕೆ (5)
4.ವಿಪುಲವಾಗಿ ಆಗಿರುವ ಕ್ಷೋಭೆಯೇ? (3)
5.ವತ್ಸನ ಮೇಲೆ ಯಾಕಿಷ್ಟು ದ್ವೇಷ? (3)
6.ಹತಾರು ಹಿಡಿದಿದ್ದರೂ ನಿರಾಶೆ! (3)
8.ರಾಕ್ಷಸರ ಶಿಲ್ಪಿ (2)
9.ಬಾಳೆಕುಡಿ ಕತ್ತರಿಸುವ ಕಿರುಗತ್ತಿ (2)
11.ಮಂದಿ ಹೊಕ್ಕಿರುವ ಗುಡಿ (3)
14.ಜನರ ನಡುವೆಯೇ ನುಗ್ಗಿರುವ ಆಳು (3)
15.ಅವನಿರುವ ಭೂಮಿ (3)
16.ಹಳೆದನ್ನು ಹೊಸದು ಮಾಡುವಿಕೆ (5)

ಮೇಲಿಂದ ಕೆಳಕ್ಕೆ

1.ಚನ್ನಾಗಿ ಸಜ್ಜುಗೊಂಡದ್ದು (4)
2.ಜನರು ಕುಳಿತಿರುವ ಊಟದ ಮನೆ (5)
3.ಯಮನ ಹತ್ತಿರ ಕಾಣಿಸಿಕೊಂಡಿರುವ ಜೋಡಿ (3)
4.ಪ್ರೇಮಿಗಳ ಅಗಲಿಕೆಯ ನೋವು (3)
7.ದಿನಾಂಕವನ್ನು ಹೀಗೆನ್ನಿ (3)
8.ಬಿಡದಿಗೆ ಬಂದಿರುವ ಪತ್ನಿ (3)
9.ಲಾಂಗೂಲ ಹಿಡಿದು ಹಿಂಬಾಲಕ ಬಂದಿಹನಲ್ಲಾ! (5)
10.ಅತೀ ಬುದ್ಧಿವಂತ (4)
12.ಜನನಿಯನ್ನು ನೋಡುವಾಗಿನ ರಾತ್ರಿ (3)
13.ಆ ಕಡೆ ನಿಂತಿರುವವನ ಮುಖ (3)



5086ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕರ್ನಾಟಕ 3.ಶತಪದ
5.ನಸುಕು 6.ತಿಲೋದಕ
8.ನನಸು 10.ಸಭಿಕ
11.ಕುಚೇಷ್ಟೆ 12.ಮಮತೆ
14.ನಸುನಗು 17.ವಠಾರ
18.ಕೆನೆಹಾಲು 19.ಕಡುಗಲಿ

ಮೇಲಿಂದ ಕೆಳಕ್ಕೆ:
1.ಕಸೂತಿ 2.ಕನಕ
3.ಶಕುನ 4.ದಟ್ಟಿ
7.ಲೋಕಾಭಿರಾಮ 9.ಸುಪ್ತಚೇತನ
13.ತೆವಲು 14.ನರಕ
15.ಗುದ್ದಲಿ 16.ಸೆಕೆ

ಸುಡೊಕು 5473

	7			4				9
			6		9			2
2		4		7		3		
7	8						5	
			4			6		7
6		5		8			2	
		7	2				9	
				1	7		3	6
9		1		5		2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5472 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಖ್ಯಾತ ಹಾಸ್ಯ ನಟ ರಾಜು ಶ್ರೀವಾಸ್ತವ್ ನಿಧನ



ನವದೆಹಲಿ (ಪಿಟಿಐ): ಖ್ಯಾತ ಹಾಸ್ಯ ಕಲಾವಿದ ರಾಜು ಶ್ರೀವಾಸ್ತವ್ (58) ಅವರು ಬುಧವಾರ ನಿಧನರಾದರು. ಹೃದಯಾಘಾತಕ್ಕೊಳಗಾಗಿದ್ದ ಅವರು ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ಕಳೆದ 40 ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು.

ರಾಜು ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ಮೂಲತಃ ಉತ್ತರ ಪ್ರದೇಶದ ಕಾನ್ಪುರದವರಾಗಿದ್ದ ರಾಜು ಅವರು, ಸದ್ಯ ಉತ್ತರ ಪ್ರದೇಶದ ಫಿಲ್ಮ್ ಡೆವಲಪ್‌ಮೆಂಟ್ ಕೌನ್ಸಿಲ್‌ನ ಮುಖ್ಯಸ್ಥರಾಗಿದ್ದರು.

ಸಿನಿ ಪಯಣ: ರಾಜು ಅವರು ಸಿನಿಮಾ ಕ್ಷೇತ್ರಕ್ಕೆ ಬಂದ ಹೊಸದರಲ್ಲಿ ಅವರನ್ನು ಬಾಲಿವುಡ್‌ನ ಖ್ಯಾತ ನಟ ಅಮಿತಾಬ್ ಬಚ್ಚನ್ ಅವರಂತೆ ಹೋಲುತ್ತಾರೆ ಎಂದು ಗುರುತಿಸಲಾಗುತ್ತಿತ್ತು. ಅದರೆ, ಈ ನೆಲೆಯಿಂದ ಬಹುಬೇಗ ಹೊರ ಬಂದ ರಾಜು ಅವರು ಸ್ಟ್ಯಾಂಡ್ ಅಪ್ ಕಾಮಿಡಿ ಕ್ಷೇತ್ರದಲ್ಲಿ ದೊಡ್ಡದಾಗಿ ಬೆಳೆದರು. ಈ ಕ್ಷೇತ್ರದಲ್ಲಿ ತಮ್ಮ ಅಸ್ತಿತ್ವ ಕಂಡುಕೊಂಡರು.


'ತೇಜಾಬ್', 'ಮೈನೆ ಪ್ಯಾರ್ ಕಿಯಾ', 'ಬಾಜಿಗರ್' ಚಿತ್ರಗಳಲ್ಲಿನ ನಟನೆ ಅವರಿಗೆ ಮತ್ತಷ್ಟು ಹೆಸರು ತಂದು ಕೊಟ್ಟವು. ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ ಜನಪ್ರಿಯ ಕಾರ್ಯಕ್ರಮ 'ಶಕ್ತಿಮಾನ್'ನಲ್ಲೂ ಅವರು ನಟಿಸಿದ್ದರು.

2005ರಲ್ಲಿ ಪ್ರಸಾರಗೊಂಡ 'ದಿ ಗ್ರೇಟ್ ಇಂಡಿಯನ್ ಲಾಫ್ಟರ್ ಚಾಲೆಂಜ್'ನ ಮೊದಲ ಆವೃತ್ತಿಯು ಅವರ ಹಾಸ್ಯ ಪಯಣದ ಮೈಲಿಗಲ್ಲು ಎಂದೇ ಹೇಳಬೇಕು.

ಕಳೆದ ಎಂಟು ವರ್ಷಗಳಿಂದ ರಾಜು ಅವರು ರಾಜಕೀಯ ಕ್ಷೇತ್ರದಲ್ಲೂ ಗುರುತಿಸಿಕೊಂಡಿದ್ದರು. ಮೊದಲಿಗೆ ಸಮಾಜವಾದಿ ಪಕ್ಷದಲ್ಲಿದ್ದ ಅವರು ನಂತರ ಬಿಜೆಪಿ ಸೇರಿದ್ದರು.

ಗಣ್ಯರ ಸಂತಾಪ: ರಾಜು ಅವರ ನಿಧನಕ್ಕೆ ರಾಜಕೀಯ ಮತ್ತು ಸಿನಿಮಾ ಕ್ಷೇತ್ರದ ಗಣ್ಯರು ಸಂತಾಪ ಸೂಚಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ ಸಿಂಗ್ ಸಂತಾಪ ಸೂಚಿಸಿದ್ದಾರೆ. ನಟ ಅಕ್ಷಯ್ ಕುಮಾರ್, ನಿರ್ದೇಶಕ ರಾಕೇಶ್ ರೋಷನ್ ಸೇರಿದಂತೆ ಹಲವರು ಕಂಬನಿ ಮಿಡಿದಿದ್ದಾರೆ.





ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ● ಪಕ್ಷ ಬಯಸಿದರೆ ಸ್ಪರ್ಧೆ: ಅಶೋಕ್ ಗೆಹಲೋತ್

ರಾಹುಲ್ ಮನವೊಲಿಕೆಗೆ ಕಸರತ್ತು

ನವದೆಹಲಿ (ಪಿಟಿಐ): 'ಪಕ್ಷ ಬಯಸಿದರೆ ಮತ್ತು ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸುತ್ತೇನೆ' ಎಂದಿರುವ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್, 'ಪಕ್ಷ ನೀಡುವ ಯಾವುದೇ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತೇನೆ' ಎಂದು ಬುಧವಾರ ಹೇಳಿದ್ದಾರೆ.

ಪಕ್ಷದ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ದೆಹಲಿಯಲ್ಲಿ ಭೇಟಿಯಾದ ಗೆಹಲೋತ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಸಂಬಂಧಿಸಿದಂತೆ ಕೆಲ ಕಾಲ ಮಾತುಕತೆ ನಡೆಸಿದ್ದಾರೆ. ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಕೊಚ್ಚಿಯಲ್ಲಿ ಗುರುವಾರ ಭೇಟಿ ಮಾಡಲಿದ್ದಾರೆ. 'ಪಕ್ಷದ ಅಧ್ಯಕ್ಷ ಸ್ಥಾನ ಅಲಂಕರಿಸುವಂತೆ ರಾಹುಲ್ ಅವರನ್ನು ಮನವೊಲಿಸಲು ಕೊನೆಯ ಪ್ರಯತ್ನ ಮಾಡುತ್ತೇನೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು. 'ಕಾಂಗ್ರೆಸ್ ಅನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ನಿರ್ಧಾರ ತೆಗೆದುಕೊಳ್ಳುತ್ತೇನೆ' ಎಂದು ಹೇಳಿದರು.

'ಪಕ್ಷ ಮತ್ತು ಹೈಕಮಾಂಡ್ ನನಗೆ ಎಲ್ಲವನ್ನೂ ನೀಡಿದೆ. 40– 50 ವರ್ಷಗಳಿಂದ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದೇನೆ. ನನಗೆ ಯಾವುದೇ ಹುದ್ದೆ ಮುಖ್ಯವಲ್ಲ. ಪಕ್ಷ ನೀಡುವ ಜವಾಬ್ದಾರಿಯೇ ಮುಖ್ಯ. ಅದನ್ನು ಸಮರ್ಥವಾಗಿ ನಿಬಾಯಿಸುತ್ತೇನೆ' ಎಂದು ಅವರು ಪುನರುಚ್ಚರಿಸಿದರು.

'ಗಾಂಧಿ ಕುಟುಂಬದ ಜತೆಗೆ ದೇಶದ ಕಾಂಗ್ರೆಸ್ ಕಾರ್ಯಕರ್ತರು ನನ್ನ ಮೇಲೆ ನಂಬಿಕೆ, ವಿಶ್ವಾಸ ಹೊಂದಿದ್ದಾರೆ' ಎಂದು ಅವರು ಹೇಳಿದರು.

'ಹೀಗಾಗಿಯೇ ಅವರು ನಾಮಪತ್ರ ಸಲ್ಲಿಸುವಂತೆ ಸೂಚಿಸಿದರೆ ನಾನು ನಿರಾಕರಿಸಲಾರೆ... ಈ ಕುರಿತು ಆಪ್ತರೊಂದಿಗೆ ಮಾತುಕತೆ ನಡೆಸುತ್ತೇನೆ. ಸದ್ಯ ರಾಜಸ್ಥಾನದ ಮುಖ್ಯಮಂತ್ರಿ ಸ್ಥಾನದ ಜವಾಬ್ದಾರಿಯನ್ನು ನನಗೆ ನೀಡಲಾಗಿದ್ದು, ಅದನ್ನು ನಿರ್ವಹಿಸುತ್ತಿದ್ದೇನೆ, ಮತ್ತು ಮುಂದುವರಿಸುತ್ತೇನೆ' ಎಂದು ಅವರು ತಿಳಿಸಿದರು.

ಏಕ ಕಾಲದಲ್ಲಿ ಮುಖ್ಯಮಂತ್ರಿ ಹುದ್ದೆಯ ಜತೆಗೆ ಪಕ್ಷದ ಅಧ್ಯಕ್ಷ ಹುದ್ದೆಯನ್ನು ಅಲಂಕರಿಸಲು ಪಕ್ಷದ ನಿಯಮಗಳು ಅವಕಾಶ ಕಲ್ಪಿಸುತ್ತವೆಯಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಗೆಹಲೋತ್, 'ಹೈಕಮಾಂಡ್ ನಾಮನಿರ್ದೇಶನ ಮಾಡಿದ ಸಂದರ್ಭದಲ್ಲಿ ಅವು ಅನ್ವಯಿಸುತ್ತದೆ. ಆದರೆ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಮುಕ್ತವಾದದ್ದಾಗಿದ್ದು, ಪ್ರದೇಶ ಕಾಂಗ್ರೆಸ್ ಸಮಿತಿಗಳಲ್ಲಿನ ಅರ್ಹ 9,000 ಪ್ರತಿನಿಧಿಗಳ ಪೈಕಿ ಯಾರಾದರೂ ಸ್ಪರ್ಧಿಸಿ ಆಯ್ಕೆಯಾಗಬಹುದು. ಅವರು ಸಂಸದರು, ಶಾಸಕರು ಅಥವಾ ಸಚಿವರಾಗಿರಬಹುದು' ಎಂದರು.

'ನಾನು ಎಲ್ಲಿ ಉಳಿಯುತ್ತೇನೆ ಎಂಬುದನ್ನು ಸಮಯವೇ ನಿರ್ಧರಿಸುತ್ತದೆ. ಪಕ್ಷಕ್ಕೆ ನನ್ನಿಂದ ಎಲ್ಲಿ ಲಾಭವಾಗುತ್ತದೆಯೋ ಅಲ್ಲಿ ಉಳಿಯಲು ಬಯಸುತ್ತೇನೆ. ಈ ನಿಲುವಿನಿಂದ ಹಿಂದೆ ಸರಿಯುವುದಿಲ್ಲ' ಎಂದು ಅವರು ಪ್ರತಿಪಾದಿಸಿದರು.

ಈ ಮಧ್ಯೆ ರಾಹುಲ್ ಗಾಂಧಿ ಅವರನ್ನೇ ಅಧ್ಯಕ್ಷ ಸ್ಥಾನಕ್ಕೆ ಪರಿಗಣಿಸಬೇಕು ಎಂದು ಆಗ್ರಹಿಸಿ ತೆಲಂಗಾಣ ಮತ್ತು ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಬುಧವಾರ ನಿರ್ಣಯ ಅಂಗೀಕರಿಸಿತು.

ಮಿಸ್ತ್ರಿ ಭೇಟಿಯಾದ ತರೂರ್: ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧತೆ ನಡೆಸಿರುವ ಹಿರಿಯ ಕಾಂಗ್ರೆಸ್ ನಾಯಕ, ಸಂಸದ ಶಶಿ ತರೂರ್ ಅವರನ್ನು ಬುಧವಾರ ಪಕ್ಷದ ಚುನಾವಣಾ ಸಮಿತಿ ಅಧ್ಯಕ್ಷ ಮಧುಸೂದನ ಮಿಸ್ತ್ರಿ ಅವರನ್ನು ಭೇಟಿಯಾಗಿ, ನಾಮಪತ್ರ ಸಲ್ಲಿಕೆಯ ಪ್ರಕ್ರಿಯೆ ಕುರಿತು ಮಾಹಿತಿ ಪಡೆದರು.

'ಗೆಹಲೋತ್, ತರೂರ್– ರಾಹುಲ್ ಕೈಗೊಂಬೆಗಳು'

ನವದೆಹಲಿ: 'ಅಶೋಕ್ ಗೆಹಲೋತ್ ಅಥವಾ ಶಶಿ ತರೂರ್ ಇವರಲ್ಲಿ ಯಾರೇ ಕಾಂಗ್ರೆಸ್‌ನ ಅಧ್ಯಕ್ಷರಾದರೂ, ಅವರು ರಾಹುಲ್ ಗಾಂಧಿ ಅವರ ಕೈಗೊಂಬೆಯಾಗಿಯೇ ಇರುತ್ತಾರೆ' ಎಂದು ಬಿಜೆಪಿ ವ್ಯಂಗ್ಯವಾಡಿದೆ.

ಸುದ್ದಿಗಾರರೊಂದಿಗೆ ಬುಧವಾರ ಇಲ್ಲಿ ಮಾತನಾಡಿದ ಪಕ್ಷದ ರಾಷ್ಟ್ರೀಯ ವಕ್ತಾರ ಟಾಮ್ ವಡಕ್ಕನ್, 'ಎರಡು ದಶಕಗಳ ಬಳಿಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಹುದ್ದೆಗೆ ಸ್ಪರ್ಧೆಯನ್ನು ನೋಡುವಂತಾಗಿದೆ.ಒಂದು ವೇಳೆ ರಾಹುಲ್ ಪಕ್ಷದ ಸಾರಥ್ಯ ವಹಿಸಲು ಒಪ್ಪದಿದ್ದರೆ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಸ್ಪರ್ಧಿಸುವಂತೆ ಸೂಚಿಸಲಾಗಿದೆ ಅಷ್ಟೇ' ಎಂದು ಹೇಳಿದ್ದಾರೆ.

ನಾರಾಯಣ ಗುರು ಭಾವಚಿತ್ರಕ್ಕೆ ನಮಿಸಿ ಯಾತ್ರೆ ಆರಂಭ



ಕೊಚ್ಚಿಯಲ್ಲಿ ಬುಧವಾರ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಮಾಜ ಸುಧಾರಕ ನಾರಾಯಣ ಗುರುಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ 14ನೇ ದಿನದ 'ಭಾರತ್ ಜೋಡೊ ಯಾತ್ರಾ' ಆರಂಭಿಸಿದರು– ಟ್ವಿಟರ್ ಚಿತ್ರ

ಕೊಚ್ಚಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಮಾಜ ಸುಧಾರಕ ನಾರಾಯಣ ಗುರುಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ, ತಮ್ಮ ಪಕ್ಷದ 'ಭಾರತ್ ಜೋಡೊ ಯಾತ್ರಾ'ಅನ್ನು ಬುಧವಾರ ಮಾದವನದಿಂದ ಪುನರಾರಂಭಿಸಿದರು. ರಾಹುಲ್ ಅವರಿಗೆ 14ನೇ ದಿನದ ಪಾದಯಾತ್ರೆಯಲ್ಲಿ ಪಕ್ಷದ ಹಿರಿಯ ನಾಯಕ ಸಚಿನ್ ಪೈಲಟ್, ವಯನಾಡು ಸಂಸದರು, ಪಕ್ಷದ ರಾಜ್ಯ ಘಟಕದ ಹಿರಿಯ ನಾಯಕರು ಸಾಥ್ ನೀಡಿದರು.

ನಾರಾಯಣ ಗುರುಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿರುವ ಚಿತ್ರವನ್ನು ರಾಹುಲ್ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. 'ಮಹಾನ್ ಆಧ್ಯಾತ್ಮಿಕ ನಾಯಕ, ದಾರ್ಶನಿಕ ಮತ್ತು ಸಮಾಜ ಸುಧಾರಕ ನಾರಾಯಣ ಗುರುಗಳಿಗೆ ಗೌರವ ಸಲ್ಲಿಸುವ ಮೂಲಕ ಈ ದಿನಕ್ಕೆ ಸ್ಫೂರ್ತಿದಾಯಕ ಆರಂಭ ಸಿಕ್ಕಿದೆ. ಅವರು ಬೋಧಿಸಿದ ಸಮಾನತೆಯ ಸಂದೇಶ ಸಾರುವುದು 'ಭಾರತ್ ಜೋಡೊ ಯಾತ್ರೆ'ಯ ಪ್ರಮುಖ ಚಿಂತನೆಯಾಗಿದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಮಾದವನದಿಂದ ಬೆಳಿಗ್ಗೆ 6.45ಕ್ಕೆ ಆರಂಭವಾದ ಮೊದಲ ಅವಧಿಯ ಯಾತ್ರೆ 13 ಕಿ.ಮೀ ಕ್ರಮಿಸಿ, ಎಡಪಳ್ಳಿ ತಲುಪಿತು. ಎರಡನೇ ಅವಧಿಯ ಪಾತ್ರೆ ಸಂಜೆ 5ಕ್ಕೆ ಕಲಮಸ್ಸೇರಿ ಪುರಸಭೆ ಕಚೇರಿ ಆವರಣದಿಂದ ಆರಂಭವಾಗಿ, ಪರಪ್ಪೂರ್ ಜಂಕ್ಷನ್ ತಲುಪಿತು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಟ್ವೀಟ್ ಮಾಡಿದ್ದಾರೆ.

'ಸ್ಪರ್ಧೆಗೆ ಸೋನಿಯಾ, ರಾಹುಲ್ ಅನುಮತಿ ಅಗತ್ಯವಿಲ್ಲ'

ಕೊಚ್ಚಿ (ಪಿಟಿಐ): ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸಲು ಸೋನಿಯಾ ಗಾಂಧಿ ಅಥವಾ ರಾಹುಲ್ ಗಾಂಧಿ ಅವರ ಅನುಮತಿ ಅಗತ್ಯವಿಲ್ಲ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಬುಧವಾರ ಹೇಳಿದರು.'ಭಾರತ್ ಜೋಡೊ ಯಾತ್ರಾ'ದ ವಿಶ್ರಾಂತಿ ಸಮಯದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪ್ರದೇಶ ಕಾಂಗ್ರೆಸ್ ಸಮಿತಿಯ 10 ಪ್ರತಿನಿಧಿಗಳ ಬೆಂಬಲ ಇರುವ ಯಾರಾದರೂ ಚುನಾವಣೆಯಲ್ಲಿ ಸ್ಪರ್ಧಿಸಬಹುದು' ಎಂದರು

ಇಂದು ಅಧಿಸೂಚನೆ

ಕಾಂಗ್ರೆಸ್‌ನ ಕೇಂದ್ರೀಯ ಚುನಾವಣಾ ಸಮಿತಿಯು ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಗೆ ಗುರುವಾರ ಅಧಿಸೂಚನೆ ಹೊರಡಿಸಲಿದೆ. ಇದೇ 24ರಿಂದ 30ರವರೆಗೆ ನಾಮಪತ್ರ ಸಲ್ಲಿಸಲು ಅವಕಾಶವಿರಲಿದೆ. ನಾಮಪತ್ರಗಳ ಪರಿಶೀಲನಾ ಕಾರ್ಯ ಅಕ್ಟೋಬರ್ 1ರಂದು ನಡೆಯಲಿದ್ದು, ನಾಮಪತ್ರ ವಾಪಸ್ ಪಡೆಯಲು ಅಕ್ಟೋಬರ್ 8ರವರೆಗೆ ಅವಕಾಶವಿರುತ್ತದೆ. ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಕಣದಲ್ಲಿದ್ದರೆ ಅಕ್ಟೋಬರ್ 17ರಂದು ಮತದಾನ ನಡೆಯಲಿದ್ದು, ಅಕ್ಟೋಬರ್ 19ರಂದು ಮತ ಎಣಿಕೆ ಮತ್ತು ಫಲಿತಾಂಶ ಪ್ರಕಟವಾಗಲಿದೆ.

ಸೆ.27ರಿಂದ 'ಸುಪ್ರೀಂ' ಕಲಾಪ ನೇರ ಪ್ರಸಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಕ್ತ ನ್ಯಾಯಾಲಯದ ಪರಿಕಲ್ಪನೆ ಬಲಪಡಿಸುವ ಉದ್ದೇಶದಿಂದ ಐವರು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠಗಳಲ್ಲಿ ವಿಚಾರಣೆ ನಡೆಸುತ್ತಿರುವ ಪ್ರಕರಣಗಳನ್ನು ಸೆ. 27 ರಿಂದ ನೇರ ಪ್ರಸಾರ ಮಾಡಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ಆದ್ಯತೆ ಮೇರೆಗೆ ಸಾಂವಿಧಾನಿಕ ಪೀಠದ ಪ್ರಕರಣಗಳ ವಿಚಾರಣೆ ನೇರ ಪ್ರಸಾರ ಪ್ರಾರಂಭಿಸಲು ಮಂಗಳವಾರ ನಡೆದ ಪೂರ್ಣ ನ್ಯಾಯಾಲಯದ ಸಭೆ ನಿರ್ಧರಿಸಿದೆ. ಸಭೆ ನಿರ್ಧಾರ ಸರ್ವಾನುಮತದಿಂದ ಕೂಡಿದ್ದು, ವಿಚಾರಣೆಗಳನ್ನು ಆರಂಭದಲ್ಲಿ ಯೂಟ್ಯೂಬ್‌ನಲ್ಲಿ ನೇರ ಪ್ರಸಾರ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಆ. 27 ರಂದು ಯು.ಯು.ಲಲಿತ್ ಅವರು ಮುಖ್ಯನ್ಯಾಯಮೂರ್ತಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಬಾಕಿ ಇರುವ ಪ್ರಕರಣಗಳ ವಿಚಾರಣೆಗಾಗಿ ಐದು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠ ರಚನೆ ಮಾಡಿದ್ದಾರೆ.

ಪ್ರಸ್ತುತ ಸಾಂವಿಧಾನಿಕ ಪೀಠದ ಎದುರು ಭೋಪಾಲ್ ಅನಿಲ ದುರಂತ ಪ್ರಕರಣ, ಇಡಬ್ಲ್ಯೂಎಸ್ ಕೋಟಾದ ಮಾನ್ಯತೆ, ಸೇವೆಗಳ ಮೇಲಿನ ನಿಯಂತ್ರಣ ವಿಚಾರಣೆ ನಡೆಯುತ್ತಿದೆ.

ಗುಜರಾತ್, ಒಡಿಶಾ, ಮಧ್ಯಪ್ರದೇಶ ಮತ್ತು ಕರ್ನಾಟಕ ಸೇರಿದಂತೆ ಹಲವು ಹೈಕೋರ್ಟ್‌ಗಳು ಈಗಾಗಲೇ ಯೂಟ್ಯೂಬ್‌ನಲ್ಲಿ ಕಲಾಪಗಳ ನೇರ ಪ್ರಸಾರ ಆರಂಭಿಸಿವೆ. ಸಿಜೆಐ ಎನ್. ವಿ.ರಮಣ ಅವರ ಕೊನೆ ದಿನದ ಔಪಚಾರಿಕ ಪೀಠದ ಕಲಾಪಗಳನ್ನು ನೇರ ಪ್ರಸಾರ ಮಾಡಲಾಗಿತ್ತು.

ಇಸ್ರೊದ ಹೈಬ್ರಿಡ್ ಮೋಟರ್ ಪರೀಕ್ಷೆ ಯಶಸ್ವಿ

ಬೆಂಗಳೂರು (ಪಿಟಿಐ): ಮುಂದಿನ ದಿನಗಳಲ್ಲಿ ಉಡಾವಣಾ ರಾಕೆಟ್‌ಗಳಿಗೆ ಹೊಸ ಪ್ರೊಪಲ್ಷನ್ ವ್ಯವಸ್ಥೆಯಾಗಲಿರುವ ಹೈಬ್ರಿಡ್ ಮೋಟರ್ ಪರೀಕ್ಷೆಯನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮಂಗಳವಾರ ಯಶಸ್ವಿಯಾಗಿ ನಡೆಸಿದೆ.

30 ಕೆಎನ್ ಹೈಬ್ರಿಡ್ ಮೋಟರ್ ಅನ್ನು ತಮಿಳುನಾಡಿನ ಮಹೇಂದ್ರಗಿರಿಯಲ್ಲಿರುವ ಇಸ್ರೊದ ಪ್ರೊಪಲ್ಷನ್ ಕಾಂಪ್ಲೆಕ್ಸ್ ನಲ್ಲಿ ಇಸ್ರೊದ ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಮ್ ಸೆಂಟರ್ (ಎಲ್‌ಪಿಎಸ್‌ಸಿ) ಬೆಂಬಲದೊಂದಿಗೆ ಪರೀಕ್ಷಿಸಲಾಯಿತು ಎಂದು ಬೆಂಗಳೂರಿನಲ್ಲಿರುವ ಇಸ್ರೊ ಪ್ರಧಾನ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ.

ಮೋಟರ್‌ಗೆ ಇಂಧನವಾಗಿ ಹೈಡ್ರಾಕ್ಸಿಲ್-ಟರ್ಮಿನೇಟೆಡ್ ಪಾಲಿಬುಟಾಡಿನ್‌ಅನ್ನು (ಎಚ್‌ಟಿಪಿಬಿ) ಮತ್ತು ಆಕ್ಸಿಡೈಸರ್(ಎಲ್‌ಒಎಕ್ಸ್) ಆಗಿ ದ್ರವರೂಪದ ಆಮ್ಲಜನಕ ಬಳಸಲಾಯಿತು. ಹೈಬ್ರಿಡ್ ಮೋಟರ್‌ಗೆ ಘನ ಇಂಧನ ಮತ್ತು ದ್ರವ ಆಕ್ಸಿಡೈಸರ್‌ಅನ್ನು ಬಳಸಲಾಗಿದೆ. ವಿಮಾನಕ್ಕೆ ಸಮನಾದ 30 ಕೆಎನ್ ಹೈಬ್ರಿಡ್ ಮೋಟರ್ ಉದ್ದೇಶಿತ 15 ಸೆಕೆಂಡುಗಳ ಪರೀಕ್ಷೆಯ ವೇಳೆ ಸುಸ್ಥಿರ ದಹನಕ್ರಿಯೆ ಪ್ರದರ್ಶಿಸಿತು. ಮೋಟರ್ ಕಾರ್ಯಕ್ಷಮತೆಯೂ ತೃಪ್ತಿಕರವಾಗಿದೆ ಎಂದು ಇಸ್ರೊ ಪ್ರಧಾನ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ.

ಗಡ್ಡ ಬೋಳಿಸುವಂತೆ ಮುಸ್ಲಿಂ ಸಮುದಾಯದ ಕೈದಿಗಳಿಗೆ ಕಿರುಕುಳ

ರಾಜಗಡ, ಮಧ್ಯಪ್ರದೇಶ (ಪಿಟಿಐ): 'ಇಲ್ಲಿನ ಜಿಲ್ಲಾ ಕಾರಾಗೃಹದ ಜೈಲರ್ ಎಸ್.ಎನ್.ರಾಣಾ ಅವರು ಗಡ್ಡ ಬೋಳಿಸುವಂತೆ ತಮಗೆ ಕಿರುಕುಳ ನೀಡಿದ್ದಾರೆ' ಎಂದು ಮುಸ್ಲಿಂ ಸಮುದಾಯದ ಕೈದಿಗಳು ಆರೋಪಿಸಿದ್ದಾರೆ. ಈ ಸಂಬಂಧ ತನಿಖೆಗೆ ಆದೇಶಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಬುಧವಾರ ಹೇಳಿದ್ದಾರೆ.

ಕಲೀಂ ಖಾನ್, ತಾಲಿಬ್ ಖಾನ್, ಆರೀಫ್ ಖಾನ್, ಸಲ್ಮಾನ್ ಖಾನ್ ಯಾನೆ ಭೋಲಾ ಮತ್ತು ವಾಹೀದ್ ಖಾನ್ ಎಂಬುವವರನ್ನು ಸಾರ್ವಜನಿಕರ ನೆಮ್ಮದಿಗೆ ಭಂಗ ತಂದ ಆರೋಪದಡಿ ಬಂಧಿಸಿ ಸೆಪ್ಟೆಂಬರ್ 13ರಂದು ಜಿಲ್ಲಾ ಕಾರಾಗೃಹಕ್ಕೆ ಕಳುಹಿಸಲಾಗಿತ್ತು. ಸೆಪ್ಟೆಂಬರ್ 15ರಂದು ಇವರು ಜೈಲಿನಿಂದ ಬಿಡುಗಡೆಯಾಗಿದ್ದರು.

ಜೈಲಿನಿಂದ ಹೊರಬಂದ ನಂತರ ಭೋಪಾಲ್ ಕ್ಷೇತ್ರದ ಕಾಂಗ್ರೆಸ್ ಶಾಸಕ ಆರೀಫ್ ಮಸೂದ್ ಅವರನ್ನು ಭೇಟಿ ಮಾಡಿದ್ದ ಇವರು ಜೈಲಿನಲ್ಲಿ ನಡೆದ ಸಂಗತಿ ವಿವರಿಸಿದ್ದರು. ಸಮಸ್ಯೆ ಆಲಿಸಿದ್ದ ಆರೀಫ್, ಐವರೊಂದಿಗೆ ಮಧ್ಯಪ್ರದೇಶದ ಗೃಹ ಸಚಿವ ನರೋತ್ತಮ್ ಮಿಶ್ರಾ ಅವರನ್ನು ಭೇಟಿಮಾಡಿ ಈ ಸಂಬಂಧ ದೂರು ನೀಡಿದ್ದರು.

'ಜೈಲು ಅಧಿಕಾರಿ ರಾಣಾ, ಗಡ್ಡ ಬೋಳಿಸುವಂತೆ ಬಲವಂತಪಡಿಸಿದ್ದಲ್ಲದೇ ಐವರನ್ನು ನಿಂದಿಸಿದ್ದಾರೆ. ಹೀಗಾಗಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದರು.

'ಕೈದಿಗಳ ಮನವಿ ಮೇರೆಗೆ ಅಧಿಕಾರಿಗಳು ಗಡ್ಡ ಬೋಳಿಸುವ ವ್ಯವಸ್ಥೆ ಮಾಡಿರಬಹುದು. ಅಂತಹ ಪದ್ಧತಿ ಜೈಲಿನಲ್ಲಿ ಹಿಂದಿನಿಂದಲೂ ಇದೆ. ತಮ್ಮ ನಂಬಿಕೆಗೆ ಅನುಗುಣವಾಗಿ ಗಡ್ಡ ಬಿಡುವ, ಕೇಶ ವಿನ್ಯಾಸ ಹೊಂದುವ ಸ್ವಾತಂತ್ರ್ಯ ಕೈದಿಗಳಿಗೆ ಇದೆ. ಗಡ್ಡ ಬಿಟ್ಟಿರುವ ಮುಸ್ಲಿಂ ಸಮುದಾಯದ 10 ಮಂದಿ ಕೈದಿಗಳು ಈಗಾಗಲೇ ಜೈಲಿನಲ್ಲಿ ಇದ್ದಾರೆ' ಎಂದು ರಾಣಾ ಹೇಳಿದ್ದಾರೆ.

ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಅವರು ಜೈಲು ಅಧಿಕಾರಿಯ ವರ್ತನೆಯನ್ನು ಖಂಡಿಸಿದ್ದಾರೆ. 'ಗಡ್ಡ ಬಿಟ್ಟ ಮುಸ್ಲಿಮರನ್ನೆಲ್ಲಾ ಪಾಕಿಸ್ತಾನದವರೆಂದು ಏಕೆ ಭಾವಿಸುತ್ತೀರಿ' ಎಂದು ಪ್ರಶ್ನಿಸಿದ್ದಾರೆ.

ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವಡಗಿ

ಹಿಜಾಬ್ ನಿಷೇಧ: ಸಮರ್ಥಿಸಿಕೊಂಡ ಸರ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಪದವಿ ಪೂರ್ವ ಕಾಲೇಜುಗಳ ತರಗತಿ ಕೊಠಡಿಯೊಳಗೆ ಹಿಜಾಬ್ ಧರಿಸಲು ಅವಕಾಶ ನೀಡದಿರುವ ನಿರ್ಧಾರವನ್ನು ಕರ್ನಾಟಕ ಸರ್ಕಾರ ಬುಧವಾರ ಸಮರ್ಥಿಸಿಕೊಂಡಿದೆ.

ಕರ್ನಾಟಕದ ಪದವಿಪೂರ್ವ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠ ಮುಂದುವರಿಸಿದೆ. ಈ ವೇಳೆ ಕರ್ನಾಟಕ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವಡಗಿ ವಾದ ಮಂಡಿಸಿ, 'ಹಿಜಾಬ್ ಅಗತ್ಯ ಧಾರ್ಮಿಕ ಪದ್ಧತಿ ಅಲ್ಲ. ಜತೆಗೆ, ಉಡುಪು ಧರಿಸುವ ಹಕ್ಕನ್ನು ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗವಾಗಿ ಎಲ್ಲೆಡೆ ಉಪಯೋಗಿಸಲು ಆಗದು' ಎಂದರು.

ಖಾಸಗಿತನದ ಹಕ್ಕಿನ ವ್ಯಾಖ್ಯಾನ ಇನ್ನೂ ವಿಕಸನಗೊಳ್ಳುತ್ತಿದ್ದು, ಅದನ್ನು ಎಲ್ಲ ವಲಯಗಳಲ್ಲಿ ಅಳವಡಿಸಲಾಗದು ಎಂದು ಅವರು ಹೇಳಿದರು.

ವಿದ್ಯಾರ್ಥಿಗಳಲ್ಲಿ ಶಿಸ್ತಿಗಾಗಿ ಸಮವಸ್ತ್ರ

'ಶಾಲೆಗಳಲ್ಲಿ ಸಮವಸ್ತ್ರ ಜಾರಿಗೊಳಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು-ಜಾರಿಗೊಳಿಸುವುದು ಕರ್ನಾಟಕ ಸರ್ಕಾರದ ಉದ್ದೇಶ. ಅಲ್ಲದೆ, ಈ ಮೂಲಕ ಸಂವಿಧಾನದ ಪರಿಚ್ಛೇದ 19ರ ಅಡಿಯಲ್ಲಿ ಹಕ್ಕುಗಳ ಮೇಲೆ ಪರಿಣಾಮ ಬೀರಿದ್ದರೆ ಅದು ಕಾಕತಾಳೀಯ ಅಷ್ಟೇ. ಅದನ್ನು ಕಾನೂನನ್ನು ಅಮಾನ್ಯಗೊಳಿಸಲು ಮೂಲ ಕಾರಣ ಎಂದು ಪರಿಗಣಿಸಲು ಆಗದು' ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವಡಗಿ ಹೇಳಿದರು.

'ಕೇವಲ ಬೇಡಿಕೆ ಮುಂದಿಟ್ಟ ಕಾರಣಕ್ಕೆ ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗವಾಗಿ ಉಡುಪು ಧರಿಸುವ ಸ್ವಾತಂತ್ರ್ಯ ನೀಡಲಾಗದು. ಅದಕ್ಕಾಗಿ ಅವರು ಯಾವ ಅಭಿವ್ಯಕ್ತಿಯನ್ನು ಯಾರಿಗೆ ತಲುಪಿಸಬೇಕು ಎಂಬ ಬಗ್ಗೆ ಸ್ಪಷ್ಟನೆ ನೀಡಬೇಕು. ಹಿಜಾಬ್ ಧರಿಸುವುದು ಇಸ್ಲಾಂನಲ್ಲಿ ಕಡ್ಡಾಯ ಎಂದು ಅವರು ಹೇಳುತ್ತಾರೆ. ಇದು ಯಾವುದೇ ಅಭಿವ್ಯಕ್ತಿ ಅಲ್ಲ' ಎಂದು ಅವರು ವಾದ ಮಂಡಿಸಿದರು.

ಹಿಜಾಬ್ ಧರಿಸುವುದು ಕುರಾನ್‌ನಲ್ಲಿ ಧಾರ್ಮಿಕ ಪದ್ಧತಿ ಎಂದು ಉಲ್ಲೇಖಿಸಲಾಗಿದೆ ಎಂದು ಊಹಿಸಿದರೂ ಧರ್ಮಕ್ಕೆ ಸಂಬಂಧಿಸಿದ ಪ್ರತಿ ಚಟುವಟಿಕೆಯನ್ನು ಅಗತ್ಯ ಧಾರ್ಮಿಕ ಪದ್ಧತಿ ಎಂದು ಪರಿಗಣಿಸಲಾಗದು ಎಂದರು.

ಕುರಾನ್‌ನಲ್ಲಿ ಹೇಳಿರುವ ಎಲ್ಲವನ್ನೂ ಸ್ವೀಕರಿಸುವುದು ಅಗತ್ಯ ಎಂದು ಒಪ್ಪಿಕೊಂಡರೆ, ಅದು ಅಗತ್ಯತೆಯ ಪರೀಕ್ಷೆಯನ್ನು ವಿಫಲಗೊಳಿಸುತ್ತದೆ ಎಂದರು.


ವಿಚಾರಣೆಯ ವೇಳೆ ನ್ಯಾಯಪೀಠ, ತಲೆಯ ಮೇಲೆ ಸ್ಕಾರ್ಫ್ ಧರಿಸುವುದು ಏಕತೆ ಮತ್ತು ಸಮಾನತೆಗೆ ವಿರುದ್ಧ ಆಗುತ್ತದೆಯೇ ಎಂದು ಪ್ರಶ್ನಿಸಿತು.

ಅಲ್ಲದೆ, ಅರ್ಜಿದಾರರು ಪದವಿ ಪೂರ್ವ ಕಾಲೇಜುಗಳಲ್ಲಿ ಸಮವಸ್ತ್ರದ ಅಗತ್ಯ ಇಲ್ಲ ಎಂದು ವಾದಿಸಿದ್ದಾರೆ. ಕೆಲವು ಶಾಲೆಗಳಲ್ಲಿ ಸಮವಸ್ತ್ರದ ನಿಯಮ ಇಲ್ಲ. ಆದ್ದರಿಂದ ಪದವಿಪೂರ್ವ ಕಾಲೇಜುಗಳಲ್ಲಿ ಸಮವಸ್ತ್ರದ ನಿಯಮ ಏಕೆಂದು ಪ್ರಶ್ನಿಸಿದ್ದಾರೆ. ಅಲ್ಲದೆ, ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ ಸಮಾನತೆ ಮತ್ತು ಏಕತೆಯ ಪದ ಉಲ್ಲೇಖಿಸಲಾಗಿದೆ. ಅದರ ಅರ್ಥವೇನು ಎಂದು ಪ್ರಶ್ನಿಸಿತು.

ಅದಕ್ಕೆ ಉತ್ತರಿಸಿದ ನಾವಡಗಿ, 'ಸಮವಸ್ತ್ರದ ನಿಯಮವಿಲ್ಲದ ಶಾಲೆಗಳಲ್ಲಿ ಏಕತೆ ಮತ್ತು ಸಮಾನತೆ ಸಾರುವಂತಹ ಬಟ್ಟೆಗಳನ್ನು ಧರಿಸಬೇಕು. ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರದಂತಹ ಸಮವಸ್ತ್ರ ಇರಬೇಕು ಎಂಬುದು ಸುತ್ತೋಲೆಯ ಆಶಯ' ಎಂದರು. ತಲೆಯ ಮೇಲೆ ಸ್ಕಾರ್ಫ್ ಧರಿಸುವುದರ ಕುರಿತು ನ್ಯಾಯಪೀಠದ ಪ್ರಶ್ನೆಗೆ ಉತ್ತರಿಸಿದ ಅವರು, ಸಮವಸ್ತ್ರ ಜಾರಿಗೊಳಿಸುವುದರ ಉದ್ದೇಶ ವಿದ್ಯಾರ್ಥಿಗಳನ್ನು ಅವರ ಆರ್ಥಿಕ ಹಿನ್ನೆಲೆಯ ಹೊರತಾಗಿಯೂ ಸಮಾನವಾಗಿ ನೋಡುವುದು ಆಗಿದೆ ಎಂದರು.

'ರಾಜ್ಯ ಸರ್ಕಾರವು ಶಾಲೆಯಿಂದ ಹೊರಗೆ ಹಿಜಾಬ್ ಧರಿಸುವುದನ್ನು ನಿರ್ಬಂಧಿಸಲ್ಲ. ಶಾಲಾ ವಾಹನಗಳಲ್ಲಿ ಅದನ್ನು ಹಾಕಿಕೊಳ್ಳಲು ಅವಕಾಶ ನೀಡಲಾಗಿದೆ. ಶಾಲಾ ಆವರಣದಲ್ಲಿ ಸಹ ಹಿಜಾಬ್ ಧರಿಸಲು ಅನುಮತಿ ಇದೆ. ಕೇವಲ ತರಗತಿ ಕೊಠಡಿಯೊಳಗೆ ಮಾತ್ರ ಅದಕ್ಕೆ ನಿರ್ಬಂಧ ಹೇರಲಾಗಿದೆ. ಜಾತಿ ಧರ್ಮದ ಬೇಧಭಾವವನ್ನು ಮೀರಿ ಮಕ್ಕಳನ್ನು ಒಟ್ಟಿಗೆ ಅಭ್ಯಾಸ ಮಾಡುವ ವಾತಾವರಣ ನಿರ್ಮಿಸುವುದು ಸುತ್ತೋಲೆಯ ಉದ್ದೇಶ' ಎಂದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,816
ಇಂದಿನ ಅಂತ್ಯ	17,718
	97
ದಿನದ ಕನಿಷ್ಠ	17,838

ವಿನಿಮಯ ದರ

£ ಪೌಂಡ್	90.86
€ ಯೂರೊ	79.56
¥ ಯೆನ್ (100ಕ್ಕೆ)	55.53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660 (1680)
ಸೋಯಾ (ರಿಫೈನ್ಡ್)	₹1170 (1170)
ಸೂರ್ಯಕಾಂತಿ (ರಿಫೈನ್ಡ್)	₹1340 (1340)
ಪಾಮೋಲಿನ್	₹930 (920)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹500-800
ಮಧ್ಯಮ	₹300-500
ಸಣ್ಣ	₹100-200

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹145.50
ಆರ್‌ಎಸ್‌ಎಸ್-5	₹135.50
ಲಾಟ್	₹131

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ

ತಿಪಟೂರು	₹12800-14150

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹400-685
ದ್ವಿತಳಿ (ಬಿ.ವಿ)	₹496-900

ಕಂಠೀರವದಲ್ಲಿ ಅ. 7ರಿಂದ ಕಬಡ್ಡಿ ಹಬ್ಬ

ಪ್ರಜಾವಾಣಿ ವಾರ್ತೆ



2019ರ ಆವೃತ್ತಿಯ ಪ್ರೊ ಕಬಡ್ಡಿ ಪಂದ್ಯ

ಬೆಂಗಳೂರು: ಪ್ರೊ ಕಬಡ್ಡಿ ಲೀಗ್‌ನ ಒಂಬತ್ತನೇ ಆವೃತ್ತಿಯ ವೇಳಾಪಟ್ಟಿಯನ್ನು ಟೂರ್ನಿಯ ಆಯೋಜಕ ಸಂಸ್ಥೆ ಮಷಾಲ್ ಸ್ಪೋರ್ಟ್ಸ್ ಬುಧವಾರ ಪ್ರಕಟಿಸಿದೆ. ಉದ್ಯಾನನಗರಿಯ ಕಂಠೀರವ ಕ್ರೀಡಾಂಗಣದಲ್ಲಿ ಅಕ್ಟೋಬರ್ 7ರಂದು ಕಬಡ್ಡಿ ಹಬ್ಬ ಆರಂಭವಾಗಲಿದೆ.

ಅ.7ರಿಂದ 26ರವರೆಗೆ ಮೊದಲ ಹಂತದ ಪಂದ್ಯಗಳು ನಡೆಯಲಿವೆ. ಅ.28ರಿಂದ ನವೆಂಬರ್ 7ರವರೆಗೆ ಪುಣೆಯ ಶಿವ ಛತ್ರಪತಿ ಕ್ರೀಡಾಂಗಣದಲ್ಲಿ ನಂತರದ ಹಂತದ ಪಂದ್ಯಗಳು ಆಯೋಜನೆಯಾಗಿವೆ. ಈ ಬಾರಿ ಪಂದ್ಯಗಳ ವೀಕ್ಷಣೆಗೆ ಪ್ರೇಕ್ಷಕರಿಗೆ ಅವಕಾಶ ಕಲ್ಪಿಸಲಾಗಿದೆ. ಲೀಗ್‌ನ ಮೊದಲ ಮೂರು ದಿನ, ಪ್ರತಿದಿನ ಮೂರು ಪಂದ್ಯಗಳು ನಡೆಯಲಿವೆ. ಪ್ರತಿ ಶುಕ್ರವಾರ ಮತ್ತು ಭಾನುವಾರವೂ ಮೂರು ಪಂದ್ಯಗಳನ್ನು ಆಡಿಸಲಾಗುತ್ತದೆ.

ಮೊದಲಾರ್ಧದ ಒಟ್ಟು 66 ಪಂದ್ಯಗಳು ಆಯೋಜನೆಯಾಗಿವೆ. ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ದಬಂಗ್ ಡೆಲ್ಲಿ ಮತ್ತು ಯು ಮುಂಬಾ ಸೆಣಸಲಿವೆ. ಅದೇ ದಿನ ಎರಡನೇ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡವು ತೆಲುಗು ಟೈಟನ್ಸ್‌ಗೆ ಮುಖಾಮುಖಿಯಾಗುವುದು.

ಲೀಗ್‌ನ ದ್ವಿತೀಯಾರ್ಧದ ವೇಳಾಪಟ್ಟಿಯನ್ನು ಅಕ್ಟೋಬರ್ ತಿಂಗಳ ಕೊನೆಯ ವಾರದಲ್ಲಿ ಪ್ರಕಟಿಸಲಾಗುತ್ತದೆ.

ಮುಖ್ಯಾಂಶಗಳು
- ಮೊದಲಾರ್ಧದ ವೇಳಾಪಟ್ಟಿ ಪ್ರಕಟಿಸಿದ ಮಷಾಲ್ ಸ್ಪೋರ್ಟ್ಸ್
- ಅಕ್ಟೋಬರ್ 7ರಿಂದ ಮತ್ತು ನವೆಂಬರ್ 7ರವರೆಗೆ 66 ಪಂದ್ಯಗಳು
- ಪ್ರಶಸ್ತಿಗಾಗಿ 12 ತಂಡಗಳು ಪೈಪೋಟಿಗಿಳಿಯಲಿವೆ

'ಪಂದ್ಯ ವೀಕ್ಷಿಸಲು ಬುಕ್‌ಮೈಶೊ ಆ್ಯಪ್‌ನಲ್ಲಿ ಟಿಕೆಟ್ ಕಾಯ್ದಿರಿಸಬಹುದು. ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಡಿಸ್ನಿ ಪ್ಲಸ್ ಹಾಟ್‌ಸ್ಟಾರ್‌ನಲ್ಲಿ ಪಂದ್ಯಗಳು ನೇರಪ್ರಸಾರವಾಗಲಿವೆ' ಎಂದು ಮಷಾಲ್ ಸ್ಪೋರ್ಟ್ಸ್ ಮುಖ್ಯಸ್ಥ ಅನುಪಮ್ ಗೋಸ್ವಾಮಿ ಹೇಳಿದ್ದಾರೆ.

ಹೋದ ವರ್ಷ ಬೆಂಗಳೂರಿನಲ್ಲಿಯೇ ಪೂರ್ಣ ಟೂರ್ನಿ ನಡೆದಿತ್ತು. ಆದರೆ ಆಗ ಕೋವಿಡ್ ತಡೆ ನಿಯಮಗಳಿದ್ದ ಕಾರಣ ಬಯೋಬಬಲ್‌ನಲ್ಲಿ ಟೂರ್ನಿ ಆಯೋಜನೆಯಾಗಿತ್ತು. ಆದ್ದರಿಂದ ಪ್ರೇಕ್ಷಕರಿಗೆ ಅವಕಾಶವಿರಲಿಲ್ಲ. ದಬಂಗ್ ಡೆಲ್ಲಿ ತಂಡವು ಚಾಂಪಿಯನ್ ಆಗಿತ್ತು.

ಷೇರು ಅಡ ಇರಿಸಿದ ಅದಾನಿ ಸಮೂಹ

ನವದೆಹಲಿ (ಪಿಟಿಐ): ಅದಾನಿ ಸಮೂಹವು ತಾನು ಅಂಬುಜಾ ಸಿಮೆಂಟ್ಸ್ ಮತ್ತು ಎಸಿಸಿ ಕಂಪನಿಗಳಲ್ಲಿ ಹೊಂದಿರುವ ಅಷ್ಟೂ ಷೇರುಗಳನ್ನು (ಅಂದಾಜು ₹ 1.03 ಲಕ್ಷ ಕೋಟಿ ಮೌಲ್ಯ) ಡಾಯಿಷ್ ಬ್ಯಾಂಕ್‌ನ ಹಾಂಗ್ ಕಾಂಗ್ ಶಾಖೆಯಲ್ಲಿ ಅಡ ಇರಿಸಿದೆ.

ಅಂಬುಜಾ ಸಿಮೆಂಟ್ಸ್‌ನಲ್ಲಿ ಅದಾನಿ ಸಮೂಹವು ಶೇಕಡ 63.15ರಷ್ಟು, ಎಸಿಸಿ ಕಂಪನಿಯಲ್ಲಿ ಶೇ 56.70ರಷ್ಟು ಷೇರುಗಳನ್ನು ಹೊಂದಿದೆ. 'ಕೆಲವು ಸಾಲಗಾರರು ಹಾಗೂ ಇತರ ಹಣಕಾಸು ಸಂಸ್ಥೆ/ವ್ಯಕ್ತಿಗಳ ಪ್ರಯೋಜನಕ್ಕಾಗಿ ಹೀಗೆ ಮಾಡಲಾಗಿದೆ' ಎಂದು ಸಮೂಹವು ಷೇರುಪೇಟೆಗೆ ನೀಡಿರುವ ಮಾಹಿತಿಯಲ್ಲಿ ತಿಳಿಸಿದೆ.

ಅಂಬುಜಾ ಸಿಮೆಂಟ್ಸ್ ಹಾಗೂ ಎಸಿಸಿ ಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುವುದಾಗಿ ಅದಾನಿ ಸಮೂಹವು ಹಿಂದಿನ ವಾರ ತಿಳಿಸಿತ್ತು.

ವಿಪ್ರೊ ಅಧ್ಯಕ್ಷ ರಿಷದ್ ಪ್ರೇಮ್‌ಜಿ ಹೇಳಿಕೆ • ಉದ್ಯೋಗಿಗಳ ವಿರುದ್ಧ ಕ್ರಮ

ಮೂನ್‌ಲೈಟಿಂಗ್: 300 ನೌಕರರ ವಜಾ



ರಿಷದ್ ಪ್ರೇಮ್‌ಜಿ

ನವದೆಹಲಿ (ಪಿಟಿಐ): ವಿಪ್ರೊ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಒಟ್ಟು 300 ಮಂದಿ ಪ್ರತಿಸ್ಪರ್ಧಿ ಕಂಪನಿಯೊಂದಕ್ಕೆ ಕೂಡ ಕೆಲಸ ಮಾಡುತ್ತಿದ್ದುದು ಪತ್ತೆಯಾಗಿದೆ ಎಂದು ವಿಪ್ರೊ ಅಧ್ಯಕ್ಷ ರಿಷದ್ ಪ್ರೇಮ್‌ಜಿ ಹೇಳಿದ್ದಾರೆ.

ಐ.ಟಿ. ಉದ್ಯೋಗಿಗಳು ಒಂದು ಕಂಪನಿಗೆ ಕೆಲಸ ಮಾಡುತ್ತಲೇ, ಇನ್ನೊಂದು ಕಂಪನಿಗಾಗಿಯೂ ಕೆಲಸ ಮಾಡಿಕೊಡುವ ಪ್ರವೃತ್ತಿಯನ್ನು (ಮೂನ್‌ಲೈಟಿಂಗ್) ಪ್ರೇಮ್‌ಜಿ ಅವರು ಈ ಹಿಂದೆ ಕಟುವಾಗಿ ಟೀಕಿಸಿದ್ದರು. ಕಾರ್ಯಕ್ರಮವೊಂದರಲ್ಲಿ ಬುಧವಾರ ಮಾತನಾಡಿದ ಪ್ರೇಮ್‌ಜಿ ಅವರು, ವಿಪ್ರೊದಲ್ಲಿ ಕೆಲಸ ಮಾಡುತ್ತಲೇ ಪ್ರತಿಸ್ಪರ್ಧಿ ಕಂಪನಿಗಳಿಗೂ ಕೆಲಸ ಮಾಡುವವರಿಗೆ ತಮ್ಮ ಕಂಪನಿಯಲ್ಲಿ ಸ್ಥಾನ ಇಲ್ಲ ಎಂದು ಹೇಳಿದ್ದಾರೆ.

ನಿಯಮ ಉಲ್ಲಂಘಿಸಿದ ನಿರ್ದಿಷ್ಟ ಪ್ರಕರಣಗಳಲ್ಲಿ ನೌಕರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ ಎಂದು ಪ್ರೇಮ್‌ಜಿ ಅವರು ನಂತರ ತಿಳಿಸಿದ್ದಾರೆ.

'ವಿಪ್ರೊದಲ್ಲಿ ಕೆಲಸ ಮಾಡುತ್ತಲೇ ಪ್ರತಿಸ್ಪರ್ಧಿ ಕಂಪನಿಗಳಿಗೂ ಕೆಲಸ ಮಾಡಿಕೊಡುವುದು ಪ್ರಾಮಾಣಿಕತೆಯನ್ನು ಸಂಪೂರ್ಣವಾಗಿ ಮರೆಯುವುದಕ್ಕೆ ಸಮ' ಎಂದು ಅವರು ಹೇಳಿದ್ದಾರೆ. ಮೂನ್‌ಲೈಟಿಂಗ್ ಎಂಬುದು ಮೋಸದ ಕೃತ್ಯ ಎಂದು ಪ್ರೇಮ್‌ಜಿ ಈ ಹಿಂದೆ ಟ್ವೀಟ್ ಮಾಡಿದ್ದರು. ಐ.ಟಿ. ಉದ್ಯಮದಲ್ಲಿ ಮೂನ್‌ಲೈಟಿಂಗ್ ಈಗ ಚರ್ಚೆಯ ವಸ್ತುವಾಗಿದೆ.

ಐ.ಟಿ. ಸೇವಾ ಕಂಪನಿ ಇನ್ಫೊಸಿಸ್ ತನ್ನ ನೌಕರರಿಗೆ ಈಚೆಗೆ, ಮೂನ್‌ಲೈಟಿಂಗ್‌ಗೆ ಅವಕಾಶ ಇಲ್ಲ ಎಂದು ಇ-ಮೇಲ್ ಮೂಲಕ ತಿಳಿಸಿತ್ತು. ಮೂನ್‌ಲೈಟಿಂಗ್ ಎಂಬುದು ಅನೈತಿಕ ಕೆಲಸ ಎಂದು ಐಬಿಎಂ ಹೇಳಿದೆ.

ಮೂನ್‌ಲೈಟಿಂಗ್ ಅಂದರೆ ಇನ್ನೊಂದು ಉದ್ಯೋಗವನ್ನು ಗೋಪ್ಯವಾಗಿ ಮಾಡುವುದು ಎಂದು ಅರ್ಥ. ಪಾರದರ್ಶಕವಾಗಿ ಇರಬೇಕು ಎಂದಾದರೆ, ವಾರಾಂತ್ಯದಲ್ಲಿ ತಾವು ಒಂದು ಕೆಲಸ ಮಾಡುತ್ತಿರುವುದಾಗಿ ನೇರವಾಗಿ ಹೇಳಬಹುದು ಎಂದು ಪ್ರೇಮ್‌ಜಿ ವಿವರಿಸಿದ್ದಾರೆ.

'ಆದರೆ, ವಿಪ್ರೊ ಕಂಪನಿಗಾಗಿ ಕೆಲಸ ಮಾಡುತ್ತಲೇ ಗೋಪ್ಯವಾಗಿ ಪ್ರತಿಸ್ಪರ್ಧಿ ಕಂಪನಿಗೆ ಕೆಲಸ ಮಾಡಲು ಅವಕಾಶವಿಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಜಿಡಿಪಿ ಬೆಳವಣಿಗೆ ಅಂದಾಜು ಪರಿಷ್ಕರಿಸಿದ ಎಡಿಬಿ

ನವದೆಹಲಿ (ಪಿಟಿಐ): 2022-23ನೇ ಸಾಲಿಗೆ ಭಾರತದ ಆರ್ಥಿಕ ಬೆಳವಣಿಗೆ ದರದ ಅಂದಾಜನ್ನು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಶೇಕಡ 7ಕ್ಕೆ ಇಳಿಕೆ ಮಾಡಿದೆ. ಎಡಿಬಿ ಈ ಮೊದಲು, ದೇಶದ ಜಿಡಿಪಿ ಬೆಳವಣಿಗೆ ಶೇ 7.2ರಷ್ಟು ಇರಲಿದೆ ಎಂದು ಅಂದಾಜಿಸಿತ್ತು.

ಹಣದುಬ್ಬರ ಪ್ರಮಾಣವು ನಿರೀಕ್ಷೆಗಿಂತ ಹೆಚ್ಚಿರುವುದು ಹಾಗೂ ಬಿಗಿ ಹಣಕಾಸಿನ ನೀತಿಯು ಅಂದಾಜು ತಗ್ಗಿಸಿರುವುದಕ್ಕೆ ಕಾರಣ.

'ಫ್ರೀಡಂ ಹೆಲ್ದಿ ಆಯಿಲ್ಸ್'ಗೆ ಪ್ರಶಸ್ತಿ

ಬೆಂಗಳೂರು: ಜೆಮಿನಿ ಎಡಿಬಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್ (ಜಿಇಎಫ್ ಇಂಡಿಯಾ) ಕಂಪನಿಯ ಬ್ರ್ಯಾಂಡ್ ಆಗಿರುವ 'ಫ್ರೀಡಂ ಹೆಲ್ದಿ ಕುಕಿಂಗ್ ಆಯಿಲ್ಸ್'ಗೆ 'ಎಐಎಂಎ- ಆರ್.ಕೆ. ಸ್ವಾಮಿ ಅತ್ಯುತ್ತಮ ಬ್ರ್ಯಾಂಡ್ ಪ್ರಶಸ್ತಿ 2021' ದೊರೆತಿದೆ.

ಎಐಎಂಎ ಸಂಸ್ಥೆಯ 49ನೇ ರಾಷ್ಟ್ರೀಯ ಆಡಳಿತ ನಿರ್ವಹಣೆ ಸಮಾವೇಶದಲ್ಲಿ ಈ ಪ್ರಶಸ್ತಿ ವಿತರಿಸಲಾಯಿತು. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು 'ಫ್ರೀಡಂ ಹೆಲ್ದಿ ಕುಕಿಂಗ್ ಆಯಿಲ್ಸ್'ನ ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ಹಿರಿಯ ಉಪಾಧ್ಯಕ್ಷ ಪಿ. ಚಂದ್ರಶೇಖರ ರೆಡ್ಡಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಪ್ರಶಸ್ತಿ ಬಗ್ಗೆ ಪ್ರತಿಕ್ರಿಯೆ ನೀಡಿರುವ ಜೆಮಿನಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಚೌಧರಿ, 'ಪ್ರಶಸ್ತಿ ಪಡೆದಿರುವುದು ಸಂತಸ ತಂದಿದೆ. ನಮ್ಮ ಸಿಬ್ಬಂದಿಯ ಕಠಿಣ ಪರಿಶ್ರಮ ಮತ್ತು ಕಳೆದ ಹಲವು ವರ್ಷಗಳಿಂದ ನಮ್ಮೊಂದಿಗೆ ಕೆಲಸ ಮಾಡುತ್ತಿರುವ ವಿತರಕರು ಹಾಗೂ ಏಜೆನ್ಸಿ ಪಾಲುದಾರರ ಶ್ರಮದಿಂದಾಗಿ ಇದನ್ನು ಗೆಲ್ಲಲು ಸಾಧ್ಯವಾಗಿದೆ' ಎಂದು ಹೇಳಿದ್ದಾರೆ.

ಇಥಿಯೋಪಿಯನ್ ಏರ್‌ಲೈನ್ಸ್ ಸೇವೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಥಿಯೋಪಿಯನ್ ಏರ್‌ಲೈನ್ಸ್ ವಿಮಾನಯಾನ ಕಂಪನಿಯು ಬೆಂಗಳೂರಿನಿಂದ ಅಮೆರಿಕ, ಕೆನಡಾ ಮತ್ತು ಐರೋಪ್ಯ ರಾಷ್ಟ್ರಗಳಿಗೆ ಸೇವೆಯನ್ನು ವಿಸ್ತರಿಸುತ್ತಿದೆ ಎಂದು ಪ್ರಕಟಣೆಯು ತಿಳಿಸಿದೆ.

ಕಂಪನಿ ಈ ಮೊದಲು ಇಥಿಯೋಪಿಯಾದ ಅಡ್ಡಿಸ್ ಅಬಾಬಕ್ಕೆ ಮಾತ್ರ ಸೇವೆ ಒದಗಿಸುತ್ತಿತ್ತು. 2019ರಲ್ಲಿ ಬೆಂಗಳೂರಿನಿಂದ ಸೇವೆ ಆರಂಭಿಸಿರುವ ಕಂಪನಿಯು ವಾರಕ್ಕೆ 3 ದಿನ ಇಥಿಯೋಪಿಯಾಕ್ಕೆ ವಿಮಾನ ಸೇವೆ ನೀಡುತ್ತಿದೆ.

ಎಬಿಜಿ ಶಿಪ್‌ಯಾರ್ಡ್ ಸಂಸ್ಥಾಪಕ ರಿಷಿ ಅಗರ್ವಾಲ್ ಬಂಧನ

ನವದೆಹಲಿ (ಪಿಟಿಐ): ಎಬಿಜಿ ಶಿಪ್‌ಯಾರ್ಡ್ ಲಿಮಿಟೆಡ್‌ನ ಸಂಸ್ಥಾಪಕ ರಿಷಿ ಕಮಲೇಶ್ ಅಗರ್ವಾಲ್ ಅವರನ್ನು ಸಿಬಿಐ ಬುಧವಾರ ಬಂಧಿಸಿದೆ. ಕಮಲೇಶ್ ಅವರು ಬ್ಯಾಂಕ್‌ಗಳಿಗೆ ₹ 22,842 ಕೋಟಿ ವಂಚಿಸಿದ ಆರೋಪ ಎದುರಿಸುತ್ತಿದ್ದಾರೆ.

ಅಗರ್ವಾಲ್ ಅವರನ್ನು ಬುಧವಾರ ವಿಚಾರಣೆಗೆ ಕರೆಯಲಾಗಿತ್ತು. ಅವರು ತನಿಖೆಗೆ ಸಹಕರಿಸುತ್ತಿಲ್ಲ ಎಂಬ ಕಾರಣಕ್ಕೆ ಬಂಧಿಸಲಾಗಿದೆ ಎಂದು ಸಿಬಿಐ ಹೇಳಿದೆ. ಭಾರತೀಯ ಸ್ಟೇಟ್ ಬ್ಯಾಂಕ್ ಸಲ್ಲಿಸಿದ ದೂರು ಆಧರಿಸಿ ಸಿಬಿಐ ಪ್ರಕರಣ ದಾಖಲಿಸಿಕೊಂಡಿತ್ತು.

ಕಬಡ್ಡಿ ಟೂರ್ನಿ ಆಯೋಜಿಸಿರಲಿಲ್ಲ: ಭಾರತ ಅಮೆಚೂರ್ ಕಬಡ್ಡಿ ಫೆಡರೇಷನ್

ನವದೆಹಲಿ (ಪಿಟಿಐ): ಆಟಗಾರ್ತಿಯರಿಗೆ ಶೌಚಾಲಯದಲ್ಲಿ ಇಟ್ಟಿದ್ದ ಆಹಾರ ವಿತರಣೆಯಿಂದ ಸುದ್ದಿಯಾಗಿರುವ ಕಬಡ್ಡಿ ಟೂರ್ನಿಯನ್ನು ತಾವು ಆಯೋಜಿಸಿರಲಿಲ್ಲ ಎಂದು ಭಾರತ ಅಮೆಚೂರ್ ಕಬಡ್ಡಿ ಫೆಡರೇಷನ್ (ಎಕೆಎಫ್‌ಐ) ಮತ್ತು ಉತ್ತರ ಪ್ರದೇಶ ರಾಜ್ಯ ಕಬಡ್ಡಿ ಸಂಸ್ಥೆಗಳು ಹೇಳಿಕೊಂಡಿವೆ.

ಉತ್ತರ ಪ್ರದೇಶದ ಸಹರಾನ್‌ಪುರದಲ್ಲಿ ನಡೆದಿದ್ದ ರಾಜ್ಯಮಟ್ಟದ ಕಬಡ್ಡಿ ಟೂರ್ನಿಯಲ್ಲಿ ಮಹಿಳಾ ಆಟಗಾರ್ತಿಯರಿಗೆ ಶೌಚಾಲಯದಲ್ಲಿ ಇಟ್ಟಿದ್ದ ಆಹಾರ ಪೂರೈಸಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಕ್ರೀಡಾ ಅಧಿಕಾರಿಯೊಬ್ಬರನ್ನು ಅಮಾನತು ಮಾಡಲಾಗಿತ್ತು. ಇದೇ 16ರಂದು ನಡೆದಿದೆ ಎನ್ನಲಾದ ಈ ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು.

'16 ವರ್ಷದೊಳಗಿನವರ ಈ ಟೂರ್ನಿ ಆಯೋಜಿಸುವಲ್ಲಿ ನಮ್ಮ ಪಾತ್ರ ಇಲ್ಲ. ಇದು ಉತ್ತರ ಪ್ರದೇಶ ಸರ್ಕಾರಕ್ಕೆ ಸಂಬಂಧಿಸಿದ ಟೂರ್ನಿ. ಅವರೇ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ನಮಗೆ ಈ ಕುರಿತು ಮಾಹಿತಿಯೇ ಇರಲಿಲ್ಲ' ಎಂದು ಎಕೆಎಫ್‌ಐ ವ್ಯವಹಾರಗಳನ್ನು ನೋಡಿಕೊಳ್ಳುತ್ತಿರುವ, ದೆಹಲಿ ಹೈಕೋರ್ಟ್ ನೇಮಿಸಿರುವ ಆಡಳಿತಗಾರ ಎಸ್.ಪಿ. ಗರ್ಗ್ ಹೇಳಿದ್ದಾರೆ.

'ಈ ಟೂರ್ನಿಯು ನಮ್ಮ ವಾರ್ಷಿಕ ವೇಳಾಪಟ್ಟಿಯಲ್ಲಿ ಇರಲಿಲ್ಲ. ರಾಜ್ಯ ಸರ್ಕಾರದ ಕ್ರೀಡಾ ಇಲಾಖೆ ಈ ಟೂರ್ನಿಯನ್ನು ಆಯೋಜಿಸಿತ್ತು' ಎಂದು ಉತ್ತರ ಪ್ರದೇಶ ಕಬಡ್ಡಿ ಸಂಸ್ಥೆಯ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಹೇಳಿದ್ದಾರೆ.

ವಿಶ್ವಕಪ್‌ಗೆ ಗಪ್ಟಿಲ್



ಗಪ್ಟಿಲ್

ಕ್ರೈಸ್ಟ್‌ಚರ್ಚ್ (ಪಿಟಿಐ): ಕೇನ್ ವಿಲಿಯಮ್ಸನ್ ನಾಯಕತ್ವದ ನ್ಯೂಜಿಲೆಂಡ್ ತಂಡವು ಮುಂದಿನ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಕಣಕ್ಕಿಳಿಯಲಿವೆ. ತಂಡದ ಆರಂಭಿಕ ಬ್ಯಾಟರ್ ಮಾರ್ಟಿನ್ ಗಪ್ಟಿಲ್ ತಂಡಕ್ಕೆ ಮರಳಿರುವುದು ಬಲ ಹೆಚ್ಚಿಸಿದೆ. ಗಾಯದಿಂದ ಅವರು ಈಚೆಗೆ ಹೊರಗುಳಿದಿದ್ದರು. 35 ವರ್ಷದ ಅನುಭವಿ ಈಗ ಫಿಟ್ ಆಗಿದ್ದಾರೆ.

ತಂಡ: ಕೇನ್ ವಿಲಿಯಮ್ಸನ್ (ನಾಯಕ), ಟಿಮ್ ಸೌಥಿ, ಈಶ್ ಸೋಧಿ, ಮಿಚೆಲ್ ಸ್ಯಾಂಟನರ್, ಗ್ಲೆನ್ ಫಿಲಿಪ್ಸ್, ಜಿಮ್ಮಿ ನಿಶಾಮ್, ಡೆರಿಲ್ ಮಿಚೆಲ್, ಆ್ಯಡಂ ಮಿಲ್ನೆ, ಮಾರ್ಟಿನ್ ಗಪ್ಟಿಲ್, ಲಾಕ್ಲನ್ ಫರ್ಗುಸನ್, ಡೆವೊನ್ ಕಾನ್ವೆ, ಮಾರ್ಕ್ ಚಾಪ್‌ಮನ್, ಮಿಚೆಲ್ ಬ್ರೇಸ್‌ವೆಲ್, ಟ್ರೆಂಟ್ ಬೌಲ್ಟ್, ಫಿನ್ ಅಲೆನ್.



ಇಸ್ತಾಂಬುಲ್‌ನಲ್ಲಿರುವ ಇರಾನ್ ರಾಯಭಾರಿ ಕಚೇರಿ ಎದುರು ಬುಧವಾರ ಮಹಿಳೆಯೊಬ್ಬರು ತಮ್ಮ ಕೂದಲನ್ನು ಕತ್ತರಿಸಿಕೊಳ್ಳುವ ಮೂಲಕ ಅಮೀನಿ ಅವರ ಸಾವಿನ ಕುರಿತು ಆಕ್ರೋಶ ವ್ಯಕ್ತಪಡಿಸಿದರು —ಎಎಫ್‌ಪಿ ಚಿತ್ರ

ಹಿಜಾಬ್: ಇರಾನ್‌ನಲ್ಲಿ ಪ್ರತಿಭಟನೆ

ಟೆಹರಾನ್/ಪ್ಯಾರಿಸ್ (ಎಪಿ/ಎಫ್‌ಪಿ): ಹಿಜಾಬ್ ಅನ್ನು 'ಸರಿಯಾಗಿ' ಧರಿಸಿರಲಿಲ್ಲ ಎನ್ನುವ ಕಾರಣಕ್ಕೆ 22 ವರ್ಷದ ಯುವತಿ ಮಹಸಾ ಅಮೀನಿ ಅವರನ್ನು ಇರಾನಿನ ನೈತಿಕ ಪೊಲೀಸರು ಇದೇ 13ರಂದು ಬಂಧಿಸಿದ್ದರು. ಬಂಧನವಾದ ಮೂರು ದಿನಗಳಲ್ಲಿ ಅಮೀನಿ ಅವರು ಮೃತಪಟ್ಟರು. ಇದರ ವಿರುದ್ಧ ಇರಾನ್‌ನ ಮಹಿಳೆಯರು ದೇಶದಾದ್ಯಂತ ತೀವ್ರ ಪ್ರತಿಭಟನೆ ಆರಂಭಿಸಿದ್ದಾರೆ.

ಒಂದೆಡೆ, ಇರಾನ್ ಸರ್ಕಾರದ ವಿರುದ್ಧ ಭುಗಿಲೆದ್ದಿರುವ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದವರಲ್ಲಿ ಬುಧವಾರ ಇಬ್ಬರು ಮೃತಪಟ್ಟಿದ್ದಾರೆ. ಇಲ್ಲಿಯವರೆಗೆ 8 ಮಂದಿ ಪ್ರತಿಭಟನಕಾರರು ಸಾವಿಗೀಡಾಗಿದ್ದಾರೆ. ಮತ್ತೊಂದೆಡೆ, ಇರಾನ್ ಅಧ್ಯಕ್ಷ ಇಬ್ರಾಹಿಮ್ ರಯಿಸಿ ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಯಲ್ಲಿ ಮಾತನಾಡಿ, ಅಮೀನಿ ಸಾವಿನ ಕುರಿತು ತನಿಖೆ ನಡೆಸುವುದಾಗಿ ಹೇಳಿದ್ದಾರೆ. ಅಮೀನಿ ಸಾವಿನ ಕುರಿತು ವಿಶ್ವಸಂಸ್ಥೆ, ಅಮೆರಿಕ, ಫ್ರಾನ್ಸ್, ಬ್ರಿಟನ್ ದೇಶಗಳು ಕಳವಳ ವ್ಯಕ್ತಪಡಿಸಿವೆ.

ವಿಡಿಯೊ ವೈರಲ್: ದೇಶದಲ್ಲಿ ಇಟರ್‌ನೆಟ್‌ಗೆ ನಿರ್ಬಂಧವಿದ್ದರೂ, 'ಡೆತ್ ಟು ದಿ ಡಿಕ್ಟೇಟರ್' (ಸರ್ವಾಧಿಕಾರಿ ಸಾಯಲಿ), 'ವಿಮೆನ್, ಲೈಫ್, ಫ್ರೀಡಂ' (ಮಹಿಳೆ, ಜೀವನ, ಸ್ವಾತಂತ್ರ್ಯ) ಎಂದು ಕೂಗುತ್ತಿದ್ದ ಪ್ರತಿಭಟನಕಾರರ ವಿಡಿಯೊ ವೈರಲ್ ಆಗಿದೆ. ಪ್ರತಿಭಟನೆ ನಡೆಸುತ್ತಿದ್ದ ಮಹಿಳೆಯರು ತಮ್ಮ ಹಿಜಾಬ್ ಅನ್ನು ತೆಗೆದು, ಬೆಂಕಿಗೆ ಹಾಕಿದ ದೃಶ್ಯಗಳು ಹಾಗೂ ಒಬ್ಬ ಮಹಿಳೆ ತನ್ನ ಕೂದಲನ್ನು ಕತ್ತರಿಸಿಕೊಳ್ಳುತ್ತಿರುವ ದೃಶ್ಯ ಇರುವ ವಿಡಿಯೊ ಕೂಡ ವೈರಲ್ ಆಗಿದೆ.

ಅಶ್ರುವಾಯು ಪ್ರಯೋಗ

ಕಳೆದ ಐದು ದಿನಗಳಿಂದ ಪ್ರತಿಭಟನೆ ನಡೆಯುತ್ತಿದ್ದು, ಆಕ್ರೋಶದ ಕಿಡಿಯು ದೇಶದ 15 ನಗರಗಳಿಗೆ ಹಬ್ಬಿದೆ. ಪ್ರತಿಭಟನಕಾರರನ್ನು ತಡೆಯಲು ಪೊಲೀಸರು ಬುಧವಾರ ಅಶ್ರುವಾಯು ಶೆಲ್ ಸಿಡಿಸಿದರು. ಇರಾನ್‌ನ ಅರೆಸೇನಾ ಪಡೆ ಯೋಧರು ಮಹಿಳೆಯರನ್ನು ಬೈಕ್‌ಗಳಲ್ಲಿ ಅಟ್ಟಿಸಿಕೊಂಡು ಹೋಗಿದ್ದಾರೆ. ಅವರಿಗೆ ಬೆತ್ತಗಳಿಂದ ಹೊಡೆದಿದ್ದಾರೆ.

ಈ ಎಲ್ಲದರಿಂದ ಆಕ್ರೋಶಗೊಂಡ ಪ್ರತಿಭಟನಕಾರರು ಭದ್ರತಾ ಪಡೆಗಳ ಮೇಲೆ ಕಲ್ಲು ಎಸೆದಿದ್ದಾರೆ. ಪೊಲೀಸ್ ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ಪೊಲೀಸರ ಮೇಲೆ ಕಸದ ಬುಟ್ಟಿಗಳನ್ನು ಎಸೆದಿದ್ದಾರೆ.

ಬ್ರಿಟನ್: ತೀವ್ರಗೊಂಡ ಹಿಂದೂ– ಮುಸ್ಲಿಂ ಸಂಘರ್ಷ

ಲಂಡನ್ (ಪಿಟಿಐ): ದುಬೈನಲ್ಲಿ ಇತ್ತೀಚೆಗೆ ಮುಕ್ತಾಯವಾದ ಏಷ್ಯಾ ಕಪ್ ಟೂರ್ನಿಯ ಭಾರತ-ಪಾಕಿಸ್ತಾನ ನಡುವಿನ ಕ್ರಿಕೆಟ್ ಪಂದ್ಯದ ನಂತರ ಪೂರ್ವ ಇಂಗ್ಲೆಂಡ್‌ನ ಲಿಸೆಸ್ಟರ್ ನಗರದಲ್ಲಿ ಹಿಂದೂ– ಮುಸ್ಲಿಮರ ನಡುವೆ ಹಿಂಸಾತ್ಮಕ ಘರ್ಷಣೆ ತೀವ್ರಗೊಂಡಿದೆ. ಬರ್ಮಿಂಗ್‌ಹ್ಯಾಂನಲ್ಲಿ ಹಿಂದೂ ದೇವಾಲಯದ ಎದುರು ಪ್ರತಿಭಟಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಬುಧವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಿಂಸಾಚಾರ ಸಂಬಂಧ ಲಿಸೆಸ್ಟರ್‌ಶೈರ್‌ನಲ್ಲಿ ಇದುವರೆಗೆ 47 ಜನರನ್ನು ಬಂಧಿಸಲಾಗಿದೆ. ಬಂಧಿತರಲ್ಲಿ ಬಹುತೇಕರು ಬರ್ಮಿಂಗ್‌ಹ್ಯಾಂನವರು. ಶನಿವಾರ ಘಟನೆ ವೇಳೆ ಬಂಧಿಸಲಾದ ಸ್ಥಳೀಯ ಯುವಕ ಅಮೋಸ್ ನೊರೊನ್ಹಾ (20) ಎಂಬಾತ ಮಾರಕಾಸ್ತ್ರ ಹೊಂದಿದ್ದ ಬಗ್ಗೆ ತಪ್ಪೊಪ್ಪಿಕೊಂಡಿದ್ದು, ಲಿಸೆಸ್ಟರ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಆತನಿಗೆ ಹತ್ತು ತಿಂಗಳ ಶಿಕ್ಷೆ ವಿಧಿಸಿದೆ ಎಂದು ಪೊಲೀಸರು ಹೇಳಿದ್ದಾರೆ.

ಕಳೆದ ಐದು ದಿನಗಳ ಹಿಂದೆ ಶುರುವಾದ ಘರ್ಷಣೆ ಹಿಂಸಾಚಾರಕ್ಕೆ ತಿರುಗಿದ್ದು, ದ್ವೇಷಮಯ ವಾತಾವರಣ ಉಂಟಾಗಿದೆ. ಬುಧವಾರವೂ ಪೊಲೀಸರು ಗಸ್ತು ನಡೆಸಿದರು. ಸಾಮರಸ್ಯ ಕಾಪಾಡಲು ಉಭಯ ಸಮುದಾಯದ ನಾಯಕರು ಜಂಟಿ ಕರೆ ಕೊಟ್ಟಿದ್ದಾರೆ. 'ಪ್ರಚೋದನೆ ಮತ್ತು ಹಿಂಸಾಚಾರ ತಕ್ಷಣವೇ ನಿಲ್ಲಿಸಿ. ಪರಸ್ಪರರ ಪೂಜಾ, ಪ್ರಾರ್ಥನಾ ಸ್ಥಳಗಳನ್ನು ಗೌರವಿಸಿ' ಎಂದು ಇಸ್ಕಾನ್ ದೇವಾಲಯದ ಅಧ್ಯಕ್ಷ ಪ್ರದ್ಯುಮ್ನ ದಾಸ್ ಮನವಿ ಮಾಡಿದರು.

ಹಿಂದೂ ದೇಗುಲಗಳಿಗೆ ಆಗಿರುವ ಹಾನಿ ಹಾಗೂ ಭಾರತೀಯರ ಮೇಲಿನ ದೌರ್ಜನ್ಯವನ್ನು ಭಾರತೀಯ ಹೈಕಮಿಷನ್ ಖಂಡಿಸಿ, ಸಂತ್ರಸ್ತರಿಗೆ ರಕ್ಷಣೆ ನೀಡುವಂತೆ ಒತ್ತಾಯಿಸಿದೆ.

ಮುಂಬೈ ಧಾರಣೆ

ಶೇಂಗಾ

21-9-2022

ಜಾವಾ 70/80(ಹೊಸ)	11800-11850
ಜಾವಾ 80/90(ಹೊಸ)	10800-10850
ದಪ್ಪ ಮಧ್ಯಪ್ರದೇಶ(ಹೊಸ)	10350-10450
ದಪ್ಪ ಗುಜರಾತ್(ಹೊಸ)	10950-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1690)
ಒಂದು ವಾರದ ಡೆಲಿವರಿ	1665 (1685)
ಸೋಯಾ ಕಚ್ಚಾ	1135 (1120)
ಪಾಮ್ ವಾರದ ಡೆಲಿವರಿ	928 (918)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

49400 (49100)

ಬೆಳ್ಳಿ ಕೆ.ಜಿ 56,650 (56,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಹೊನ್ನಾಳಿ	
ರಾಶಿ	46801-47701
ಕಾರ್ಕಳ	
ಹೊಸತು	40000-47500
ಹಳತು	46000-56000
ಕುಮಟಾ	
ಚಿಪ್ಪು	29019-33689
ಕೋಕ	21089-33019
ಫ್ಯಾಕ್ಟರಿ	10569-20899
ಹೊಸಚಾಲಿ	38699-42509
ಕುಂದಾಪುರ	
ಹಳೆಚಾಲಿ	50000-56000
ಹೊಸಚಾಲಿ	40000-47500
ಪುತ್ತೂರು	
ಕೋಕ	11000-26000
ಹೊಸತು	34500-47500
ಶಿವಮೊಗ್ಗ	
ರಾಶಿ	47069-51089
ಸಿದ್ದಾಪುರ	
ಬಿಳಿಗೋಟು	30199-36099
ಚಾಲಿ	37899-42599
ಕೋಕ	27699-34199
ಕೆಂಪುಗೋಟು	34899-35619
ರಾಶಿ	48699-51099
ತಟ್ಟಿಬೆಟ್ಟೆ	43009-47099
ಶಿರಸಿ	
ಬೆಟ್ಟೆ	32899-48081
ಬಿಳಿಗೋಟು	27899-36699
ಚಾಲಿ	39189-43739
ಕೆಂಪುಗೋಟು	30122-37121
ರಾಶಿ	46599-50999

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15800	16250	221.10 ಸೆಂಟ್ಸ್
ಎಸಿ	9100	8400	8950	
ಆರ್‌ಪಿ	9800	9800	9800	ಲಂಡನ್
ಆರ್‌ಸಿ	4800	4500	4750	2202 ಡಾಲರ್ಸ್

ಸೇನೆ ಭಾಗಶಃ ಸನ್ನದ್ಧತೆ: ಪುಟಿನ್

ಯೋಧರನ್ನು ರಣಾಂಗಣಕ್ಕಿಳಿಸಲು ರಷ್ಯಾ ಕಾರ್ಯೋನ್ಮುಖ

ಮಾಸ್ಕೊ/ ಹಾರ್ಕಿವ್ (ಪಿಟಿಐ/ ಎಎಫ್‌ಪಿ): ಉಕ್ರೇನ್ ಮೇಲಿನ ವಿಶೇಷ ಸೇನಾ ಕಾರ್ಯಾಚರಣೆಯಲ್ಲಿ ಪಶ್ಚಿಮದ ರಾಷ್ಟ್ರಗಳ ಸಂಘಟಿತ ಶಸ್ತ್ರಾಸ್ತ್ರಗಳ ವಿರುದ್ಧ ಹೋರಾಡಲು ತಕ್ಷಣವೇ ಜಾರಿಗೆ ಬರುವಂತೆ ದೇಶದ ಸೇನೆಯ 'ಭಾಗಶಃ ಸಜ್ಜುಗೊಳಿಸುವಿಕೆ'ಗೆ ಆದೇಶ ನೀಡಲಾಗಿದ್ದು. ಇದರ ಅಗತ್ಯವಿತ್ತು ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಬುಧವಾರ ಘೋಷಿಸಿದ್ದಾರೆ.



ವ್ಲಾಡಿಮಿರ್ ಪುಟಿನ್

ಉಕ್ರೇನ್ ಜತೆಗಿನ ಸಂಘರ್ಷದಲ್ಲಿ ರಷ್ಯಾ ಸೇನೆ ಸಾಕಷ್ಟು ಹಿನ್ನಡೆ ಅನುಭವಿಸಿದ್ದು, ಪುಟಿನ್ ಅವರ ಆದೇಶದಿಂದ ದೇಶದಲ್ಲಿ ಮೀಸಲಿರುವ3 ಲಕ್ಷ ಯೋಧರಲ್ಲಿ ಭಾಗಶಃ ಯೋಧರು ಉಕ್ರೇನ್ ವಿರುದ್ಧದ ಸೇನಾ ಕಾರ್ಯಾಚರಣೆಗೆ ಇಳಿಯಲಿದ್ದಾರೆ. ಎರಡನೇ ಮಹಾಯುದ್ಧದ ನಂತರ ರಷ್ಯಾ ಅಧ್ಯಕ್ಷರೊಬ್ಬರು ಇದೇ ಮೊದಲ ಬಾರಿಗೆ ಸೇನೆಯ ಭಾಗಶಃ ಸನ್ನದ್ಧತೆಗೆ ಆದೇಶ ನೀಡಿದ್ದಾರೆ. ಪುಟಿನ್ ಅವರು ಈ ಕಾರ್ಯಾದೇಶಕ್ಕೆ ಈಗಾಗಲೇ ಸಹಿ ಕೂಡ ಮಾಡಿದ್ದಾರೆ. ಇದರಿಂದ ಉಕ್ರೇನ್‌ನಲ್ಲಿ ಸಂಘರ್ಷ ಗಮನಾರ್ಹವಾಗಿ ಹೆಚ್ಚಾಗುವ ಸಾಧ್ಯತೆ ಇದೆ.

ರಾಷ್ಟ್ರವನ್ನು ಉದ್ದೇಶಿಸಿ ದೂರದರ್ಶನದಲ್ಲಿ ಭಾಷಣ ಮಾಡಿದ ಅವರು, 'ಅಮೆರಿಕ ನೇತೃತ್ವದಲ್ಲಿ ಪಾಶ್ಚಿಮಾತ್ಯ ದೇಶಗಳು ಅಣ್ವಸ್ತ್ರ ಬೆದರಿಕೆ ಮುಂದುವರಿಸಿದರೆ, ದೇಶದ ಸಮಗ್ರತೆ, ಭದ್ರತೆಗೆ ಬೆದರಿಕೆಯೊಡ್ಡಿದರೆ, ನಮ್ಮ ಜನರನ್ನು ರಕ್ಷಿಸಲು ತನ್ನಲ್ಲಿರುವ ಅಪಾರವಾದ ಎಲ್ಲ ಶಸ್ತ್ರಾಗಾರದ ಶಕ್ತಿಯೊಂದಿಗೆ ತಕ್ಕ ಪ್ರತ್ಯುತ್ತರವನ್ನೂ ನೀಡುತ್ತೇವೆ. ನಮ್ಮ ಬಳಿ ನಾನಾ ರೀತಿಯ ಶಸ್ತ್ರಾಸ್ತ್ರಗಳಿವೆ. ಇವುಗಳಲ್ಲಿ ಕೆಲವು ನ್ಯಾಟೊ ದೇಶಗಳು ಹೊಂದಿರುವ ಶಸ್ತ್ರಾಸ್ತ್ರಗಳಿಗಿಂತಲೂ ಹೆಚ್ಚು ಆಧುನಿಕವಾಗಿವೆ. ಇದು ಬೂಟಾಟಿಕೆಯಲ್ಲ' ಎಂದು ಎಚ್ಚರಿಕೆ ನೀಡಿದರು.

ಲುಹಾನ್ಸ್ಕ್ ಮತ್ತು ಡೊನೆಟ್ಸ್ಕ್ ಗಣರಾಜ್ಯಗಳ ಜತೆಗೆ ರಷ್ಯಾ ನಿಯಂತ್ರಿತ ಕೆರ್ಸಾನ್ ಮತ್ತು ಝಪೊರೊಝಿಯಲ್ಲೂ ಇದೇ 23ರಿಂದ 27ರವರೆಗೆ ಜನಮತ ಗಣನೆ ನಡೆಸುವ ಘೋಷಣೆ ಹೊರಡಿಸಿದ ಮರು ದಿನವೇ ಪುಟಿನ್ ಈ ಎಚ್ಚರಿಕೆ ನೀಡಿದ್ದಾರೆ.

3 ಲಕ್ಷ ಯೋಧರ ಸೇರ್ಪಡೆ

ಸೇನೆಯ ಭಾಗಶಃ ಸಜ್ಜುಗೊಳಿಸುವಿಕೆ ಸಂದರ್ಭ 3 ಲಕ್ಷ ಮೀಸಲು ಯೋಧರನ್ನು ಸೇವೆಗೆ ಸೇರಿಸಿಕೊಳ್ಳಲಾಗುವುದು ಎಂದು ರಷ್ಯಾದ ರಕ್ಷಣಾ ಸಚಿವ ಸೆರ್ಗಿ ಶೋಯಿಗು ಹೇಳಿದರು.

'ಉಕ್ರೇನ್‌ನಲ್ಲಿನ ಸೇನಾ ಕಾರ್ಯಾಚರಣೆಯಲ್ಲಿ ಒಟ್ಟು 5,937 ಯೋಧರು ಸಾವನ್ನಪ್ಪಿದ್ದಾರೆ. ಉಕ್ರೇನ್ ಕಡೆಯಲ್ಲಿ ಸಾವುನೋವು ಹತ್ತು ಪಟ್ಟು ಹೆಚ್ಚಿದೆ. ಉಕ್ರೇನಿನ 61,207 ಸೈನಿಕರು ಕೊಲ್ಲಲ್ಪಟ್ಟಿದ್ದಾರೆ' ಎಂದು ಶೋಯಿಗು ಬಹಿರಂಗಪಡಿಸಿದರು. ಸೇನಾ ಕಾರ್ಯಾಚರಣೆಯಲ್ಲಿ ರಷ್ಯಾ ತನಗೆ ಆಗಿರುವ ನಷ್ಟದ ಮಾಹಿತಿಯನ್ನು ಇದೇ ಮೊದಲ ಬಾರಿಗೆ ಅಧಿಕೃತವಾಗಿ ಹೇಳಿದೆ.

ಪೂರ್ವ ಉಕ್ರೇನ್‌ನ ಡಾನ್‌ಬಾಸ್ ಪ್ರದೇಶ ಸ್ವತಂತ್ರಗೊಳಿಸುವುದು ನನ್ನ ಗುರಿ. ರಷ್ಯಾ ನಿಯಂತ್ರಿತ ಪ್ರದೇಶಗಳಲ್ಲಿ ಹೆಚ್ಚಿನವರು ಕೀವ್ ಆಡಳಿತ ಬಯಸುವುದಿಲ್ಲ

ವ್ಲಾಡಿಮಿರ್ ಪುಟಿನ್, ರಷ್ಯಾ ಅಧ್ಯಕ್ಷ

ಮೀಸಲು ಪಡೆಯನ್ನು ಒಳಗೊಳ್ಳುವ ಸೇನೆಯ ಭಾಗಶಃ ಸಜ್ಜುಗೊಳಿಸುವ ಪುಟಿನ್ ಆದೇಶವು ಉಕ್ರೇನ್ ಮೇಲಿನ ಆಕ್ರಮಣ ವಿಫಲವಾಗಿರುವುದನ್ನು ತೋರಿಸುತ್ತದೆ

ಬೆನ್ ವಾಲೆಸ್, ಬ್ರಿಟನ್ ರಕ್ಷಣಾ ಸಚಿವ

ಪ್ರಮುಖಾಂಶಗಳು:
- ಪುಟಿನ್ ಆದೇಶ ನೀಡಿದ ಬೆನ್ನಲ್ಲೇ ಉಕ್ರೇನ್‌ನ ಹಾರ್ಕಿವ್ ನಗರದ ವಸತಿ ಕಟ್ಟಡಗಳಿಗೆ ಅಪ್ಪಳಿಸಿದ ರಷ್ಯಾದ ಕ್ಷಿಪಣಿಗಳು
- ಹಾರ್ಕಿವ್ ನಗರದಲ್ಲಿ ಬುಧವಾರ ಕ್ಷಿಪಣಿಗಳು ಮತ್ತು ಬಾಂಬ್ ಸ್ಫೋಟಕ್ಕೆ ಅಕ್ಷರಶಃ ಬೆಚ್ಚಿಬಿದ್ದ ನಾಗರಿಕರು
- ಪುಟಿನ್ ಆದೇಶ ಮೊದಲೇ ಊಹಿಸಲಾಗಿತ್ತು. ಯುದ್ಧದಲ್ಲಿ ರಷ್ಯಾ ಯೋಜನೆ ಫಲಿಸಿಲ್ಲ– ಉಕ್ರೇನ್ ಅಧ್ಯಕ್ಷರ ಸಲಹೆಗಾರ ಮಿಖಾಯಿಲೊ ಪೊಡೊಲಿಯಾಕ್
- ಪುಟಿನ್ ಆದೇಶ ಹೊರಬೀಳುತ್ತಿದ್ದಂತೆ ದೇಶದಿಂದ ನಿರ್ಗಮಿಸಲು ವಿಮಾನ ಟಿಕೆಟ್ ಕಾಯ್ದಿರಿಸಲು ಮುಗಿಬಿದ್ದ ರಷ್ಯಾ ಪ್ರಜೆಗಳು
- ದೇಶದ ಗಡಿಗಳನ್ನು ಶೀಘ್ರವೇ ಮುಚ್ಚುವ ಆತಂಕದಲ್ಲಿ ಜನರು ದೇಶ ತೊರೆಯುತ್ತಿದ್ದು, ಬಹುತೇಕ ವಿಮಾನಗಳು ಭರ್ತಿ
- ವಿಮಾನ ಪ್ರಯಾಣ ಟಿಕೆಟ್ ದರ ದಿಢೀರನೇ ಗಗನಕ್ಕೇರಿದೆ
- ಏರ್ ಸರ್ಬಿಯಾದ ಮಾಸ್ಕೊ- ಬೆಲ್‌ಗ್ರೇಡ್ ನಡುವಿನ ವಿಮಾನಗಳ ಟಿಕೆಟ್ ಮುಂದಿನ ಹಲವು ದಿನಗಳವರೆಗೆ ಮುಂಗಡ ಮಾರಾಟ
- ಪುಟಿನ್ ಆಪ್ತಮಿತ್ರ ರಷ್ಯಾದ ಉದ್ಯಮಿ ಅಲಿಶರ್ ಉಸ್ಮಾನೋವ್ ಜರ್ಮನಿಯಾದ್ಯಂತ ಹೊಂದಿದ್ದ ಎರಡು ಡಜನ್ ಆಸ್ತಿಗಳು ಮುಟ್ಟುಗೋಲು



ಉಗಾಂಡದ ಕಂಪಾಲದಲ್ಲಿ ನಡೆದ ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮೂರು ಚಿನ್ನ ಮತ್ತು ಐದು ಕಂಚಿನ ಪದಕಗಳನ್ನು ಗೆದ್ದ ಕರ್ನಾಟಕ ತಂಡ: ಎಡದಿಂದ– ವ್ಹೀಲ್‌ಚೇರ್‌ನಲ್ಲಿರುವವರು: ಅಮ್ಮು ಮೋಹನ್, ಮಂಜುನಾಥ್ ಚಿಕ್ಕಯ್ಯ. ನಿಂತವರು: ಗೌತಮ್, ಶರಣಪ್ಪ ಮತ್ತು ಜಮ್‌ಶಾದ್

ಟಿಟಿ: ಫೈನಲ್‌ಗೆ ಗುಜರಾತ್– ದೆಹಲಿ

ಸೂರತ್ (ಪಿಟಿಐ): ಗುಜರಾತ್ ಮತ್ತು ದೆಹಲಿ ತಂಡಗಳು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಪುರುಷರ ಟೇಬಲ್ ಟೆನಿಸ್ ವಿಭಾಗದ ಫೈನಲ್‌ಗೆ ಲಗ್ಗೆಯಿಟ್ಟಿವೆ.

ಬುಧವಾರ ನಡೆದ ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಗುಜರಾತ್ 3-0ಯಿಂದ ಪಶ್ಚಿಮ ಬಂಗಾಳ ಎದುರು, ದೆಹಲಿ 3-2ರಿಂದ ಮಹಾರಾಷ್ಟ್ರ ತಂಡವನ್ನು ಮಣಿಸಿತು.ಗುಜರಾತ್ ತಂಡದ ಪರ ಅನುಭವಿ ಆಟಗಾರ ಹರ್ಮೀತ್ ದೇಸಾಯಿ, ಮಾನವ್ ಥಕ್ಕರ್ ಮತ್ತು ಮಾನುಷ್ ಶಾ ಮಿಂಚಿದರು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳ ತಂಡಗಳು ಮುಖಾಮುಖಿಯಾಗಲಿವೆ.

ಕ್ರಿಕೆಟ್: ಧೀರಜ್‌ಗೆ ಒಂಬತ್ತು ವಿಕೆಟ್

ಬೆಂಗಳೂರು: ಧೀರಜ್ ಎಸ್. ಗೌಡ ಗಳಿಸಿದ ಒಂಬತ್ತು ವಿಕೆಟ್‌ಗಳ ಬಲದಿಂದ ಪ್ರೆಸಿಡೆಂಟ್ಸ್ ಇಲೆವನ್ ತಂಡವು ಕೆಎಸ್‌ಸಿಎ ಅಂತರವಲಯ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಜಯ ಗಳಿಸಿತು.

ಆದಿತ್ಯ ಗ್ಲೋಬಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪ್ರೆಸಿಡೆಂಟ್ಸ್ ಇಲೆವನ್ ಇನಿಂಗ್ಸ್ ಮತ್ತು ನಾಲ್ಕು ರನ್‌ಗಳಿಂದ ಧಾರವಾಡ ವಲಯ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ಧಾರವಾಡ ವಲಯ:ಮೊದಲ ಇನಿಂಗ್ಸ್: 47.3 ಓವರ್‌ಗಳಲ್ಲಿ 128 ಆಲೌಟ್ (ಮಾಧವ ಧಾರವಾಡಕರ ಔಟಾಗದೆ 80; ಕರಣ್ 41ಕ್ಕೆ 2, ಧೀರಜ್ ಗೌಡ 17ಕ್ಕೆ 3, ಆರ್ಶಿಲ್ ರಾಜೇಂದ್ರ 11ಕ್ಕೆ 3, ಸಚಿನ್ ಎಸ್.ಎ. 24ಕ್ಕೆ 2). ಎರಡನೇ ಇನಿಂಗ್ಸ್: 34.2 ಓವರ್‌ಗಳಲ್ಲಿ 91 ಆಲೌಟ್ (ಮಾಧವ ಧಾರವಾಡಕರ 22; ಧೀರಜ್ ಗೌಡ 20ಕ್ಕೆ 6).

ಪ್ರೆಸಿಡೆಂಟ್ಸ್ ಇಲೆವನ್: 68 ಓವರ್‌ಗಳಲ್ಲಿ 223 (ವಿಶಾಲ್ ಓನತ್ 57, ಉಜ್ವಲ್ ಎಸ್. ಗೌಡ 55, ಧೀರಜ್ ಗೌಡ 57; ದೀಪಕ್ ನೀರಲಗಿ 41ಕ್ಕೆ 2, ರೋಹನ್ ಯರೇಸೀಮಿ 47ಕ್ಕೆ 3, ರಾಜೇಂದ್ರ ದುರಗಣ್ಣವರ್ 41ಕ್ಕೆ 2). ಫಲಿತಾಂಶ: ಪ್ರೆಸಿಡೆಂಟ್ಸ್ ಇಲೆವನ್‌ಗೆ ಇನಿಂಗ್ಸ್ ಮತ್ತು ನಾಲ್ಕು ರನ್‌ಗಳ ಜಯ.

ಐಎಎಫ್ ಕ್ರೀಡಾಂಗಣ: ಮಂಗಳೂರು ವಲಯ: ಮೊದಲ ಇನಿಂಗ್ಸ್: 75.3 ಓವರ್‌ಗಳಲ್ಲಿ 209 (ಪ್ರಥಮೇಶ್ ನಾಯಕ್ 22, ಹಾರ್ದಿಕ್ 31, ಹೃಷಿತ್ 27; ರ್‍ಯಾನ್ 28, ನಿಶ್ಚಿತ್ ಪೈ 61; ಶ್ರೀಧರ್ ಜಗತಾಪ 58ಕ್ಕೆ 6, ಶ್ರೇಯಸ್ ಎಸ್.ಪಿ. 33ಕ್ಕೆ 2). ಎರಡನೇ ಇನಿಂಗ್ಸ್: 52 ಓವರ್‌ಗಳಲ್ಲಿ 7ಕ್ಕೆ 184 (ಋಷಿ ಶೆಟ್ಟಿ 85; ವಿವೇಕ್ ನಾಯ್ಕ್ 40ಕ್ಕೆ 2). ರಾಯಚೂರು ವಲಯ: 54 ಓವರ್‌ಗಳಲ್ಲಿ 172 ಆಲೌಟ್ (ವಿಜಯ್ ರಾಜ್ 53, ಹರ್ಷವರ್ಧನ್ 45; ಆಶಿಶ್ ನಾಯ್ಕ್ 45ಕ್ಕೆ 2, ಆದಿತ್ಯ ಕೋಟ್ಯಾನ್ 24ಕ್ಕೆ 5). ಫಲಿತಾಂಶ: ಪಂದ್ಯ ಡ್ರಾ.

ಎರಡನೇ ಏಕದಿನ ಕ್ರಿಕೆಟ್ ಪಂದ್ಯ: ಇಂಗ್ಲೆಂಡ್‌ಗೆ ಕಠಿಣ ಸವಾಲೊಡ್ಡಿದ ಭಾರತ

ಕೌರ್ ಶತಕ ಸೊಬಗು

ಕ್ಯಾಂಟರ್‌ಬರಿ: ಸಮಚಿತ್ತ ಮತ್ತು ವೇಗಗಳೆರಡೂ ಮೇಳೈಸಿದ್ದ ಸುಂದರ ಶತಕ ದಾಖಲಿಸಿದ ಹರ್ಮನ್‌ಪ್ರೀತ್ ಕೌರ್ ಅವರ ಆಟದ ಬಲದಿಂದ ಭಾರತ ಮಹಿಳಾ ತಂಡವು ಇಂಗ್ಲೆಂಡ್ ವಿರುದ್ಧದ ಎರಡನೇ ಏಕದಿನ ಪಂದ್ಯದಲ್ಲಿ ಬೃಹತ್ ಮೊತ್ತ ಪೇರಿಸಿತು.

ಸೇಂಟ್ ಲಾರೆನ್ಸ್ ಮೈದಾನದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಆತಿಥೇಯ ಬಳಗದ ಲೆಕ್ಕಾಚಾರವನ್ನು ಕೌರ್ ಬುಡಮೇಲು ಮಾಡಿದರು. ಅನುಭವಿ ಬ್ಯಾಟರ್ ಕೌರ್ (ಅಜೇಯ 143; 111ಎ) ಸಿಡಿಸಿದ ಶತಕದ ಬಲದಿಂದ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 333 ರನ್ ಗಳಿಸಿತು.

ಭಾರತ ತಂಡದ ಆರಂಭ ಚೆನ್ನಾಗಿರಲಿಲ್ಲ. ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಕೇಟ್ ಕ್ರಾಸ್ ಎಸೆತದಲ್ಲಿ ಶಫಾಲಿ ವರ್ಮಾ ಕ್ಲೀನ್ ಬೌಲ್ಡ್ ಆದರು. ಸ್ಮೃತಿ ಮಂದಾನ (40 ರನ್) ಹಾಗೂ ಯಷ್ಟಿಕಾ ಭಾಟಿಯಾ (26 ರನ್) ಎರಡನೇ ವಿಕೆಟ್ ಜೊತೆಯಾಟದಲ್ಲಿ 54 ರನ್ ಸೇರಿಸಿ ಇನಿಂಗ್ಸ್‌ಗೆ ಚೇತರಿಕೆ ನೀಡಿದರು.

12ನೇ ಓವರ್‌ನಲ್ಲಿ ಯಷ್ಟಿಕಾ ಔಟಾದರು. ಕ್ರೀಸ್‌ಗೆ ಬಂದ ಹರ್ಮನ್‌ಪ್ರೀತ್ ತಾಳ್ಮೆಯಿಂದ ಆಡಿದರು. ತಂಡದ ಮೊತ್ತವು 100ರ ಗಡಿ ಮುಟ್ಟುವ ಮುನ್ನ ಮಂದಾನ ಕೂಡ ಔಟಾದರು. ಈ ಹಂತದಲ್ಲಿ ಕೌರ್ ಜೊತೆಗೂಡಿದ ಹರ್ಲೀನ್ ಡಿಯೊಲ್ (58; 72ಎ) ಇನಿಂಗ್ಸ್‌ಗೆ ಬಲ ತುಂಬಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 113 ರನ್ ಸೇರಿಸಿದರು.

33 ವರ್ಷದ ಹರ್ಮನ್‌ಪ್ರೀತ್ ಛಲದ ಆಟಕ್ಕೆ ಬೌಲರ್‌ಗಳು ಬಸವಳಿದರು. 37ನೇ ಓವರ್‌ನಲ್ಲಿ ಅರ್ಧಶತಕದ ಗಡಿ ಮುಟ್ಟಿದರು. ವೇಗವಾಗಿ ಬಂದ ಚೆಂಡು ಕಾಲಿಗೆ ಅಪ್ಪಳಿ ನೋವು ಅನುಭವಿಸಿದ ಕೌರ್ ಛಲ ಬಿಡಲಿಲ್ಲ.

ತಮ್ಮ ಆಟದ ವೇಗವನ್ನು ಹೆಚ್ಚಿಸಿದರು. ಇನಿಂಗ್ಸ್‌ನ ಕೊನೆಯ ಐದು ಓವರ್‌ಗಳಲ್ಲಿಯಂತೂ ಅವರ ಪ್ರಹಾರಕ್ಕೆ ಬೌಲರ್‌ಗಳ ಬಳಿ ಉತ್ತರವೇ ಇರಲಿಲ್ಲ. 30 ಎಸೆತಗಳಲ್ಲಿ 80 ರನ್‌ಗಳು ಹರಿದುಬಂದವು.



ಹರ್ಮನ್‌ಪ್ರೀತ್ ಕೌರ್

47ನೇ ಓವರ್‌ನಲ್ಲಿ ಅವರು ಶತಕ ಪೂರೈಸಿದರು. ಏಕದಿನ ಕ್ರಿಕೆಟ್‌ನಲ್ಲಿ ಹರ್ಮನ್‌ಗೆ ಇದು ಐದನೇ ಶತಕ. ಇನ್ನೊಂದು ಬದಿಯಲ್ಲಿ ಉತ್ತಮ ಜೊತೆ ನೀಡಿದ ಹರ್ಲೀನ್ ಕೂಡ ಅರ್ಧಶತಕ ಗಳಿಸಿದರು.

ಸ್ಕೋರ್ ಕಾರ್ಡ್

ಭಾರತ 5ಕ್ಕೆ333 (50 ಓವರ್)
ಶಫಾಲಿ ಬಿ ಕೇಟ್ 8 (7ಎ, 4X2), ಮಂದಾನ ಎಲ್‌ಬಿಡಬ್ಲ್ಯು ಬಿ ಎಕ್ಸೆಲ್‌ಸ್ಟೋನ್ 40 (51ಎ, 4X4, 6X1), ಯಷ್ಟಿಕಾ ಸಿ ಮತ್ತು ಬಿ ಡೀನ್ 26 (34ಎ, 4X4), ಹರ್ಮನ್‌ಪ್ರೀತ್ ಔಟಾಗದೆ 143 (111ಎ, 4X18, 6X4), ಹರ್ಲೀನ್ ಸಿ ವೈಟ್, ಬಿ ಲಾರೆನ್ 58 (72ಎ, 4X5, 6X2), ಪೂಜಾ ಸಿ ಲ್ಯಾಂಬ್ ಬಿ ಕೆಂಪ್ 18 (16ಎ, 4X3), ದೀಪ್ತಿ ಔಟಾಗದೆ 15 (9ಎ, 4X2
ಇತರೆ 25 (ಲೆಗ್‌ಬೈ1, ವೈಡ್ 24)

ವಿಕೆಟ್ ಪತನ: 1–12 (ಶಫಾಲಿ ವರ್ಮಾ;1.3), 2–66 (ಯಷ್ಟಿಕಾ ಭಾಟಿಯಾ;11.4), 3–99 (ಸ್ಮೃತಿ ಮಂದಾನ;19.1), 4–212 (ಹರ್ಲೀನ್ ಡಿಯೊಲ್; 39.6), 5–262 (ಪೂಜಾ ವಸ್ತ್ರಕರ್; 45.6)
ಬೌಲಿಂಗ್: ಲಾರೆನ್ ಬೆಲ್ 10–0–79–1, ಕೇಟ್ ಕ್ರಾಸ್ 10–0–68–1, ಫ್ರೆಯಾ ಕೆಂಪ್ 10–0–82–1, ಶಾರ್ಲೊಟ್ ಡೀನ್ 10–0–39–1, ಸೋಫಿ ಎಕ್ಸೆಲ್‌ಸ್ಟೋನ್ 10–0–64–1 (ವಿವರ ಅಪೂರ್ಣ)

ಪಶ್ಚಿಮ ವಲಯಕ್ಕೆ ಪಟೇಲ್ ಆಸರೆ

ಕೊಯಿಮತ್ತೂರು: ಆರನೇ ಕ್ರಮಾಂಕದ ಬ್ಯಾಟರ್ ಹೆತ್ ಪಟೇಲ್ ಬುಧವಾರ ಇಲ್ಲಿ ಆರಂಭವಾದ ದುಲೀಪ್ ಟ್ರೋಫಿ ಫೈನಲ್‌ನ ಮೊದಲ ದಿನವೇ ಕುಸಿಯುತ್ತಿದ್ದ ಪಶ್ಚಿಮ ವಲಯ ತಂಡಕ್ಕೆ ಆಸರೆಯಾದರು.

ಎಸ್.ಎನ್.ಆರ್ ಕಾಲೇಜು ಕ್ರಿಕೆಟ್ ಮೈದಾನದಲ್ಲಿ ಟಾಸ್ ಗೆದ್ದ ಪಶ್ಚಿಮ ವಲಯದ ನಾಯಕ ಅಜಿಂಕ್ಯ ರಹಾನೆ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಆದರೆ, ದಕ್ಷಿಣ ವಲಯ ತಂಡದ ಚೇಪುರಪಳ್ಳಿ ಸ್ಟೀಫನ್ (39ಕ್ಕೆ2) ಹಾಗೂ ಸಾಯಿಕಿಶೋರ್ (80ಕ್ಕೆ3) ಅವರ ಶಿಸ್ತಿನ ದಾಳಿಯ ಎದುರು ಆರಂಭಿಕ ಬ್ಯಾಟರ್‌ಗಳು ಕುಸಿದರು. ಕೇವಲ 99 ರನ್‌ಗಳಿಗೆ ಐದು ವಿಕೆಟ್‌ಗಳು ಪತನವಾದವು.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ಪಟೇಲ್ (ಬ್ಯಾಟಿಂಗ್ 96; 178ಎ, 4X6, 6X1) ಹಾಗೂ ಜಯದೇವ್ ಉನದ್ಕತ್ (ಬ್ಯಾಟಿಂಗ್ 39) ಇನಿಂಗ್ಸ್‌ಗೆ ಬಲ ತುಂಬಿದರು. ಇದರಿಂದಾಗಿ ದಿನದಾಟದ ಅಂತ್ಯಕ್ಕೆ ತಂಡವು 90 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 250 ರನ್ ಗಳಿಸಲು ಸಾಧ್ಯವಾಯಿತು.

ಸ್ಟೀಫನ್ ಬೌಲಿಂಗ್‌ನಲ್ಲಿ ಯಶಸ್ವಿ ಜೈಸ್ವಾಲ್, ಪ್ರಿಯಾಂಕ್ ಪಾಂಚಾಲ್ ಔಟಾದರು. ಶ್ರೇಯಸ್ ಅಯ್ಯರ್, ಸರ್ಫರಾಜ್ ಖಾನ್ ಹಾಗೂ ಶಮ್ಸ್ ಮಲಾನಿ ಅವರ ವಿಕೆಟ್‌ಗಳನ್ನು ಸಾಯಿಕಿಶೋರ್ ಕಬಳಿಸಿದರು. ಕೆಳಕ್ರಮಾಂಕದ ಬ್ಯಾಟರ್‌ಗಳಿಗೆ ಬಾಸಿಲ್ ಥಂಪಿ ಹಾಗೂ ಕನ್ನಡಿಗ ಕೆ. ಗೌತಮ್ ಬಿಸಿ ಮುಟ್ಟಿಸಿದರು.

ಆದರೆ ಇದೆಲ್ಲದರ ನಡುವೆಯೂ ದಿಟ್ಟ ಆಟವಾಡಿದ ಪಟೇಲ್ ಶತಕದ ಸನಿಹ ಬಂದು ನಿಂತಿದ್ದಾರೆ.

ಸಂಕ್ಷಿಪ್ತ ಸ್ಕೋರು: ಪಶ್ಚಿಮ ವಲಯ: 90 ಓವರ್‌ಗಳಲ್ಲಿ 8ಕ್ಕೆ 250 (ಶ್ರೇಯಸ್ ಅಯ್ಯರ್ 37, ಸರ್ಫರಾಜ್ ಖಾನ್ 34, ಹೆತ್ ಪಟೇಲ್ ಬ್ಯಾಟಿಂಗ್ 96, ಅತಿಥ್ ಶೇಟ್ 25, ಜಯದೇವ್ ಉನದ್ಕತ್ ಬ್ಯಾಟಿಂಗ್ 39, ಬಾಸಿಲ್ ಥಂಪಿ 42ಕ್ಕೆ2, ಚೇಪುರಪಳ್ಳಿ ಸ್ಟೀಫನ್ 39ಕ್ಕೆ2, ರವಿಶ್ರೀನಿವಾಸನ್ ಸಾಯಿಕಿಶೋರ್ 80ಕ್ಕೆ3) ದಕ್ಷಿಣ ವಲಯದ ವಿರುದ್ಧ.

2023ಕ್ಕೆ ಭಾರತದಲ್ಲಿ ಮೊದಲ ಮೋಟೊ ಗ್ರ್ಯಾನ್‌ಪ್ರಿ ರೇಸ್

ನವದೆಹಲಿ: ಭಾರತವು 2023ರಲ್ಲಿ ಚೊಚ್ಚಲ ಮೋಟೊ ಗ್ರ್ಯಾನ್ ಪ್ರಿ ವಿಶ್ವ ಚಾಂಪಿಯನ್‌ಷಿಪ್ ಮೋಟರ್ ರೇಸ್‌ಅನ್ನು ಆಯೋಜಿಸಲಿದೆ.

‘ಗ್ರ್ಯಾನ್ ಪ್ರಿ ಆಫ್ ಭಾರತ್‘ ಹೆಸರಿನಲ್ಲಿ ಗ್ರೇಟರ್ ನೊಯ್ಡಾದ ಬುದ್ಧ ಇಂಟರ್‌ನ್ಯಾಷನಲ್ ಸರ್ಕೀಟ್‌ನಲ್ಲಿ ಈ ರೇಸ್ ನಡೆಯಲಿದೆ. ಈ ಕುರಿತು ಮೋಟೊ ಗ್ರ್ಯಾನ್‌ಪಿ ವಾಣಿಜ್ಯಿಕ ಹಕ್ಕುಗಳ ಮಾಲೀಕತ್ವ ಕಂಪನಿ ದೋರ್ನಾ ಮತ್ತು ನೊಯ್ಡಾ ಮೂಲದ ರೇಸ್ ಪ್ರಾಯೋಜಕರಾದ ಫೇರ್‌ಸ್ಟ್ರೀಟ್ ಒಪ್ಪಂದ ಮಾಡಿಕೊಂಡಿವೆ.

19 ದೇಶಗಳ ರೇಸ್ ಸ್ಪರ್ಧಿಗಳು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ.

ಗಾಲ್ಫ್: ದೀಕ್ಷಾ, ತ್ವೇಷಾ ಕಣಕ್ಕೆ

ಡ್ರಾಮೊಲ್ಯಾಂಡ್ ಕ್ಯಾಸಲ್, ಐರ್ಲೆಂಡ್ (ಪಿಟಿಐ): ಭಾರತದ ದೀಕ್ಷಾ ದಾಗರ್, ತ್ವೇಷಾ ಮಲಿಕ್ ಮತ್ತು ವಾಣಿ ಕಪೂರ್ ಅವರು ಗುರುವಾರ ಇಲ್ಲಿ ಆರಂಭವಾಗುವ ಕೆಪಿಎಂಜಿ ಮಹಿಳಾ ಐರಿಷ್ ಓಪನ್ ಗಾಲ್ಫ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ದೀಕ್ಷಾ ಅವರು ಇತ್ತೀಚೆಗೆ ನಡೆದ ಲ್ಯಾಕೊಸ್ಟೆ ಡಿ ಫ್ರಾನ್ಸ್ ಟೂರ್ನಿಯಲ್ಲಿ ಮೂರನೇ ಸ್ಥಾನ ಗಳಿಸಿದ್ದರು.

ಫೆಡರರ್ ವಿದಾಯಕ್ಕೆ ವೇದಿಕೆ ಸಿದ್ಧ

ಲಂಡನ್ (ಎಎಫ್‌ಪಿ): ದಿಗ್ಗಜ ಆಟಗಾರ ರೋಜರ್ ಫೆಡರರ್ ವೃತ್ತಿಪರ ಟೆನಿಸ್‌ನಿಂದ ನಿವೃತ್ತಿ ಪಡೆಯುವುದಾಗಿ ಈಚೆಗೆ ಘೋಷಿಸಿದರು. ಶುಕ್ರವಾರ ಆರಂಭವಾಗಲಿರುವ ಲೇವರ್ ಕಪ್ ಟೆನಿಸ್ ಟೂರ್ನಿಯಲ್ಲಿ ಅವರು ಕೊನೆಯ ಬಾರಿಗೆ ಕಣಕ್ಕಿಳಿಯುವರು.

ನಂತರ ಟೆನಿಸ್ ಟೂರ್ ಟೂರ್ನಿಗಳಿಗೆ ವಿದಾಯ ಹೇಳಲಿದ್ದಾರೆ. ಆದ್ದರಿಂದಾಗಿಯೇ ಈ ಲೇವರ್ ಕಪ್ ಟೂರ್ನಿಯು ಈಗ ವಿಶ್ವದ ಗಮನ ಸೆಳೆದಿದೆ.

ಅಭಿಮಾನಿಗಳು, ಬೇರೆ ಬೇರೆ ದೇಶದ ಟೆನಿಸ್ ಪಟುಗಳು ಫೆಡರರ್ ಅವರಿಗೆ ಭಾವನಾತ್ಮಕವಾದ ಬೀಳ್ಕೊಡುಗೆ ನೀಡಲು ಸಿದ್ಧರಾಗಿದ್ದಾರೆ.

ಸ್ವಿಟ್ಜರ್‌ಲೆಂಡ್‌ನ ದಿಗ್ಗಜ ಆಟಗಾರ ಫೆಡರರ್ ವಿದಾಯಕ್ಕೆ ಮತ್ತೊಬ್ಬ ದಿಗ್ಗಜ ಆಟಗಾರ ಸ್ಪೇನ್‌ನ ರಫೆಲ್ ನಡಾಲ್ ಸಾಕ್ಷಿಯಾಗಲಿದ್ದಾರೆ. ಮೂರುದಿನಗಳ ಈ ವಿಕೆಂಡ್ ಟೂರ್ನಿಯಲ್ಲಿ ಫೆಡರರ್ ಆಟವನ್ನು ಕಣ್ತುಂಬಿಕೊಳ್ಳಲು ಅಭಿಮಾನಿಗಳು ಸಿದ್ಧರಾಗಿದ್ದರೆ, ಅವರ ಮುಂದೆ ಆಡಲು ನಡಾಲ್ ಕೂಡ ತಯಾರಾಗಿದ್ದಾರೆ. ಸರ್ಬಿಯಾದ ನೊವಾಕ್ ಜೊಕೊವಿಚ್, ಬ್ರಿಟನ್‌ನ ಆ್ಯಂಡಿ ಮರೆ, ಕ್ಯಾಸ್ಪರ್ ರೂಡ್ ಹಾಗೂ ಸ್ಟೆಫಾನೊಸ್ ಸಿಟ್ಸಿಪಾಸ್ ಕೂಡ ಕಣದಲ್ಲಿದ್ದಾರೆ.


ರಫೆಲ್ ನಡಾಲ್ ಹಾಗೂ ರೋಜರ್ ಫೆಡರರ್

ಫೆಡರರ್, ನಡಾಲ್ ಹಾಗೂ ಜೊಕೊವಿಚ್ ಅವರು ತಲಾ 20ಕ್ಕೂ ಹೆಚ್ಚು ಗ್ರ್ಯಾನ್‌ಸ್ಲಾಂ ಗೆದ್ದ ಆಟಗಾರರು.

ಫೆಡರರ್ ನಿವೃತ್ತಿ ಕುರಿತು ಮಾತನಾಡಿರುವ ಭಾರತದ ಮಾಜಿ ಆಟಗಾರ, ವೀಕ್ಷಕ ವಿವರಣೆಗಾರ ಸೋಮದೇವ್ ದೇವವರ್ಮನ್, ‘ಸ್ವಿಸ್ ಆಟಗಾರ ವೃತ್ತಿಜೀವನದ ಕೊನೆಯ ಪಂದ್ಯಗಳನ್ನು ವೀಕ್ಷಿಸುವುದು ಭಾವನಾತ್ಮಕವಾದದ್ದು. ಅವರಂತಹ ಆಟಗಾರ ಯುಗಕ್ಕೊಬ್ಬರೇ. ಅವರಿಗೆ ಅವರೇ ಸಾಟಿ. ಆಟಗಾರನಾಗಿ ಹಾಗೂ ವ್ಯಕ್ತಿಯಾಗಿ ನಿಜಕ್ಕೂ ಶ್ರೇಷ್ಠರು. ಅವರು ಯುವ ಸಮುದಾಯಕ್ಕೆ ಆದರ್ಶಪ್ರಾಯ’ ಎಂದಿದ್ದಾರೆ.

ಮಹಿಳಾ ಏಷ್ಯಾಕಪ್ ಟಿ20 ಕ್ರಿಕೆಟ್: ರಾಜೇಶ್ವರಿಗೆ ಸ್ಥಾನ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಮಹಿಳೆಯರ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಭಾರತ ತಂಡವನ್ನು ಹರ್ಮನ್‌ಪ್ರೀತ್ ಕೌರ್ ಮುನ್ನಡೆಸಲಿದ್ದಾರೆ. ಕರ್ನಾಟಕದ ರಾಜೇಶ್ವರಿ ಗಾಯಕವಾಡ ಅವರು ಈ ಬಳಗದಲ್ಲಿ ಸ್ಥಾನ ಗಳಿಸಿದ್ದಾರೆ.

ಅಕ್ಟೋಬರ್ 1ರಿಂದ 15ರವರೆಗೆ ಟೂರ್ನಿ ನಡೆಯಲಿದೆ. ಈಚೆಗೆ ಇಂಗ್ಲೆಂಡ್‌ನಲ್ಲಿ ಆಡಿದ ಟಿ20 ತಂಡವನ್ನೇ ಇಲ್ಲಿ ಉಳಿಸಿಕೊಳ್ಳಲಾಗಿದೆ. ಕೌರ್ ಬಳಗವು ಏಷ್ಯಾ ಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಎದುರಿಸಲಿದೆ. ಅ.7ರಂದು ಪಾಕಿಸ್ತಾನ ವಿರುದ್ಧ ಆಡಲಿದೆ.

ಬಿಸಿಸಿಐ ಮಹಿಳಾ ಕ್ರಿಕೆಟ್ ಆಯ್ಕೆ ಸಮಿತಿಯು ತಂಡವನ್ನು ಆಯ್ಕೆ ಮಾಡಿದೆ. ಕಾರ್ಯದರ್ಶಿ ಜಯ್ ಶಾ ಪ್ರಕಟಿಸಿದ್ದಾರೆ.



ರಾಜೇಶ್ವರಿ ಗಾಯಕವಾಡ

ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ದೀಪ್ತಿ ಶರ್ಮಾ, ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ಸಬಿನೆನಿ ಮೇಘನಾ, ರಿಚಾ ಘೋಷ್ (ವಿಕೆಟ್‌ಕೀಪರ್), ಸ್ನೇಹಾ ರಾಣಾ, ದಯಾಳನ್ ಹೇಮಲತಾ, ಮೇಘನಾ ಸಿಂಗ್, ರೇಣುಕಾ ಠಾಕೂರ್, ಪೂಜಾ ವಸ್ತ್ರಕರ್, ರಾಜೇಶ್ವರ್ ಗಾಯಕವಾಡ, ರಾಧಾ ಯಾದವ್, ಕೆ.ಪಿ. ನವಗಿರೆ.

ಮೀಸಲು: ತಾನಿಯಾ ಭಾಟಿಯಾ, ಸಿಮ್ರನ್ ದಿಲ್ ಬಹಾದ್ದೂರ್.

ಟಿ20 ರ್‍ಯಾಂಕಿಂಗ್: ಆಲ್‌ರೌಂಡರ್‌ಗಳಲ್ಲಿ ಹಾರ್ದಿಕ್‌ಗೆ ಬಡ್ತಿ

ಬಾಬರ್ ಹಿಂದಿಕ್ಕಿದ ಸೂರ್ಯ

ದುಬೈ (ಪಿಟಿಐ): ಭಾರತ ತಂಡದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ ಟಿ20 ವಿಭಾಗದಲ್ಲಿ ಮೂರನೇ ಸ್ಥಾನಕ್ಕೇರಿದ್ದಾರೆ. ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಅವರನ್ನು ಹಿಂದಿಕ್ಕಿದ್ದಾರೆ.

ಮಂಗಳವಾರ ಆಸ್ಟ್ರೇಲಿಯಾ ಎದುರು ನಡೆದ ಟಿ20 ಪಂದ್ಯದಲ್ಲಿ ಸೂರ್ಯ 46 ರನ್ ಗಳಿಸಿದ್ದರು. ಆದರೆ ಈ ಪಂದ್ಯದಲ್ಲಿ ಭಾರತ ತಂಡವು 4 ವಿಕೆಟ್‌ಗಳಿಂದ ಸೋತಿತು.

ಒಟ್ಟು 780 ಅಂಕಗಳನ್ನು ಹೊಂದಿರುವ ಸೂರ್ಯ ಒಂದು ಸ್ಥಾನದಲ್ಲಿ ಬಡ್ತಿ ಪಡೆದಿದ್ದಾರೆ. 771 ಅಂಕಗಳನ್ನು ಗಳಿಸಿರುವ ಆಜಂ ನಾಲ್ಕನೇ ಸ್ಥಾನಕ್ಕಿಳಿದಿದ್ದಾರೆ. ಪಾಕ್ ತಂಡದ ಬ್ಯಾಟರ್ ಮೊಹಮ್ಮದ್ ರಿಜ್ವಾನ್ (825) ಅಗ್ರಸ್ಥಾನದಲ್ಲಿದ್ದಾರೆ.



ಸೂರ್ಯಕುಮಾರ್ ಯಾದವ್

ದಕ್ಷಿಣ ಆಫ್ರಿಕಾದ ಏಡನ್ ಮರ್ಕರಂ (792) ಎರಡನೇ ಸ್ಥಾನದಲ್ಲಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಆಸ್ಟ್ರೇಲಿಯಾದ ವೇಗಿ ಜೋಶ್ ಹ್ಯಾಜಲ್‌ವುಡ್ (785) ಅಗ್ರಸ್ಥಾನದಲ್ಲಿದ್ದಾರೆ. ಭಾರತದ ಭುವನೇಶ್ವರ್ ಕುಮಾರ್ (673) ಅವರು ಏಳನೇ ಸ್ಥಾನದಿಂದ ಒಂಬತ್ತಕ್ಕೆ ಇಳಿದಿದ್ದಾರೆ. ಸ್ಪಿನ್ನರ್ ಯಜುವೇಂದ್ರ ಚಾಹಲ್ 28ನೇ ಸ್ಥಾನಕ್ಕೆ ಕುಸಿದಿದ್ದಾರೆ. ಅಕ್ಷರ್ ಪಟೇಲ್ ಒಟ್ಟು 25 ಹಂತಗಳ ಬಡ್ತಿ ಪಡೆದು 33ನೇ ಸ್ಥಾನಕ್ಕೇರಿದ್ದಾರೆ.

ಆಲ್‌ರೌಂಡರ್ ವಿಭಾಗದಲ್ಲಿ ಭಾರತದ ಹಾರ್ದಿಕ್ ಪಾಂಡ್ಯ ಏಳನೇ ಸ್ಥಾನದಿಂದ ಐದನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ. ಅವರು ಆಸ್ಟ್ರೇಲಿಯಾ ಎದುರಿನ ಸರಣಿಯ ಮೊದಲ ಪಂದ್ಯದಲ್ಲಿ ಅಮೋಘ ಬ್ಯಾಟಿಂಗ್ ಮಾಡಿದ್ದರು. ಈ ವಿಭಾಗದಲ್ಲಿ ಬಾಂಗ್ಲಾದೇಶದ ಶಕೀಬ್ ಅಲ್ ಹಸನ್ (248) ಅಗ್ರಸ್ಥಾನದಲ್ಲಿದ್ದಾರೆ. ಅಫ್ಗಾನಿಸ್ತಾನದ ಮೊಹಮ್ಮದ್ ನಬಿ ಎರಡು ಹಾಗೂ ಇಂಗ್ಲೆಂಡ್‌ನ ಮೋಯಿನ್ ಅಲಿ ಮೂರನೇ ಸ್ಥಾನದಲ್ಲಿದ್ದಾರೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್: ಓವಲ್, ಲಾರ್ಡ್ಸ್‌ನಲ್ಲಿ ಫೈನಲ್

ದುಬೈ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ 2023 ಹಾಗೂ 2025ರ ಫೈನಲ್ ಪಂದ್ಯಗಳು ಕ್ರಮವಾಗಿ ದ ಓವರ್ ಮತ್ತು ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆಯಲಿವೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಬುಧವಾರ ಈ ವಿಷಯ ಪ್ರಕಟಿಸಿದೆ.

‘ಮುಂದಿನ ವರ್ಷದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಆಯೋಜನೆ ಮಾಡುತ್ತಿರುವುದು ಸಂತಸದ ವಿಷಯ. ದ ಓವಲ್ ಕ್ರೀಡಾಂಗಣವು ಭವ್ಯ ಇತಿಹಾಸ ಹೊಂದಿದೆ. ಅಲ್ಲಿ ನಡೆಯುವ ಫೈನಲ್ ಪಂದ್ಯವೂ ವೈಭವಯುತವಾಗಿ ಇರುವುದು ಖಚಿತ’ ಎಂದು ಐಸಿಸಿ ಮುಖ್ಯ ಕಾರ್ಯನಿರ್ವಾಹಕ ಜೆಫ್ ಅಲರ್‌ಡೈಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



‘ಕಳೆದ ಬಾರಿಯ ಟೂರ್ನಿಯ ಫೈನಲ್ ಪಂದ್ಯವು ಸೌತಾಂಪ್ಟನ್‌ನಲ್ಲಿ ನಡೆದಿತ್ತು. ಭಾರತ ತಂಡದ ವಿರುದ್ಧ ನ್ಯೂಜಿಲೆಂಡ ಜಯಿಸಿತ್ತು. ಕ್ರಿಕೆಟ್ ಅಭಿಮಾನಿಗಳು ಮುಂಬರುವ ಫೈನಲ್‌ಗಾಗಿ ಕಾತರದಿಂದ ಎದುರು ನೋಡುತ್ತಿದ್ದಾರೆ’ ಎಂದು ಜೆಫ್ ಹೇಳಿದ್ದಾರೆ.

ಎರಡನೇ ಆವೃತ್ತಿ ಟೆಸ್ಟ್ ಚಾಂಪಿಯನ್‌ಷಿಪ್ ಆಗಸ್ಟ್ 4ರಿಂದ ಆರಂಭವಾಗಿದೆ. ಮುಂದಿನ ವರ್ಷ ಮಾರ್ಚ್ 31ರಂದು ಮುಕ್ತಾಯವಾಗಲಿದೆ. ಸದ್ಯದ ಡಬ್ಲ್ಯುಬಿಸಿ ಪಾಯಿಂಟ್ ಪಟ್ಟಿಯಲ್ಲಿ ಆಸ್ಟ್ರೇಲಿಯಾ ಹಾಗೂ ದಕ್ಷಿಣ ಆಫ್ರಿಕಾ ತಂಡಗಳು ಅಗ್ರಸ್ಥಾನಗಳಲ್ಲಿವೆ.

ಚೆಸ್:2ನೇ ಸ್ಥಾನಕ್ಕೆ ಅರ್ಜುನ್

ನ್ಯೂಯಾರ್ಕ್ (ಪಿಟಿಐ): ಭಾರತದ ಅರ್ಜುನ್ ಎರಿಗೈಸಿ ಮತ್ತು ಆರ್. ಪ್ರಗ್ನಾನಂದ ಅವರು ಜೂಲಿಯಸ್ ಬಾರ್ ಜೆನರೇಷನ್ ಕಪ್ ಚೆಸ್ ಟೂರ್ನಿಯ ಪ್ರಿಲಿಮನರಿ ಹಂತದ 12ನೇ ಸುತ್ತಿನ ಅಂತ್ಯಕ್ಕೆ ಕ್ರಮವಾಗಿ ಎರಡು ಮತ್ತು ನಾಲ್ಕನೇ ಸ್ಥಾನಗಳಲ್ಲಿದ್ದರು.

ವಿಶ್ವ ಚಾಂಪಿಯನ್, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ 25 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನದಲ್ಲಿದ್ದರೆ, ಎರಿಗೈಸಿ 24 ಪಾಯಿಂಟ್ಸ್ ಕಲೆಹಾಕಿದ್ದಾರೆ. ಚೀನಾದ ಕ್ವಾಂಗ್ ಲಿಯೆಮ್ ಲಿ (20) ಮೂರನೇ ಸ್ಥಾನದಲ್ಲಿದ್ದರು.

19 ವರ್ಷದ ಅರ್ಜುನ್, ಟೂರ್ನಿಯ ಮೂರನೇ ದಿನವಾದ ಬುಧವಾರ ಗೆಲುವಿನೊಂದಿಗೆ ಅಭಿಯಾನ ಆರಂಭಿಸಿದರು. ಮೊದಲ ಪಂದ್ಯದಲ್ಲಿ ಉಕ್ರೇನ್‌ನ ವಾಸಿಲ್ ಇವಾಂಚುಕ್ ಅವರನ್ನು ಪರಾಭವಗೊಳಿಸಿದರು. ಎರಡನೇ ಪಂದ್ಯ ಅಂದರೆ 10ನೇ ಸುತ್ತಿನಲ್ಲಿ ಪೋಲೆಂಡ್‌ನ ಜಾನ್ ಕ್ರಿಸ್ಟಾಫ್ ಡುಡಾ ಎದುರು ಸೋಲನುಭವಿಸಿದರು. ಬಳಿಕ 11ನೇ ಸುತ್ತಿನಲ್ಲಿ ಇಸ್ರೇಲ್ ಆಟಗಾರ ಬೋರಿಸ್ ಗೆಲ್‌ಫಾಂಡ್ ಅವರೊಂದಿಗೆ ಡ್ರಾ ಸಾಧಿಸಿದರೆ, ದಿನದ ಕೊನೆಯ ಸುತ್ತಿನಲ್ಲಿ ಅರ್ಜುನ್ ಅವರಿಗೆ, ಅಮೆರಿಕದ ಕ್ರಿಸ್ಟೊಫರ್ ಯೊ ಎದುರು ಜಯ ಒಲಿಯಿತು.

ಟೂರ್ನಿಯ ಎರಡನೇ ದಿನ ಮೂರು ಸುತ್ತುಗಳಲ್ಲಿ ಗೆಲುವು ಕಂಡಿದ್ದ ಪ್ರಗ್ನಾನಂದ, ಬುಧವಾರ ನಾಲ್ಕು ಪಂದ್ಯಗಳಲ್ಲಿ ಡ್ರಾ ಸಾಧಿಸುವಲ್ಲಿ ಮಾತ್ರ ಯಶಸ್ವಿಯಾದರು. ಭಾರತದ ಬಿ.ಅಧಿಬನ್, ಲಿಯೆಮ್ ಲಿ, ಡೇವಿಡ್ ನವಾರ (ಜೆಕ್ ಗಣರಾಜ್ಯ) ಮತ್ತು ಅಮೆರಿಕದ ಹಾನ್ಸ್ ನೀಮನ್ ಅವರೊಂಗಿದಿನ ಪಂದ್ಯಗಳಲ್ಲಿ ಪಾಯಿಂಟ್ಸ್ ಹಂಚಿಕೊಂಡರು.

ಕಾರ್ಲ್‌ಸನ್ ಅವರು ಆಡಿದ ನಾಲ್ಕರ ಪೈಕಿ ಮೂರು ಪಂದ್ಯಗಳಲ್ಲಿ ಜಯಭೇರಿ ಮೊಳಗಿಸಿದರು. ಅಧಿಬನ್ ಅವರು ಕ್ರೊವೇಷ್ಯಾದ ಇವಾನ್ ಸಾರಿಚ್ ಎದುರು ಗೆದ್ದು ಟೂರ್ನಿಯಲ್ಲಿ ಮೊದಲ ಜಯ ಸಂಪಾದಿಸಿದರೂ ಸದ್ಯ ಅವರು 15ನೇ ಸ್ಥಾನದಲ್ಲಿದ್ದಾರೆ.

ಪ್ರಿಲಿಮನರಿ ಹಂತದಲ್ಲಿ ಇನ್ನೂ ಮೂರು ಸುತ್ತುಗಳ ಆಟ ಬಾಕಿಯಿದೆ.

ಫುಟ್‌ಬಾಲ್: ಇಂಡಿಪೆಂಡೆಂಟ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಬೆಂಗಳೂರು ಇಂಡಿಪೆಂಡೆಂಟ್ಸ್ 6–1ರಿಂದ ಬೆಂಗಳೂರು ಈಗಲ್ಸ್ ವಿರುದ್ಧ ಗೆದ್ದಿತು. ವಿಜೇತ ತಂಡದ ಪರ 24ನೇ ನಿಮಿಷದಲ್ಲಿ ಮಿಂಕೆಲ್ ಸಿಲ್ವಾ ಪೆನಾಲ್ಟಿ ಅವಕಾಶದಲ್ಲಿ ಮೊದಲ ಗೋಲು ದಾಖಲಿಸಿದರು. ಸೂರ್ಯ ಯು.ಕೆ. (44ನೇ ನಿ.) ತಂಡದ ಮುನ್ನಡೆಯನ್ನು ಹೆಚ್ಚಿಸಿದರು. ಎದುರಾಳಿ ತಂಡದ ಬ್ರಿಟ್ಟೊ ಕಾರ್ಲೊಸ್ (45 + 3ನೇ ನಿ.) ಇಂಡಿಪೆಂಡೆಂಟ್ಸ್‌ಗೆ ಗೋಲಿನ ‘ಉಡುಗೊರೆ‘ ನೀಡಿದರು. ಬಳಿಕ ಸತೀಶ್ ಕುಮಾರ್ (63ನೇ ನಿ.), ಮುಜಾಮಿರಿ ಅಬ್ದುಲ್ಲಾ ತಂಗಾ (69ನೇ ನಿ.) ಮತ್ತು ನರೇಂದ್ರ ಪ್ರಸಾದ್ (78ನೇ ನಿ.) ವಿಜೇತ ತಂಡಕ್ಕೆ ಗೋಲು ಗಳಿಸಿಕೊಟ್ಟರು.

ಈಗಲ್ಸ್ ಪರ 89ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶವನ್ನು ಗೋಲಾಗಿಸಿದ ಅಜಿತ್ ಆರ್. ತಂಡದ ಹಿನ್ನಡೆಯನ್ನು ಸ್ವಲ್ಪ ತಗ್ಗಿಸಿದರು.

ಮತ್ತೊಂದು ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ 5–0ಯಿಂದ ಎಡಿಇ ಎಫ್‌ಸಿ ತಂಡಕ್ಕೆ ಸೋಲುಣಿಸಿತು. ಕಿಕ್‌ಸ್ಟಾರ್ಟ್ ತಂಡಕ್ಕಾಗಿ ಜಿಜೊ ಜೋಸೆಫ್ (14ನೇ ನಿ.), ಅಭಿಷೇಕ್ ಶಾನೇರ್ ಪೊವರ್ (32ನೇ ನಿ.), ಶೆಲ್ಟನ್ ಪಾಲ್ (34ನೇ ನಿ.),


ಚೆಂಡನ್ನು ಕಿಕ್ ಮಾಡಿದ ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್‌ನ ಶೆಲ್ಟನ್ ಪಾಲ್ ಎಂ.
– ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಪ್ರಿನ್ಸ್‌ವೆಲ್ ಎಮೆಕಾ ಒಲಾರಿಚೆ (81ನೇ ನಿ.) ಮತ್ತು ಅಕ್ಷಯ್ ಕುಮಾರ್ ದೋಸಪತಿ (86ನೇ ನಿ.) ಗೋಲು ಹೊಡೆದರು.

ಇನ್ನೊಂದು ಸೆಣಸಾಟದಲ್ಲಿ ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ 1–1ರಿಂದ ಥಾಂಕೊಸ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು. ಫ್ರೆಂಡ್ಸ್ ಪರ ಮಗೇಶ್ ಸಿಲ್ವಾ (7ನೇ ನಿ.) ಮತ್ತು ಥಾಂಕೊಸ್ ತಂಡಕ್ಕಾಗಿ ಜಾಯ್ ಕನನಿ (37ನೇ ನಿ.) ಕಾಲ್ಚಳಕ ತೋರಿದರು.